ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 3 ಶುಕ್ರವಾರ 2023

ಸಂಪುಟ: 43 | ಸಂಚಿಕೆ: 313 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಹತ್ತೇ ನಿಮಿಷದಲ್ಲಿ ಆಸ್ತಿ ನೋಂದಣಿ

● ಕಾವೇರಿ–2 ತಂತ್ರಾಂಶಕ್ಕೆ ಸರ್ಕಾರದ ಚಾಲನೆ; ಆಸ್ತಿ ಕಬಳಿಕೆ, ಅಕ್ರಮಕ್ಕೆ ಪೂರ್ಣ ಬ್ರೇಕ್
● ಎಲ್ಲಾ ದಾಖಲಾತಿಯನ್ನು ಮನೆಯಲ್ಲೇ ಕೂತು ಸಿದ್ಧಪಡಿಸಿಕೊಂಡು ನಿಗದಿತ ಸಮಯಕ್ಕೆ ಉಪನೋಂದಣಿ ಕಚೇರಿಗೆ ಬಂದರೆ ಹತ್ತೇ ನಿಮಿಷಕ್ಕೆ ಕೆಲಸ ಪೂರ್ಣ
● ಮಧ್ಯವರ್ತಿಗಳ ಹಾವಳಿ, ಭ್ರಷ್ಟಾಚಾರ ತಡೆಗೆ ರಾಜ್ಯ ಸರ್ಕಾರದ ಮಹತ್ವದ ಹೆಜ್ಜೆ

ಬೆಂಗಳೂರು, ಮಾ.2(ಕೆಎಂಶಿ)– ಮಧ್ಯವರ್ತಿಗಳ ಹಾವಳಿ ಹತ್ತಿಕ್ಕಿ, ಭ್ರಷ್ಟಾಚಾರಕ್ಕೆ ಇತಿಶ್ರೀ ಹಾಡಿ ಕೇವಲ 10 ನಿಮಿಷಗಳಲ್ಲೇ ಆಸ್ತಿ ನೋಂದಣಿ ಮಾಡುವ ಕಾವೇರಿ–2 ತಂತ್ರಾಂಶಕ್ಕೆ ರಾಜ್ಯ ಸರ್ಕಾರ ಚಾಲನೆ ನೀಡಿದೆ.



ಇನ್ನು ಮೂರು ತಿಂಗಳಲ್ಲಿ ರಾಜ್ಯಾದ್ಯಂತ ಹೊಸ ತಂತ್ರಾಂಶ ಜಾರಿಗೊಳ್ಳಲಿದ್ದು, ಆಸ್ತಿ ನೋಂದಣಿ ಮಾಡಿಕೊಳ್ಳುವವರು ಮನೆಯಲ್ಲೇ ಕುಳಿತು, ಪ್ರಕ್ರಿಯೆ ಮುಗಿಸುವ ವ್ಯವಸ್ಥೆ ಇದಾಗಿದೆ. ಸುದ್ದಿಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಕಂದಾಯ ಸಚಿವ ಆರ್.ಅಶೋಕ್, ನೋಂದಣಿ ವ್ಯವಸ್ಥೆಯಲ್ಲಿನ ಸಮಸ್ಯೆ ಪರಿಹರಿಸಿ, ಹೊಸ ನವೀನ, ನಾಗರಿಕ ಸ್ನೇಹಿ, ವಂಚನೆ ರಹಿತ ಕಾವೇರಿ–2 ತಂತ್ರಾಂಶ ಅಭಿವೃದ್ಧಿಪಡಿಸಿದೆ. ಈ ತಂತ್ರಾಂಶ ಈಗಾಗಲೇ ಪ್ರಾಯೋಗಿಕವಾಗಿ ಕೆಲ ಜಿಲ್ಲೆಗಳಲ್ಲಿ ಜಾರಿಗೆ ತಂದು ಯಶಸ್ವಿಯೂ ಆಗಿದ್ದು, ಮುಂದಿನ ಕೆಲವೇ ದಿನಗಳಲ್ಲಿ ರಾಜ್ಯಾದ್ಯಂತ ಜಾರಿಗೊಳ್ಳಲಿದೆ ಎಂದರು.

ನೋಂದಣಿ ಪ್ರಕ್ರಿಯೆಯು ಸಂಪೂರ್ಣ ಆನ್‌ಲೈನ್ ಮತ್ತು ಸಂಪರ್ಕ ರಹಿತವಾಗಿರುತ್ತದೆ. ನಾಗರಿಕರು, ನೋಂದಣಿ ಕಚೇರಿಗೆ ಹಾಜರಾಗುವ ಮೊದಲೇ ಎಲ್ಲಾ ಡೇಟಾ ಮತ್ತು ದಾಖಲಾತಿಗಳನ್ನು ಆನ್‌ಲೈನ್ ಅಪ್‌ಲೋಡ್ ಮಾಡಿ, ಉಪನೋಂದಣಿ ಅಧಿಕಾರಿಗಳ ಪರಿಶೀಲನೆಗೆ ಸಲ್ಲಿಸಿ, ಪರಿಶೀಲಿಸಿದ ದಾಖಲೆಗಳನ್ನು ನಾಗರಿಕರಿಗೆ ನಿಗದಿತ ಶುಲ್ಕ ಪಾವತಿಸಲು ವ್ಯವಸ್ಥೆ ಮಾಡಲಾಗಿದೆ. ▶ 8ನೇ ಪುಟಕ್ಕೆ


ಈ ಬಾರಿಯ ವಿಧಾನಸಭಾ ಚುನಾವಣೆ ಜೆಡಿಎಸ್, ಕಾಂಗ್ರೆಸ್, ಬಿಜೆಪಿ ಭವಿಷ್ಯ ನಿರ್ಧರಿಸುತ್ತದೆ...

● ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅಭಿಮತ
● ಮೈಸೂರಲ್ಲಿ ಪತ್ರಿಕಾ ಸಂವಾದದಲ್ಲಿ ಮುಕ್ತ ಮಾತುಕತೆ ● 'ಮೈತ್ರಿ' ಸರ್ಕಾರದ ಕಾಂಗ್ರೆಸ್ 'ದೋಖಾ' ಪ್ರಸಂಗ ವಿವರಣೆ

ಮೈಸೂರು, ಮಾ.2(ಎಸ್‌ಬಿಡಿ)– ಮುಂದಿನ ಸಾರ್ವತ್ರಿಕ ಚುನಾವಣೆ ಮೂರೂ ಪಕ್ಷಗಳಿಗೆ ಅಗ್ನಿಪರೀಕ್ಷೆ. ಅದರ ಫಲಿತಾಂಶ ಪಕ್ಷಗಳ ರಾಜಕೀಯ ಭವಿಷ್ಯವನ್ನು ನಿರ್ಧರಿಸುತ್ತದೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಅಭಿಪ್ರಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಲ್ಲಿ ಗುರುವಾರ ಆಯೋಜಿಸಿದ್ದ ಸಂವಾದದಲ್ಲಿ ಮಾತನಾಡಿ, ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದ ಅನುಭವವನ್ನು ಮುಕ್ತವಾಗಿ ಹಂಚಿಕೊಂಡರಲ್ಲದೆ, ಪ್ರತಿಪಕ್ಷಗಳ ನಾಯಕರ ಆರೋಪ, ಟೀಕೆ–ಟಿಪ್ಪಣಿಗೂ ಪ್ರತ್ಯುತ್ತರ ನೀಡಿದರು.

ಮಾ.20ರಿಂದ 30 ರೊಳಗೆ ಚುನಾವಣಾ ದಿನಾಂಕ ಘೋಷಣೆಯಾಗಬಹುದು. ಈ ಹಿನ್ನೆಲೆಯಲ್ಲಿ ಎಲ್ಲಾ ಪಕ್ಷಗಳಂತೆ ನಮ್ಮ ಪಕ್ಷವೂ ದೊಡ್ಡ ಮಟ್ಟದ ಸಿದ್ಧತೆ ಮಾಡಿಕೊಂಡಿದೆ. ಒಂದು ಕಾಲದಲ್ಲಿ ಜೆಡಿಎಸ್ ಪಕ್ಷ ಐಸಿಯುನಲ್ಲಿದೆ, ಶಕ್ತಿ ಉಳಿದಿಲ್ಲ. 10–15 ಸ್ಥಾನ ಗೆಲ್ಲುವುದು ಕಷ್ಟ. ಹಲವರು ಜೆಡಿಎಸ್‌ಗೆ ಗುಡ್ ಬೈ ಹೇಳಿ ಶಾಕ್ ನೀಡುತ್ತಾರೆ ಎಂದೆಲ್ಲಾ ನಿರಂತರವಾಗಿ ಹೇಳಿದ್ದಾರೆ. ಎರಡು ವರ್ಷದಿಂದ ಹೊರ ನೋಟಕ್ಕೆ ಜೆಡಿಎಸ್‌ನಲ್ಲಿ ಇರುವ 2–3 ಮಂದಿ ನಾಲ್ಕೈದು ದಿನದಲ್ಲಿ ಹೊರ ಹೋಗಬಹುದು. ಅದಕ್ಕೇನು ಹೆಚ್ಚಿನ ಪ್ರಾಮುಖ್ಯತೆ ನೀಡುವುದಿಲ್ಲ. ಆದರೆ ಮುಂಬರುವ ಚುನಾವಣೆ ಜೆಡಿಎಸ್, ಕಾಂಗ್ರೆಸ್ ಹಾಗೂ ಬಿಜೆಪಿ ಮೂರೂ ಪಕ್ಷಗಳಿಗೂ ಅಗ್ನಿಪರೀಕ್ಷೆ. ಚುನಾವಣೆಯ ಫಲಿತಾಂಶ ಜೆಡಿಎಸ್ ಪಕ್ಷ ಮಾತ್ರವಲ್ಲ ಕಾಂಗ್ರೆಸ್ ಹಾಗೂ ಬಿಜೆಪಿ ರಾಜಕೀಯ



ಭವಿಷ್ಯವನ್ನೂ ನಿರ್ಧರಿಸಲಿದೆ. ಇದನ್ನು ಯಾವ ನಾಯಕರು ಒಪ್ಪುತ್ತಾರೋ ಇಲ್ಲವೋ. ಆದರೆ ಇದು ನನ್ನ ಸಣ್ಣ ರಾಜಕೀಯ ಅನುಭವದ ಅಭಿಪ್ರಾಯ ಎಂದು ಹೇಳಿದರು.

ಮೈತ್ರಿ ಸರ್ಕಾರದ ಅಸಲಿಯತ್ತು: ಮೈತ್ರಿ ಸರ್ಕಾರ ರಚನೆ ಮಾಡಿದಾಗ ನಾವೇನು ಯಾರ ಮನೆ ಬಾಗಿಲಿಗೂ ಹೋಗಿರಲಿಲ್ಲ. ಕಾಂಗ್ರೆಸ್ ನಾಯಕರು ಚುನಾವಣಾ ಪ್ರಚಾರದ ವೇಳೆ ಜೆಡಿಎಸ್, ಬಿಜೆಪಿಯ ಬಿ ಟೀಮ್ ಎಂದು ಅಪಪ್ರಚಾರ ಮಾಡಿದರು. ಕೆಲ ಧಾರ್ಮಿಕ ಗುರುಗಳ ಮೂಲಕ ರಹಸ್ಯವಾಗಿ ಜೆಡಿಎಸ್ ಬೆಂಬಲಿಸದಂತೆ ಸಂಘಟಿಸುವ ಕೆಲಸ ಮಾಡಿದರು. ಅದು ನಮಗೆ ತಿಳಿದಿರಲಿಲ್ಲ. ಕೆಲವು ನಿವೃತ್ತ ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳ ತಂಡ ಮಾಡಿ, ಅಲ್ಪಸಂಖ್ಯಾತರ ಮನಸ್ಸು ಕೆಡಿಸುವ ಪ್ರಯತ್ನ ಮಾಡಿದರು. ಅದರ ಪ್ರತಿಫಲವಾಗಿ ಬಿಜೆಪಿಗೆ 105 ಸ್ಥಾನ ಬಂದವು. ಫಲಿತಾಂಶ ಪ್ರಕಟವಾಗುವವರೆಗೆ ಕಾಯಿರಿ ಎಂದು ಹೇಳಿದರೂ ಕೇಳದೆ ಎಲೆಕ್ಟ್ರಿಕ್ ಟ್ರೇನ್ ಸ್ಪೀಡ್‌ನಲ್ಲಿ ದೂರವಾಣಿ ಕರೆ ಮಾಡಿ ಭೇಟಿ ಮಾಡಲೇಬೇಕು ಎಂದರು. ಕಾಂಗ್ರೆಸ್ ನಾಯಕರಾದ ಗುಲಾಮ್ ನಬಿ ಆಜಾದ್, ಗೆಹ್ಲೋಟ್, ವೇಣುಗೋಪಾಲ್ ದುಂಬಾಲು ಬಿದ್ದರು. ದೇವೇಗೌಡರ ಮೂಗು ಹಿಡಿದರು. ಸಂಜೆ ಅಶೋಕ ಹೋಟೆಲ್‌ನಲ್ಲಿ ನಡೆದ ಸಭೆಗೆ ನಾನು, ದೇವೇಗೌಡರು ಹೋಗಿದ್ದೆವು. ಸಿದ್ದರಾಮಯ್ಯ, ಮಲ್ಲಿಕಾರ್ಜುನ ಖರ್ಗೆ, ಪರಮೇಶ್ವರ್, ಡಿ.ಕೆ.ಶಿವಕುಮಾರ್ ಇದ್ದರು. ಆಗ 'ನನ್ನ ಮಗನ ಆರೋಗ್ಯ ಸರಿಯಿಲ್ಲ. ಕಾಂಗ್ರೆಸ್‌ನ ಯಾರಾದರೂ ಮುಖ್ಯಮಂತ್ರಿಯಾಗಲಿ ನಾವು ಬೇಷರತ್ತಾಗಿ ಬೆಂಬಲ ನೀಡುತ್ತೇವೆ' ಎಂದು ದೇವೇಗೌಡರು ಸ್ಪಷ್ಟವಾಗಿ ಹೇಳಿದರು. ಆದರೆ ಗುಲಾಮ್ ನಬಿ ಆಜಾದ್ ಇನ್ನಿತರ ನಾಯಕರು 'ಇಲ್ಲ ನಿಮ್ಮ ನೇತೃತ್ವದಲ್ಲೇ ಸರ್ಕಾರ ರಚಿಸಲು ಹೈಕಮಾಂಡ್ ತೀರ್ಮಾನಿಸಿ ಆಗಿದೆ. ನಾವೇ ಬೇಷರತ್ ಬೆಂಬಲ ನೀಡುತ್ತೇವೆ' ಎಂದಿದ್ದಾಗಿ ಕುಮಾರಸ್ವಾಮಿ ತಿಳಿಸಿದರು. ಸರ್ಕಾರ ರಚನೆ ಪ್ರಕ್ರಿಯೆ ▶ 8ನೇ ಪುಟಕ್ಕೆ



ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ನಂಜನಗೂಡಲ್ಲಿ ಹರ್ಷವರ್ಧನ್‌ಗೆ 30 ಸಾವಿರಕ್ಕೂ ಅಧಿಕ ಮತಗಳಿಂದ ಜಯ

ವಿಜಯ ಸಂಕಲ್ಪ ಯಾತ್ರೆಯಲ್ಲಿ ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಭವಿಷ್ಯ

ನಂಜನಗೂಡು, ಮಾ.2– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ನಂಜನಗೂಡು ಕ್ಷೇತ್ರದ ಹಾಲಿ ಶಾಸಕ ಬಿ.ಹರ್ಷವರ್ಧನ್ 30 ಸಾವಿರಕ್ಕೂ ಅಧಿಕ ಮತಗಳಿಂದ ಜಯ ಗಳಿಸಲಿದ್ದಾರೆ ಎಂದು ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಭವಿಷ್ಯ ನುಡಿದರು.

ಪಟ್ಟಣದಲ್ಲಿ ಬಿಜೆಪಿ ವಿಜಯ ಸಂಕಲ್ಪ ಯಾತ್ರೆಯಲ್ಲಿ ಭಾಗವಹಿಸಿ, ಶ್ರೀಕಂಠೇಶ್ವರ ಸ್ವಾಮಿ ದರ್ಶನ ಪಡೆದು ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ ಬಾರಿ ಹರ್ಷವರ್ಧನ್ 12 ಸಾವಿರ ಮತಗಳಿಂದ ಗೆಲುವು ಸಾಧಿಸಿದ್ದರು. ಆದರೆ ಈ ಬಾರಿ ಅವರಿಗೆ ಸಿಗುತ್ತಿರುವ ಅಭೂತಪೂರ್ವ ಜನಬೆಂಬಲ ನೋಡಿದರೆ 25ರಿಂದ 30 ಸಾವಿರ ಮತಗಳ ಅಂತರದಲ್ಲಿ ಗೆಲ್ಲುವುದರಲ್ಲಿ ಸಂಶಯವೇ ಇಲ್ಲ ಎಂದರು.

ಬಿಜೆಪಿ ವಿಜಯ ಸಂಕಲ್ಪ ಯಾತ್ರೆಗೆ ಅಭೂತಪೂರ್ವ ಬೆಂಬಲ ವ್ಯಕ್ತವಾಗಿರುವ ಕಾರಣ ಬಿಜೆಪಿ 150 ಸ್ಥಾನ ಗಳಿಸಿ ಅಧಿಕಾರ ಹಿಡಿಯಲಿದೆ. ಈ ಬಾರಿ ಹಳೇ ಮೈಸೂರು ಭಾಗದಲ್ಲಿ ಹೆಚ್ಚು ಕ್ಷೇತ್ರಗಳಲ್ಲಿ ಬಿಜೆಪಿ ಗೆಲುವು ಸಾಧಿಸಲಿದ್ದು, ಬೆರಳೆಣಿಕೆ ಕ್ಷೇತ್ರಗಳಲ್ಲಿ ಮಾತ್ರ ಗೆಲುವು ಸಾಧಿಸಲಿದೆ ಎಂಬ ಮಾತನ್ನು ಜನರು ಈ ಬಾರಿ ▶ 8ನೇ ಪುಟಕ್ಕೆ

ಜಿಪಂ, ತಾಪಂ ಚುನಾವಣೆ ಸಂಬಂಧ ಏ.1ರೊಳಗೆ ಮೀಸಲಾತಿ ಪಟ್ಟಿ ಪ್ರಕಟ

● ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ
● ಏಪ್ರಿಲ್ 11ಕ್ಕೆ ಮುಂದಿನ ವಿಚಾರಣೆ

ಬೆಂಗಳೂರು, ಮಾ.2(ಕೆಎಂಶಿ)– ತಾಲೂಕು ಮತ್ತು ಜಿಲ್ಲಾ ಪಂಚಾಯತ್ ಚುನಾವಣೆ ಕುರಿತು ಏಪ್ರಿಲ್ 1ರ ಒಳಗಾಗಿ ಮೀಸಲಾತಿ ಪಟ್ಟಿ ಪ್ರಕಟಿಸುವುದಾಗಿ ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿದೆ.

ಜಿಲ್ಲಾ ಹಾಗೂ ತಾಲೂಕು ಪಂಚಾಯತ್ ಕ್ಷೇತ್ರಗಳ ಗಡಿ ನಿರ್ಣಯ ಮತ್ತು ಮೀಸಲಾತಿ ನಿಗದಿಪಡಿಸುವ ಅಧಿಕಾರವನ್ನು, ರಾಜ್ಯ ಚುನಾವಣಾ ಆಯೋಗದಿಂದ ಹಿಂಪಡೆದು ಕರ್ನಾಟಕ ಪಂಚಾಯತ್‌ರಾಜ್ ಸೀಮಾ ನಿರ್ಣಯ ಆಯೋಗ ರಚಿಸಲು 'ಕರ್ನಾಟಕ ಪಂಚಾಯತ್ ರಾಜ್ ಮತ್ತು ಗ್ರಾಮ ಸ್ವರಾಜ್ ಕಾಯ್ದೆ'ಗೆ ಸರ್ಕಾರ ತಿದ್ದುಪಡಿ ತಂದಿತ್ತು. ಇದನ್ನು ಪ್ರಶ್ನಿಸಿ ರಾಜ್ಯ ಚುನಾವಣಾ ಆಯೋಗ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿತ್ತು. ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಪ್ರಸನ್ನ ಬಾಲಚಂದ್ರ ವರಾಳೆ ಮತ್ತು ನ್ಯಾಯಮೂರ್ತಿ ಅಶೋಕ್ ಎಸ್. ಕಿಣಗಿ ಅವರಿದ್ದ ನ್ಯಾಯಪೀಠಕ್ಕೆ ಸರ್ಕಾರದ ಪರ ಹಾಜರಾಗಿದ್ದ ಅಡ್ವೋಕೇಟ್ ಜನರಲ್ ಮಾಹಿತಿ ನೀಡಿದರು. ಅಲ್ಲದೆ, ಈಗಾಗಲೇ ಕ್ಷೇತ್ರ ಪುನರ್ ವಿಂಗಡಣೆಗೆ ಸಂಬಂಧಿಸಿದಂತೆ ಮಾರ್ಚ್ 1ರಂದು ಗೆಜೆಟ್ ನೋಟಿಫಿಕೇಷನ್ ಹೊರಡಿಸಲಾಗಿದೆ. ಜೊತೆಗೆ, ಬಿಬಿಎಂಪಿ ಚುನಾವಣೆಗೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಏಪ್ರಿಲ್ 1ರವರೆಗೆ ಕಾಲಾವಕಾಶ ನೀಡಿದೆ. ಅಷ್ಟರ ಒಳಗಾಗಿ ಮೀಸಲಾತಿ ಪಟ್ಟಿ ಸಿದ್ಧಪಡಿಸಿ, ಮುಂದಿನ ಕ್ರಮಕ್ಕಾಗಿ ರಾಜ್ಯ ಚುನಾವಣಾ ಆಯೋಗಕ್ಕೆ ಸಲ್ಲಿಸಲಾಗುವುದು ಎಂದು ವಿವರಿಸಿದರು. ಈ ಅಂಶ ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆಯನ್ನು ಏಪ್ರಿಲ್ 11ಕ್ಕೆ ಮುಂದೂಡಿತು.

ಮೇಲುಕೋಟೆ ಕ್ಷೇತ್ರದ ಬಹುನಿರೀಕ್ಷಿತ ದುದ್ದ ಏತ ನೀರಾವರಿ ಯೋಜನೆಗೆ ಇಂದು ಚಾಲನೆ

185 ಕೋಟಿ ವೆಚ್ಚದ ಈ ಮಹತ್ವದ ಯೋಜನೆಯಲ್ಲಿ ನನ್ನ ಪರಿಶ್ರಮವಿದೆ: ಶಾಸಕ ಸಿ.ಎಸ್.ಪುಟ್ಟರಾಜು



ಮಂಡ್ಯ, ಮಾ.2– ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಮಂಡ್ಯ ತಾಲೂಕಿನ ದುದ್ದ ಹೋಬಳಿಯ ಬಹುನಿರೀಕ್ಷಿತ ಏತ ನೀರಾವರಿ ಯೋಜನೆಗೆ ಸಣ್ಣ ನೀರಾವರಿ ಸಚಿವ ಜೆ.ಸಿ.ಮಾಧುಸ್ವಾಮಿ ಇಂದು ಚಾಲನೆ ನೀಡಲಿದ್ದಾರೆ ಎಂದು ಶಾಸಕ ಸಿ.ಎಸ್.ಪುಟ್ಟರಾಜು ತಿಳಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದುದ್ದ ಹೋಬಳಿಯ ಹಲವು ಗ್ರಾಮಗಳ 54 ಕೆರೆ ತುಂಬಿಸುವ ಹಾಗೂ ಕುಡಿಯುವ ನೀರಿನ ಯೋಜನೆ ಇದಾಗಿದ್ದು, ಶುಕ್ರವಾರ ಬೆಳಗ್ಗೆ 10 ಗಂಟೆಗೆ ಕಾಳೇನಹಳ್ಳಿಯಿಂದ ಲಿಫ್ಟ್ ಆರಂಭಿಸುವ ಮೂಲಕ ಯೋಜನೆಗೆ ಚಾಲನೆ ನೀಡಲಿದ್ದು, ಬಳಿಕ ಭುಗ ಗ್ರಾಮದಲ್ಲಿ ಕೆರೆಗೆ ಬಾಗಿನ ಅರ್ಪಿಸಿ ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು. ಮೈತ್ರಿ ಸರ್ಕಾರದಲ್ಲಿ ಸಣ್ಣ ನೀರಾವರಿ ಸಚಿವನಾಗಿದ್ದಾಗ ಈ ಯೋಜನೆ ಮಾಡಬೇಕೆಂಬ ಕನಸು ಕಂಡಿದ್ದೆ. ಆ ಸಂದರ್ಭ ಮುಖ್ಯಮಂತ್ರಿಯಾಗಿದ್ದ ಹೆಚ್.ಡಿ. ಕುಮಾರಸ್ವಾಮಿ ಅವರ ಬಳಿ ಈ ಬಗ್ಗೆ ಚರ್ಚಿಸಿದಾಗ ತಮ್ಮ ಮೊದಲ ಬಜೆಟ್‌ನಲ್ಲಿ 30 ಕೋಟಿ ಕಾಯ್ದಿರಿಸಿದ್ದರು. ಬಳಿಕ 144 ಕೋಟಿ ಹಂತ ಹಂತವಾಗಿ ಖರ್ಚಾಗಿದ್ದು, ಯೋಜನೆ ಪೂರ್ಣಗೊಳ್ಳುವ ವೇಳೆಗೆ 185 ಕೋಟಿ ಖರ್ಚಾಗಿದೆ ಎಂದು ವಿವರಿಸಿದರು. ಕಾವೇರಿ ಹಾಗೂ ಲೋಕಪಾವನಿ ನದಿ ಸಂಗಮವಾಗುವ ನಿಮಿಷಾಂಬ ದೇಗುಲದ ಮುಂಭಾಗ ಅಲ್ಲಿಂದ ನೀರೆತ್ತುವ ಯೋಜನೆ ಇದಾಗಿದ್ದು, ಅಲ್ಲಿಂದ ದುದ್ದ ಹೋಬಳಿಗೆ ನೀರು ಸರಬರಾಜಾಗಲಿದೆ ಎಂದರು.

ಕಳೆದೊಂದು ವಾರದಿಂದ 54 ಕೆರೆಗಳನ್ನು ತುಂಬಿಸುವ ಕುರಿತು ಟ್ರಯಲ್ ನಡೆಸಿ, ಬಹಳ ಉತ್ತಮ ರೀತಿಯಲ್ಲಿ ಯೋಜನೆ ಅನುಷ್ಠಾನವಾಗುತ್ತಿದೆ. ಹುಲಿಕೆರೆ ಭುಗದ ಹಲವಾರು ಕೆರೆಗಳಿಗೆ ನಾವು ಈಗಾಗಲೇ ನೀರು ತುಂಬಿಸಿದ್ದು, ಅಲ್ಲಿನ ಮಹದೇಶ್ವರ ದೇಗುಲದ ಬಳಿಯ ಕೆರೆಗೆ ಸಚಿವರು ಬಾಗಿನ ಅರ್ಪಿಸಲಿದ್ದಾರೆ. ಈ ನಿಟ್ಟಿನಲ್ಲಿ ಸ್ಥಳೀಯ ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂದು ಮನವಿ ಮಾಡಿದರು.

ಸಣ್ಣತನದ ರಾಜಕೀಯ ಬೇಡ: ಇನ್ನು ಈ ಯೋಜನೆಯನ್ನು ಕೆ.ಎಸ್.ಪುಟ್ಟಣ್ಣಯ್ಯ ಶಾಸಕರಾಗಿದ್ದಾಗ ತಂದಿದ್ದಾರೆ ▶ 8ನೇ ಪುಟಕ್ಕೆ

ಮೈಸೂರಿನಲ್ಲಿ ಮಾ.26ರಂದು ಪಂಚರತ್ನ ಯಾತ್ರೆ ಸಮಾರೋಪ ಸಮಾರಂಭ

● ದೇಶವೇ ಇತ್ತ ನೋಡುವಂತೆ ಬೃಹತ್ ಸಮಾವೇಶ ಮಾಡೋಣ ● 10 ಲಕ್ಷಕ್ಕೂ ಅಧಿಕ ಜನರ ಸೇರಿಸಲು ಎಲ್ಲರೂ ಜವಾಬ್ದಾರಿ ವಹಿಸಿ ● ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಸಲಹೆ; ಇಲವಾಲ ಇಲ್ಲವೇ ಬಂಡಿಪಾಳ್ಯ ಬಳಿ ಜಾಗ ನಿಗದಿ

ಮೈಸೂರು, ಮಾ.2(ಎಂಕೆ)-ಜೆಡಿಎಸ್ ಪಂಚರತ್ನ ರಥಯಾತ್ರೆಯ ಸಮಾರೋಪ ಸಮಾರಂಭವನ್ನು ಮಾ.26 ರಂದು ಮೈಸೂರಿನಲ್ಲಿ ನಡೆಸಲು ನಿರ್ಧರಿಸಲಾಗಿದ್ದು, 10 ಲಕ್ಷಕ್ಕೂ ಹೆಚ್ಚು ಜನರನ್ನು ಒಂದೆಡೆ ಸೇರಿಸುವ ಮೂಲಕ ಜೆಡಿಎಸ್ ಶಕ್ತಿ ಪ್ರದರ್ಶನಕ್ಕೆ ತೀರ್ಮಾನಿಸಲಾಯಿತು.

ಮೈಸೂರಿನ ಸೈಲೆಂಟ್ ಶೋರ್‌ನಲ್ಲಿ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವದಲ್ಲಿ ಸ್ಥಳೀಯ ಜೆಡಿಎಸ್ ಶಾಸಕರು, ಮುಖಂಡರು, ನಗರಪಾಲಿಕೆ ಸದಸ್ಯರು ಹಾಗೂ ಕಾರ್ಯಕರ್ತರೊಂದಿಗೆ ನಡೆದ ಸಭೆಯಲ್ಲಿ ಪಂಚರತ್ನ ರಥಯಾತ್ರೆಯ ಸಮಾರೋಪ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ಸಂಬಂಧ ಚರ್ಚೆ ನಡೆಸಲಾಯಿತು.

ಈ ವೇಳೆ ಮುಖಂಡರಿಂದ ಹಲವು ಸಲಹೆಗಳನ್ನು ಪಡೆದು ಮಾತನಾಡಿದ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ, ಈಗಾಗಲೇ 75 ವಿಧಾನಸಭಾ ಕ್ಷೇತ್ರಗಳಲ್ಲಿ ಪಂಚರತ್ನ ರಥಯಾತ್ರೆ ಪೂರ್ಣಗೊಂಡಿದ್ದು, ಮೈಸೂರು ಹಾಗೂ ಮಂಡ್ಯದಲ್ಲಿ ರಥಯಾತ್ರೆಯ ಸಮಾರೋಪ ಸಮಾರಂಭ ನಡೆಸಲು ನಿರ್ಧರಿಸಲಾಗಿದೆ. ಈ ನಿಟ್ಟಿನಲ್ಲಿ ಮಾ.26 ರಂದು ಮೈಸೂರಿನಲ್ಲಿ ಬೃಹತ್ ಕಾರ್ಯಕ್ರಮ ಆಯೋಜನೆಯಾಗಬೇಕು. ಕಾಂಗ್ರೆಸ್ ಹಾಗೂ ಬಿಜೆಪಿ ಹಿಂದೆಂದೂ ಮಾಡಿರದಂತಹ ರಾಷ್ಟ್ರಮಟ್ಟದಲ್ಲಿ ಗಮನ ಸೆಳೆಯುವ ಬೃಹತ್ ಸಮಾವೇಶ ಇದಾಗಬೇಕು. ಈ ಮೂಲಕ ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಜೆಡಿಎಸ್ ಶಕ್ತಿ ಏನೆಂಬುದನ್ನು ಸಾಬೀತು ಮಾಡಬೇಕಿದೆ. ಆದ್ದರಿಂದ ಪ್ರತಿಯೊಬ್ಬರು




ಜವಾಬ್ದಾರಿ ಅರಿತು ಕಾರ್ಯಪ್ರವೃತ್ತರಾಗುವಂತೆ ಕರೆ ನೀಡಿದರು.

ರಥಯಾತ್ರೆ ನಡೆದ 75 ವಿಧಾನಸಭಾ ಕ್ಷೇತ್ರಗಳಲ್ಲಿ ಒಂದೆರಡು ಕ್ಷೇತ್ರಗಳನ್ನು ಬಿಟ್ಟರೆ ಉಳಿದೆಲ್ಲಾ ಕ್ಷೇತ್ರಗಳಲ್ಲಿಯೂ ಜೆಡಿಎಸ್‌ಗೆ ಸ್ಪಷ್ಟ ಜಯ ಸಿಗಲಿದೆ. 120 ಸ್ಥಾನಗಳನ್ನು ಗೆಲ್ಲುವ ಗುರಿ ಸಾಧನೆಯಾಗಬೇಕಾದರೆ ಜವಾಬ್ದಾರಿ ಪಡೆದವರು ಯಾವುದೇ ಕಾರಣಕ್ಕೂ ಮೈಮರೆಯಬಾರದು. ಚುನಾವಣೆಗೆ ಎಲ್ಲಾ ರೀತಿಯಲ್ಲೂ ಸಜ್ಜಾಗಬೇಕು ಎಂದರಲ್ಲದೆ ಪಂಚರತ್ನ ಯಾತ್ರೆ ಮುಗಿದ ನಂತರ ಇನ್ನೆರಡು ಮಹತ್ತರ ಯೋಜನೆಗಳನ್ನು ಘೋಷಣೆ ಮಾಡುವ ಆಲೋಚನೆ ಇದೆ. ಮುಖ್ಯವಾಗಿ ನಿರುದ್ಯೋಗಿಗಳಿಗೆ ವಿಶೇಷ ಕಾರ್ಯಕ್ರಮ ರೂಪಿಸಲಾಗುವುದು. ಒಟ್ಟಾರೆ ಜೆಡಿಎಸ್‌ನಿಂದ ಯಾರಿಗೆ ಟಿಕೆಟ್ ಸಿಕ್ಕರೂ ಜಯ ಗಳಿಸುವಂತಹ ವಾತಾವರಣ ರಾಜ್ಯದಲ್ಲಿ ನಿರ್ಮಾಣವಾಗಬೇಕು ಎಂದು ನುಡಿದರು.

> “ಮಾ.26 ರಂದು ಮೈಸೂರಿನಲ್ಲಿ ಪಂಚರತ್ನ ರಥಯಾತ್ರೆಯ ಸಮಾರೋಪ ಸಮಾರಂಭವನ್ನು ಆಯೋಜಿಸಲು ಬಂಡಿಪಾಳ್ಯ ಹಾಗೂ ಇಲವಾಲದ ಬಳಿ ಸ್ಥಳ ಗುರ್ತಿಸಲಾಗಿದ್ದು, ಇನ್ನೂ ಯಾವ ಸ್ಥಳವೆಂದು ನಿರ್ಧರಿಸಿಲ್ಲ. 10 ಲಕ್ಷಕ್ಕೂ ಹೆಚ್ಚು ಜನರು ಸೇರಲು ಸಾಧ್ಯವಾಗುವಂತೆ ವಿಶಾಲ ಜಾಗವಿದ್ದರೆ ತಿಳಿಸಿ, ಅಲ್ಲದೆ ಕಾರ್ಯಕ್ರಮದ ಯಶಸ್ಸಿಗೆ ವೈಯಕ್ತಿಕವಾಗಿ ಒಂದಷ್ಟು ಜವಾಬ್ದಾರಿಗಳನ್ನು ವಹಿಸಿಕೊಳ್ಳುತ್ತೇನೆ.
> –ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಿಎಂ

ರೋಡ್ ಶೋ: ಶಾಸಕ ರವೀಂದ್ರ ಶ್ರೀಕಂಠಯ್ಯ ಮಾತನಾಡಿ, ಪಂಚರತ್ನ ರಥಯಾತ್ರೆ ಸಮಾರೋಪ ರೆಕಾರ್ಡ್ ಆಗಬೇಕು. ಈ ನಿಟ್ಟಿನಲ್ಲಿ ರಾಮನಗರದಿಂದ ಮೈಸೂರಿನವರೆಗೆ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರಿಂದ ರೋಡ್ ಶೋ ನಡೆಯಬೇಕು. ರೋಡ್ ಶೋ ವೇಳೆ ಮಾರ್ಗದುದ್ದಕ್ಕೂ ಎರಡೂ ಬದಿಯಲ್ಲಿ ಪಕ್ಷದ ಬೆಂಬಲಿಗರು, ಮತದಾರರು ಇರಬೇಕು. ಹಾಗೆಯೇ ಹೆಚ್.ಡಿ.ದೇವೇಗೌಡರ ರಾಜಕೀಯ ಜೀವನದಲ್ಲಿ ಈ ಕಾರ್ಯಕ್ರಮವನ್ನು ಅವಿಸ್ಮರಣೀಯವಾಗಿಸಲು ಎಲ್ಲಾ ಕಡೆಯೂ ಕೆಂಪು ಬಣ್ಣದ ಗುಲಾಬಿ ಹೂ ಬಳಸಬೇಕು ಎಂದ ಅವರು, ರಾಷ್ಟ್ರೀಯ ಹೆದ್ದಾರಿಯಲ್ಲಿ ಅಥವಾ ಹಳ್ಳಿಗಳಿಗೆ ಹೊಂದಿಕೊಂಡಂತಿರುವ ಹೆದ್ದಾರಿಯ ಸರ್ವಿಸ್ ರಸ್ತೆಯಲ್ಲಿ ರೋಡ್ ಶೋ ನಡೆಸುವುದರ ಬಗ್ಗೆ ನಿರ್ಧರಿಸಬೇಕಿದೆ ಎಂದು ಸಲಹೆ ನೀಡಿದರು.

ಇದಕ್ಕೆ ದನಿಗೂಡಿಸಿದ ಮಾಜಿ ಸಿಎಂ ಹೆಚ್‌ಡಿಕೆ, ಮೈಸೂರಿನಲ್ಲಿ ಪಂಚರತ್ನ ರಥಯಾತ್ರೆ ಸಂಜೆ ವೇಳೆ ಆಯೋಜಿಸುವುದರಿಂದ ರೋಡ್ ಶೋ ಅನುಕೂಲವಾಗಲಿದೆ. ದೇಶದಲ್ಲಿಯೇ ಈ ರೀತಿಯ ಕಾರ್ಯಕ್ರಮ ನಡೆದಿರದಂತೆ ರೂಪಿಸಿ. ಪ್ರಧಾನಿ ಮೋದಿಯವರು ನಡೆಸಿದ 10 ಕಿಲೋ ಮೀಟರ್ ರೋಡ್ ಶೋನಲ್ಲಿ ಜನರೇ ಇರಲಿಲ್ಲ. ಸಿಟಿಯಲ್ಲಿ ಮಾತ್ರ ಜನ ಸೇರಿದ್ದರೆ ಹೊರತು ಉಳಿದ ಕಡೆಯೆಲ್ಲಾ ಪೊಲೀಸರೇ ಕಾಣುತ್ತಿದ್ದರು. ಆದರೆ ಪಂಚರತ್ನ ಯಾತ್ರೆ ಹೋದ ಕಡೆಯೆಲ್ಲಾ ಜನಸಂದಣಿ ಆಗುತ್ತಿದೆ. ಆದ್ದರಿಂದ ವ್ಯವಸ್ಥಿತವಾಗಿ ರೋಡ್ ಶೋ ಆಯೋಜಿಸಬೇಕು ಎಂದು ತಿಳಿಸಿದರು.

ಮನೆಯೊಳಗೆ ಸೇರಿಕೊಳ್ತಾರೆ!: ನಾನು ಮೈಸೂರಿಗೆ ಬಂದಾಗ ಮಾತ್ರ ಎಲ್ಲೆಲ್ಲಿಂಯೋ ಇದ್ದ ಜೆಡಿಎಸ್ ಕಾರ್ಯಕರ್ತರು, ಮುಖಂಡರು ಕುಮಾರಣ್ಣಗೆ ಜೈ ಎಂದು ಬರುತ್ತೀರಿ. ಇಲ್ಲಿಂದ ಹೋದ ಕೂಡಲೇ ಮತ್ತೆ ಮನೆಯೊಳಗೆ ಸೇರಿಕೊಳ್ತಿರಿ ಎಂದು ಬೇಸರ ವ್ಯಕ್ತಪಡಿಸಿದ ಹೆಚ್‌ಡಿಕೆ, ಮೈಸೂರು ನಗರದಲ್ಲಿ ಜೆಡಿಎಸ್ ಬಲಪಡಿಸುವುದು ಮುಖ್ಯವಾಗಿದೆ. ಕನಿಷ್ಠ ಎರಡು ಸ್ಥಾನಗಳಲ್ಲಾದರೂ ಜೆಡಿಎಸ್ ಅಭ್ಯರ್ಥಿ ಗೆಲ್ಲಬೇಕು. ಈ ನಿಟ್ಟಿನಲ್ಲಿ ಸ್ಥಳೀಯ ನಾಯಕರು ಸಕ್ರಿಯವಾಗಬೇಕಿದೆ ಎಂದು ತಿಳಿಸಿದರು.

ಶಾಸಕರಾದ ಜಿ.ಟಿ.ದೇವೇಗೌಡ, ಸಾ.ರಾ.ಮಹೇಶ್, ಡಿ.ಸಿ.ತಮ್ಮಣ್ಣ, ಕೆ.ಮಹದೇವ್, ಅಶ್ವಿನ್‌ಕುಮಾರ್ ಸೇರಿದಂತೆ ಸ್ಥಳೀಯ ಮುಖಂಡರು, ಪಾಲಿಕೆ ಸದಸ್ಯರು ಉಪಸ್ಥಿತರಿದ್ದರು.

ಈ ಸಲ ಬಿಜೆಪಿ ಲಿಂಗಾಯತ ಕಾರ್ಡ್ ಪ್ಲೇ ಮಾಡಲು ಸಾಧ್ಯವೇ ಇಲ್ಲ

ಮೀಸಲಾತಿ ವಿಚಾರದಲ್ಲಿ ಸರ್ಕಾರ ಹುಡುಗಾಟಿಕೆ ಆಡಿದೆ

ಮೈಸೂರು, ಮಾ.2(ಎಸ್‌ಬಿಡಿ)– ಈ ಬಾರಿ ಚುನಾವಣೆಯಲ್ಲಿ ಲಿಂಗಾಯತ ಕಾರ್ಡ್ ಪ್ಲೇ ಮಾಡಲು ಸಾಧ್ಯವಿಲ್ಲ ಎಂದು ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಅಭಿಪ್ರಾಯಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಲ್ಲಿ ಆಯೋಜಿಸಿದ್ದ ಸಂವಾದದಲ್ಲಿ ಮಾಧ್ಯಮದವರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿ, ಈ ಬಾರಿ ಬಿಜೆಪಿ ಲಿಂಗಾಯತ ಕಾರ್ಡ್ ಪ್ಲೇ ಮಾಡಲು ಸಾಧ್ಯವಿಲ್ಲ. ಪಂಚಮಸಾಲಿ ಲಿಂಗಾಯತ ಸ್ವಾಮೀಜಿ ಪಾದಯಾತ್ರೆ ಮಾಡಿದರು. ಆದರೆ ಮೀಸಲಾತಿ ವಿಷಯದಲ್ಲಿ ಈ ಸರ್ಕಾರ ಹುಡುಗಾಟಿಕೆ ಹಾಡಿದೆ. ಹಾಗಾಗಿ ಸಮಾಜದ ಪ್ಲೇ ಕಾರ್ಡ್ ಇಟ್ಟುಕೊಂಡು ಏನೂ ಮಾಡಲಾಗುವುದಿಲ್ಲ. ಅಸಮಾಧಾನ ಭುಗಿಲೆದ್ದ ಕಾರಣದಿಂದಲೇ ಸೈಡ್‌ಲೈನ್ ಮಾಡಿದ್ದ ಯಡಿಯೂರಪ್ಪನವರನ್ನು ಈಗ ಮುಂದಕ್ಕೆ ಕರೆದುಕೊಂಡು ಬಂದಿದ್ದಾರೆ. ಈ ಬಾರಿ ಹಿಂದುತ್ವವೂ ವರ್ಕೌಟ್ ಆಗಲ್ಲ. ಯುವಕರು ಬಿಜೆಪಿ ವಿರುದ್ಧ ನಿಲ್ಲುತ್ತಾರೆ ಎಂದರು.

ಕಾಂಗ್ರೆಸ್ ಜೊತೆ ಮೈತ್ರಿ ಮಾಡಿಕೊಂಡಿದ್ದು ತಪ್ಪಾಗಿದ್ದರೂ ಅದರಿಂದ ರೈತರ 25 ಸಾವಿರ ಕೋಟಿ ರೂ. ಸಾಲ ಮನ್ನಾ ಮಾಡಿದ ತೃಪ್ತಿ ಇದೆ. ಕಾಂಗ್ರೆಸ್‌ನವರು ನನ್ನ ಇಮೇಜ್ ಹಾಳು ಮಾಡುವ ಪ್ರಯತ್ನ ನಡೆಸಿದ್ದು ನಿಜ. ಆದರೆ ಅದು ಸಾಧ್ಯವಾಗಲಿಲ್ಲ. ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್‌ನವರು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದರೆ 10 ಲಕ್ಷ ಮತ ಬರಬೇಕಿತ್ತು. ಪಕ್ಷೇತರ ಅಭ್ಯರ್ಥಿಗೆ ಏಕೆ ಹೋದವು. ಕಾಂಗ್ರೆಸ್, ಬಿಜೆಪಿ, ರೈತ ಸಂಘ ಎಲ್ಲರೂ ಸೇರಿ ಚುನಾವಣೆ ನಡೆಸಿದರು. ಸರಿಯಾಗಿದ್ದರೆ ಸೋಲುವ ಪ್ರಶ್ನೆಯೇ ಇರಲಿಲ್ಲ. ತುಮಕೂರಿನಲ್ಲಿ ಬಿಜೆಪಿ ಸಂಸದ ಕಾಂಗ್ರೆಸ್ ಅಭ್ಯರ್ಥಿ ಗೆಲ್ಲಿಸಿ ಎಂದು ಭಾಷಣ ಮಾಡಿ ಬಂದರು. ಸಿದ್ದರಾಮಯ್ಯ ಚಾಮುಂಡೇಶ್ವರಿ ಸೋಲನ್ನು ಮಂಡ್ಯ, ತುಮಕೂರಿನಲ್ಲಿ ತೀರಿಸಿಕೊಂಡರು ಎನ್ನಲಾಗದು. ಆ ಶಕ್ತಿ ಅವರಿಗಿಲ್ಲ. ನೇರ ಮೈತ್ರಿ ಆಗದಿದ್ದರೆ ನಮಗೇನು ಸಮಸ್ಯೆ ಆಗುತ್ತಿರಲಿಲ್ಲ. ನಾವು ಪೊಲಿಟಿಕಲಿ ಟ್ರ್ಯಾಪ್ ಆಗಿದ್ದು ಸತ್ಯ ಎಂದು ತಿಳಿಸಿದರು.

ಇನ್ನೊಂದು ವಾರದಲ್ಲಿ 2ನೇ ಹಂತದ ಪಟ್ಟಿ ಬಿಡುಗಡೆಯಾಗಲಿದ್ದು 150 ಕ್ಷೇತ್ರಕ್ಕೆ ಅಭ್ಯರ್ಥಿಗಳ ಘೋಷಣೆ ಆಗಲಿದೆ. ಇನ್ನು 65–70 ಕ್ಷೇತ್ರ ಬಾಕಿ ಉಳಿಯುತ್ತದೆ. ಪಂಚರತ್ನ ರಥಯಾತ್ರೆಯಿಂದ ಪ್ರಭಾವಿತರಾಗಿರುವ ಬೇರೆ ಪಕ್ಷಗಳ ಸಂಭಾವ್ಯ ಅಭ್ಯರ್ಥಿಗಳು ಜೆಡಿಎಸ್‌ಗೆ ಬರಬಹುದು. ಚುನಾವಣೆಯಲ್ಲಿ 120 ಕ್ಷೇತ್ರ ಗೆಲ್ಲುವ ಅವಕಾಶವಿದೆ. ಆದ್ದರಿಂದ ಬೇರೆಯವರ ಜೊತೆ ಕೈ ಜೋಡಿಸುವ ಪ್ರಶ್ನೆಯೇ ಬರುವುದಿಲ್ಲ. ಈಗ ಹಿಂದಿನ ಬಿಜೆಪಿ ಇಲ್ಲ. ಈಗ ಕಾಂಗ್ರೆಸ್–ಬಿಜೆಪಿ ಎರಡೂ ಒಂದೇ. ಹಾಗಾಗಿ ಬಿಜೆಪಿ ಜೊತೆ ಮೈತ್ರಿ ಮಾಡಿಕೊಂಡರೂ ಇಮೇಜ್ ಕಳೆದುಕೊಳ್ಳಬೇಕಾಗುತ್ತದೆ ಎಂದು ಹೇಳಿದರು.

ಕಾರ್ಯಕರ್ತನಿಗೆ ಟಿಕೆಟ್: ಹಾಸನದ ಟಿಕೆಟ್ ಕಾರ್ಯಕರ್ತನಿಗೆ ಕೊಡುತ್ತೇನೆ ಎಂದು ಎಷ್ಟೋ ಬಾರಿ ಹೇಳಿದ್ದೇನೆ ಅದರಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ. ಆ ಕ್ಷೇತ್ರದಲ್ಲಿ ಗೆಲ್ಲಿಸಿಕೊಂಡು ಬರುವುದು ನನ್ನ ಜವಾಬ್ದಾರಿ. ಸಾಮಾನ್ಯವಾಗಿ ಚುನಾವಣೆಯಲ್ಲಿ ಸ್ಪರ್ಧಿಸಬೇಕೆಂಬ ಆಸೆ ಎಲ್ಲರಿಗೂ ಇರುತ್ತದೆ. ಹಾಸನ ಜಿಲ್ಲೆಯ 7 ಸ್ಥಾನ ಗೆಲ್ಲುವ ನಿಟ್ಟಿನಲ್ಲಿ ಪಕ್ಷ ನಿರ್ಧಾರ ಕೈಗೊಳ್ಳಲಿದೆ. ರಾಜಕೀಯ ನಿವೃತ್ತಿ ಎಂದು ನಾನು ಹೇಳಲ್ಲ. 2028ರ ಚುನಾವಣೆಯಲ್ಲಿ ಚನ್ನಪಟ್ಟಣ ಕ್ಷೇತ್ರದಲ್ಲಿ ಓರ್ವ ಕಾರ್ಯಕರ್ತನ ಗೆಲ್ಲಿಸುತ್ತೇನೆ ಎಂದಿದ್ದೇನೆ. ಜೆಡಿಎಸ್‌ನ ಪ್ರತಿಯೊಬ್ಬ ಕಾರ್ಯಕರ್ತನೂ ನನ್ನ ಕುಟುಂಬ. ಇಲ್ಲಿ ಚುನಾವಣೆ ಬಂದಾಗ ಸಮಸ್ಯೆ ಇಲ್ಲದ ಕಡೆ ಸಾಮಾನ್ಯ ಕಾರ್ಯಕರ್ತರನ್ನು, ಸಮಸ್ಯೆ ಇರುವ ಕಡೆ ನಾವು ತಲೆ ಕೊಡಲೇಬೇಕು. ಮಧುಗಿರಿ ಶಾಸಕ ಆಪರೇಷನ್‌ನಿಂದ ಬಿಜೆಪಿಗೆ ಹೋದಾಗ, ವೀರಭದ್ರಯ್ಯ ಅವರನ್ನು ನಿಲ್ಲಿಸಬೇಕಿತ್ತು. ಆದರೆ ಅವರ ವಿಆರ್‌ಎಸ್ ಅನುಮೋದನೆ ಆಗದ ಕಾರಣ ಅನಿವಾರ್ಯವಾಗಿ ಕಡೇ ಗಳಿಗೆಯಲ್ಲಿ ಅನಿತಾ ಕುಮಾರಸ್ವಾಮಿ ನಿಲ್ಲಿಸಬೇಕಾಯ್ತು. ಆದರೆ ಸಾರ್ವತ್ರಿಕ ಚುನಾವಣೆಗೆ ವೀರಭದ್ರಯ್ಯನಿಗೆ ಟಿಕೆಟ್ ನೀಡಿದ್ದನ್ನು ಜನ ಅರ್ಥ ಮಾಡಿಕೊಳ್ಳಬೇಕು. ಚೆಲುವರಾಯಸ್ವಾಮಿ ನಾಗಮಂಗಲದಲ್ಲಿ ಸೋತಿದ್ದರು. ಅವರನ್ನು ದೊಡ್ಡಬಳ್ಳಾಪುರದಲ್ಲಿ ನಿಲ್ಲಿಸಬೇಕು ಎಂದಿದ್ದೆ. ದೇವೇಗೌಡರು, ರೇವಣ್ಣನವರು ಯಾವ ಕಾರಣಕ್ಕೂ ಬೇಡ ಎಂದರು ಎಂದು ತಿಳಿಸಿದರು.

ಡಿಕೆ ಬ್ರದರ್ಸ್ ನೆನಪಿಸಿಕೊಳ್ಳಲಿ: ಪ್ರೋಟೋಕಾಲ್ ಗೊತ್ತಿಲ್ಲವೇ ಎಂದು ಸಂಸದ ಡಿ.ಕೆ.ಸುರೇಶ್ ಪ್ರಶ್ನಿಸಿರುವ ಬಗ್ಗೆ ಪ್ರತಿಕ್ರಿಯಿಸಿ, ಸರ್ಕಾರ ನಡೆಸುವಾಗ ಇದೆಲ್ಲಾ ಮಾಮೂಲಿ. ನಾನು 2 ಬಾರಿ ಎಂಪಿ ಆಗಿದ್ದಾಗ ಅವರ ಕ್ಷೇತ್ರಕ್ಕೆ ಹೋಗಲು ಬಿಡುತ್ತಿರಲಿಲ್ಲ. ಮುಖ್ಯಮಂತ್ರಿಯಾಗಿದ್ದಾಗ ಅಭಿವೃದ್ಧಿ ಕೆಲಸಕ್ಕೆ ಸಾತನೂರಿಗೆ ಹೋಗಲು ಬಿಡಲಿಲ್ಲ. ಅಣ್ಣತಮ್ಮಂದಿರು ಅದನ್ನು ನೆನಪು ಮಾಡಿಕೊಳ್ಳಬೇಕು. ಹೀಗೇಳಿದ ಮಾತ್ರಕ್ಕೆ ನಾನು ಬಿಜೆಪಿ ಪರ ಹೇಳುತ್ತಿಲ್ಲ. ಸದನದಲ್ಲಿ ಬಿಜೆಪಿಗೆ ಇರಿಸು ಮುರಿಸು ಮಾಡಿದ್ದು ನಾನು. ಬಿಜೆಪಿ ವೇಗ ಕಡಿಮೆ ಮಾಡಲು ನನ್ನಿಂದ ಮಾತ್ರ ಸಾಧ್ಯ. ಕಾಂಗ್ರೆಸ್ ನಾಯಕರಿಂದ ಆಗುವುದಿಲ್ಲ. ಬಿಜೆಪಿ–ಕಾಂಗ್ರೆಸ್‌ನಲ್ಲಿ ಕುಮಾರಸ್ವಾಮಿಗೆ ಹಣ ಯಾರು ನೀಡುತ್ತಿದ್ದಾರೆ ಎಂದು ಚರ್ಚೆಯಾಗುತ್ತಿದೆ. ಜನ ಇದ್ದಕಡೆ ನಾನು ಹೋಗುತ್ತಿದ್ದೇನೆ. ನಾನಿದ್ದ ಕಡೆಗೆ ಜನರನ್ನು ಕರೆಸುತ್ತಿಲ್ಲ. ಹಾಗಾಗಿ ದುಡ್ಡಿನ ಅವಶ್ಯಕತೆಯಿಲ್ಲ. ಮೊದಲಿನಿಂದಲೂ ದೇವರನ್ನು ನಂಬಿ ಬದುಕಿರುವ ಕುಟುಂಬ. ಸಂಸ್ಕೃತಿ ಪಾಲಿಸಿಕೊಂಡು ಬಂದಿದ್ದೇವೆ. ಚುನಾವಣೆ ಹಾಗೂ ರಾಷ್ಟ್ರೀಯ ಅಧ್ಯಕ್ಷರ ಆರೋಗ್ಯ ಸಮಸ್ಯೆ ಇರುವುದರಿಂದ ಗ್ರಹಗತಿಗಳ ಶಾಂತಿಗಾಗಿ ನಾಳೆಯಿಂದ 9 ದಿನ ಯಾಗ ಮಾಡಿಸುತ್ತೇವೆ ಎಂದರು.

ಆರೋಪ, ಅಪಪ್ರಚಾರ ಬಿಟ್ಟು ಅಭಿವೃದ್ಧಿ ಬಗ್ಗೆ ಮಾತಾಡಿ

● ಬಿಜೆಪಿ, ಕಾಂಗ್ರೆಸ್ ನಾಯಕರಿಗೆ ಮಾಜಿ ಸಿಎಂ ಕುಮಾರಸ್ವಾಮಿ ಕಿವಿಮಾತು
● ಜನ ಕರೆಸಿ ಭಾಷಣ ಮಾಡುವ ಬದಲು ಹಳ್ಳಿಗೆ ಹೋಗಿ ಪರಿಸ್ಥಿತಿ ನೋಡಿ



ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಅಭಿನಂದಿಸಲಾಯಿತು. ಸಂಘದ ಕಾರ್ಯದರ್ಶಿ ರಂಗಸ್ವಾಮಿ, ಗ್ರಾಮಾಂತರ ಉಪಾಧ್ಯಕ್ಷ ಧರ್ಮಾಪುರ ನಾರಾಯಣ, ಪ್ರಧಾನ ಕಾರ್ಯದರ್ಶಿ ಸುಬ್ರಹ್ಮಣ್ಯ, ಅಧ್ಯಕ್ಷ ಎಸ್.ಟಿ.ರವಿಕುಮಾರ್, ನಗರ ಉಪಾಧ್ಯಕ್ಷ ಬಸವಣ್ಣ ಚಿತ್ರದಲ್ಲಿದ್ದಾರೆ.

ಮೈಸೂರು: ಆರೋಪ, ಅಪಪ್ರಚಾರದ ಬದಲು ನಿಮ್ಮ ಪಕ್ಷದ ಸಾಧನೆ, ಮುಂದಿನ ಯೋಜನೆಗಳ ಬಗ್ಗೆ ತಿಳಿಸಿ. ಹಣ ಕೊಟ್ಟು ಜನರನ್ನು ಕರೆಸಿ ಭಾಷಣ ಮಾಡುವ ಬದಲು, ನೀವೇ ಹಳ್ಳಿಗಳಿಗೆ ಹೋಗಿ ಅಲ್ಲಿನ ಪರಿಸ್ಥಿತಿ ನೋಡಿ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಸಲಹೆ ನೀಡಿದರು.

ಜೆಡಿಎಸ್, ಬಿಜೆಪಿಯ 'ಬಿ' ಟೀಂ. ಅದಕ್ಕೆ ಮತ ನೀಡಬೇಡಿ ಎಂದು ಅಪಪ್ರಚಾರ ಮಾಡುತ್ತೀರಿ. ಈ ಕಾಯಿಲೆ ಸಿದ್ದರಾಮಯ್ಯನವರಿಗೆ ಮಾತ್ರ ಇದೆ ಎಂದುಕೊಂಡಿದ್ದೆ. ಈಗ ಅಮಿತ್ ಷಾಗೂ ಶುರುವಾಗಿದೆ. ನಿಮಗೆ ಜೆಡಿಎಸ್‌ನ ಚಿಂತೆ ಏಕೆ. ನೀವೇನು ಸಾಧನೆ ಮಾಡಿದ್ದೀರಿ, ಮುಂದೇನು ಮಾಡುತ್ತೀರಿ ಅದನ್ನು ಹೇಳಿ. ನಾನು 75 ವಿಧಾನಸಭಾ ಕ್ಷೇತ್ರದ ಪ್ರವಾಸದಲ್ಲಿ ನನ್ನ ಕಾರ್ಯಕ್ರಮ ತಿಳಿಸಿ ಬೆಂಬಲ ಕೋರಿದ್ದೇನೆ. ಯಾರ ವಿರುದ್ಧವೂ ಆರೋಪ, ಅಪಪ್ರಚಾರ ಮಾಡಲು ಹೋಗಿಲ್ಲ. ಕಾಂಗ್ರೆಸ್ ಅಥವಾ ಬಿಜೆಪಿಗೆ ಮತ ಹಾಕಬೇಡಿ ಎಂದು ಹೇಳಿಲ್ಲ ಎಂದು ತಿಳಿಸಿದರು.

ಬಿಜೆಪಿಯವರಂತೆ 500 ರೂ. ಕೊಟ್ಟು ಜನ ಕರೆಸಬೇಕು ಎಂದು ಸಿದ್ದರಾಮಯ್ಯ ಹೇಳಿರುವ ವಿಡಿಯೋ ವೈರಲ್ ಆಗಿದೆ. ಹಣ, ಊಟ ಕೊಟ್ಟು ತಾಲೂಕುಗಳಿಂದ ಜನರನ್ನು ಕರೆತಂದು ಭಾಷಣ ಮಾಡುವುದೇಕೆ. ಎರಡು ಪಕ್ಷದವರೂ ಒಳ್ಳೆಯ ವಾಹನ ವ್ಯವಸ್ಥೆ ಮಾಡಿಕೊಂಡಿದ್ದೀರಿ. ನೀವೇ ಹಳ್ಳಿಗಳಿಗೆ ಹೋಗಿ ಅಲ್ಲಿನ ಪರಿಸ್ಥಿತಿ ನೋಡಿ. ನಾನು ಉತ್ತರ ಕರ್ನಾಟಕ ಪ್ರವಾಸ ಮಾಡಿದ್ದೇನೆ. ಅನೇಕ ಶಾಲೆಗಳಲ್ಲಿ ತಲೆಗೊಂದು ಮುಂಡಾಸು(ಪೇಟ), ಮನೆಗೊಂದು ಸಂಡಾಸು(ಶೌಚಾಲಯ) ಎಂದು ದಪ್ಪಕ್ಷರದಲ್ಲಿ ಬರೆದಿದ್ದಾರೆ. ನನ್ನ ಸಚಿವ ಸಂಪುಟದಲ್ಲೇ ಗ್ರಾಮಾಭಿವೃದ್ಧಿ ಸಚಿವರಾಗಿದ್ದ ಕೃಷ್ಣ ಭೈರೇಗೌಡರು ಬಹಿರ್ದೆಸೆ ಮುಕ್ತ ರಾಜ್ಯ ಎಂದು ಸರ್ಟಿಫಿಕೇಟ್ ತೋರಿಸಿದ್ದರು. ಆದರೆ ಕೋಲು, ಚೆಂಬು ಹಿಡಿದುಕೊಂಡು ರಸ್ತೆ ಬದಿ ಕುಳಿತುಕೊಳ್ಳುವ ದುಃಸ್ಥಿತಿ ಇಂದಿಗೂ ಇದೆ. ಅಲ್ಲಿನ ಮಹಿಳೆಯರು 170 ರೂ. ದಿನಗೂಲಿಗೆ ಹೋಗುತ್ತಾರೆ. ವರ್ಷದಲ್ಲಿ ಮೂರ್ನಾಲ್ಕು ತಿಂಗಳು ಕೆಲಸಕ್ಕಾಗಿ ವಲಸೆ ಹೋಗುತ್ತಾರೆ. ಹಲವಾರು ಭಾಗ್ಯಗಳನ್ನು ಕೊಟ್ಟು ಉದ್ಧಾರ ಮಾಡಿದೆ ಎಂದವರು ಹೋಗಿ ನೋಡಬೇಕು ಎಂದರು. ಕಾಂಗ್ರೆಸ್‌ನವರು ಗ್ಯಾರಂಟಿ ಕಾರ್ಯಕ್ರಮ ಹೇಳುತ್ತಿದ್ದಾರೆ. ಇದಕ್ಕೆ 40 ಪರ್ಸಂಟೇಜ್ ಕಟ್ ಮಾಡಿ ಕಾರ್ಯಕ್ರಮಗಳಿಗೆ ಹಣ ಹೊಂದಿಸುತ್ತೇವೆ ಎಂದು ಸುರ್ಜೇವಾಲ ಹೇಳಿದ್ದಾರೆ. ನನ್ನ ಮಂತ್ರಿಮಂಡಲದಲ್ಲೇ ನೀರಾವರಿ ಇಲಾಖೆಯಲ್ಲಿ ಏನೆಲ್ಲಾ ನಡೆಯಿತು ಗೊತ್ತಿದೆ. ಇವರು ಪರ್ಸಂಟೇಜ್ ಕಡಿಮೆ ಮಾಡ್ತಾರಾ. ಕಾಂಗ್ರೆಸ್ ಅಧ್ಯಕ್ಷರು ಅಯ್ಯೋ ನನಗೊಂದು ಅವಕಾಶ ಕೊಡಿ, ಪೆನ್ನು–ಪೇಪರ್ ಕೊಡಿ ಎಂದು ಗೋಗರೆಯುತ್ತಿದ್ದಾರೆ. ಜನ ಅವಕಾಶ ನೀಡಿದ್ದರಲ್ಲ ಏನು ಉದ್ಧಾರ ಮಾಡಿದ್ದೀರಿ. ದೇವೇಗೌಡರನ್ನು ರಾಮನಗರದಲ್ಲಿ ಗೆಲ್ಲಿಸಿದೆವು. ಅವರ ಮಗನನ್ನು ಗೆಲ್ಲಿಸಿ, 2 ಸಲ ಮುಖ್ಯಮಂತ್ರಿ ಮಾಡಿದ್ದೇವೆ ಎಂದು ಡಿ.ಕೆ.ಶಿವಕುಮಾರ್ ಹಾಗೂ ಸುರೇಶ್ ಹೇಳಿದ್ದಾರೆ. ರಾಮನಗರದಲ್ಲಿ ದೇವೇಗೌಡರನ್ನು ಸೋಲಿಸಲು ಯಾವ ರೀತಿ ರಾಜಕೀಯ ಮಾಡಿದ್ದೀರಿ ಜನರಿಗೆ ಗೊತ್ತಿದೆ ಎಂದು ತಿಳಿಸಿದರು.

ಇದು ಮನೆ ಮುರುಕ ಕೆಲಸ...

'ಕೊಟ್ಟ ಕುದುರೆಯ ಏರದವ ವೀರನೂ ಅಲ್ಲ, ಧೀರನೂ ಅಲ್ಲ, ಶೂರನೂ ಅಲ್ಲ' ಎಂಬ ಸಿದ್ದರಾಮಯ್ಯನವರ ಹೇಳಿಕೆಯನ್ನು ಅವರ ಧಾಟಿಯಲ್ಲೇ ವ್ಯಂಗ್ಯವಾಗಿ ಹೇಳಿದ ಕುಮಾರಸ್ವಾಮಿ, 'ನಮ್ಮ ಹಳ್ಳಿ ಕಡೆ ಒಂದು ಮಾತಿದೆ ಕಾಲು ಮುರುಕ ಕುದುರೆ ಕೊಟ್ಟು ಏರು ಎನ್ನುವವರನ್ನು ಮನೆ ಮುರುಕ' ಎನ್ನುತ್ತಾರೆ. ಕಾಲು ಮುರಿದಿರುವ ಕುದುರೆ ಕೊಟ್ಟು ಮೇಲೇರು ಎಂದರೆ ಹೇಗೆ. ನೀವು ಮನೆ ಮುರುಕ ಕೆಲಸ ಮಾಡಿದ್ದೀರಿ ಎಂದರು. ಪದೇ ಪದೆ ತಾಜ್ ಹೋಟೆಲ್ ಅಂತಾರೆ. ಇವರು 5 ವರ್ಷ ಸಿಎಂ ಆಗಿದ್ದಾಗ ಮಧ್ಯಾಹ್ನ 1.30ಕ್ಕೆ ಹೊರಟರೆ 4 ಗಂಟೆವರೆಗೆ ಯಾರನ್ನೂ ಭೇಟಿ ಮಾಡುತ್ತಿರಲಿಲ್ಲ. ಸಂಜೆ 6 ಗಂಟೆಗೆ ಖಾಲಿ ಮಾಡಿದರೆ ಬೆಳಗ್ಗೆ 8 ಗಂಟೆವರೆಗೆ ಎಲ್ಲಿದ್ದಾರೆ ಎನ್ನುವುದೂ ತಿಳಿಯುತ್ತಿರಲಿಲ್ಲ. ಇವರು ಈ ಮಾರ್ಗದಲ್ಲಿ ಬಂದಿದ್ದಾರೆ. ನಾನು ಮೈತ್ರಿ ಸರ್ಕಾರದಲ್ಲಿ ಕತ್ತೆ ರೀತಿ ದುಡಿದಿದ್ದೇನೆ. ಕಾಂಗ್ರೆಸ್ ಎಂಎಲ್‌ಎಗಳ ಕ್ಷೇತ್ರಗಳ ಅಭಿವೃದ್ಧಿಗೆ ಒಟ್ಟು 19 ಸಾವಿರ ಕೋಟಿ ನೀಡಿದ್ದೇನೆ. ಈಗ ಬರೀ ಭಾಷಣ ಮಾಡುತ್ತಾರೆ ಎಂದರು.

ಬಿಜೆಪಿಯವರಿಗೆ 10–15 ಪರಪ್ಪನ ಅಗ್ರಹಾರ ಬೇಕಾಗುತ್ತದೆ...

ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ದರ ಕಡಿಮೆ ಇದ್ದರೂ ಪೆಟ್ರೋಲ್ ಬೆಲೆ ಇಳಿಸಲಿಲ್ಲ. ಗ್ಯಾಸ್ ಬೆಲೆ 1150 ರೂ.ಗೆ ಏರಿದೆ. ಭಾರತದಲ್ಲಿ ಪೆಟ್ರೋಲ್ ಬರೀ ನೂರು ರೂ., ಪಾಕಿಸ್ತಾನದಲ್ಲಿ 300–400, ಬೇಕಿದ್ದರೆ ಅಲ್ಲಿಗೇ ಹೋಗಿ ಎಂದು ಬಿಜೆಪಿಯವರು ಹೇಳುತ್ತಾರೆ. ಅರೆ.. ಅವರೇನೋ ತಿನ್ನುತ್ತಾರೆ ಎಂದು ನಮ್ಮ ದೇಶದ ಜನರಿಗೆ ಅದನ್ನೇ ತಿನ್ನಿಸುತ್ತೀರಾ. ಯಡಿಯೂರಪ್ಪನವರನ್ನು ಹೇಗೆ ನಡೆಸಿಕೊಂಡರು, ಮುಖ್ಯಮಂತ್ರಿ ಸ್ಥಾನದಿಂದ ಏಕೆ ಇಳಿಸಿದರು ತಿಳಿದಿಲ್ಲವೇ. ಈಗ ಮೋದಿ ಅವರು ಯಡಿಯೂರಪ್ಪನವರ ಕೈಕುಲುಕಿ, ಆಲಂಗಿಸುತ್ತಾರೆ. ಏಕೆ ಈ ಬದಲಾವಣೆ. ಅವರನ್ನು ಇಳಿಸಿ ಬೊಮ್ಮಾಯಿ ಅವರನ್ನು ಸಿಎಂ ಮಾಡಿದ ಮೇಲೆ ಪರ್ಸಂಟೇಜ್ ಜಾಸ್ತಿಯಾಯ್ತು ಎಂದು ಜನ ಹೇಳುತ್ತಾರೆ. ಪ್ರಧಾನಿ ಮೋದಿ ಅವರು ಮೂರ್ನಾಲ್ಕು ಬಾರಿ ಬಂದಿದ್ದಾರೆ. ಈ ತಿಂಗಳಲ್ಲಿ ಇನ್ನೂ ಮೂರ್ನಾಲ್ಕು ಬಾರಿ ಬರುತ್ತಾರಂತೆ. ಮೊನ್ನೆ ನಿಜಲಿಂಗಪ್ಪ, ವೀರೇಂದ್ರ ಪಾಟೀಲ್‌ರನ್ನು ಕಾಂಗ್ರೆಸ್ ಅಪಮಾನಿಸಿದೆ ಎಂದು ಸ್ಮರಣೆ ಮಾಡಿದ್ದಾರೆ. ಆದರೆ ತಮ್ಮ ನಾಯಕರಾದ ಲಾಲ್ ಕೃಷ್ಣ ಅಧ್ವಾನಿ, ಮುರುಳಿ ಮನೋಹರ್ ಜೋಶಿ ಅವರನ್ನು ಕೈಕಾಲು ಕಟ್ಟಿ ಮೂಲೆಯಲ್ಲಿ ಕೂರಿಸಿದ್ದರು. ಈಗ ನಿಜಲಿಂಗಪ್ಪ, ಪಾಟೀಲ್ ಭಜನೆ ಮಾಡುತ್ತಿದ್ದಾರೆ. ಈಗ ಹಿಂದಿನ ಕರ್ನಾಟಕದ ಬಿಜೆಪಿ ಇಲ್ಲ. ಇದು ಅಮಿತ್ ಷಾ, ಮೋದಿ, ನಡ್ಡಾ ಬಿಜೆಪಿ. ದೆಹಲಿಯ ಸಿಸೋಡಿಯಾರನ್ನು ಅರೆಸ್ಟ್ ಮಾಡಿದ್ದಾರೆ. ರಾಜ್ಯದ ಬಿಜೆಪಿ ನಾಯಕರ ಒಬ್ಬೊಬ್ಬರ ಜಾತಕ ತೆಗೆದರೆ 10–15 ಪರಪ್ಪನ ಅಗ್ರಹಾರ ಕಟ್ಟಬೇಕು. ರಾಜನಾಥ್ ಸಿಂಗ್ 'ವೇದಿಕೆ ಭಾಷಣದಿಂದ ಭ್ರಷ್ಟಾಚಾರ ನಿಲ್ಲಿಸಲಾಗಲ್ಲ' ಎಂದು ಸತ್ಯ ಒಪ್ಪಿಕೊಂಡಿದ್ದಾರೆ ಎಂದು ಕುಮಾರಸ್ವಾಮಿ ಬಿಜೆಪಿಗೆ ಟಾಂಗ್ ನೀಡಿದರು.

ಚಾಮುಂಡೇಶ್ವರಿ ಊಹಾಪೋಹಕ್ಕೆ ಫಲಿತಾಂಶವೇ ಉತ್ತರ ನೀಡಲಿದೆ

ಮೈಸೂರು: ಚಾಮುಂಡೇಶ್ವರಿ ಕ್ಷೇತ್ರಕ್ಕೆ ಸಂಬಂಧಿಸಿದ ಊಹಾಪೋಹಕ್ಕೆ ಚುನಾವಣೆ ಫಲಿತಾಂಶದಲ್ಲಿ ಉತ್ತರ ಸಿಗಲಿದೆ ಎಂದು ಮಾಜಿ ಸಿಎಂ ಕುಮಾರಸ್ವಾಮಿ ಹೇಳಿದರು. ಜೆಡಿಎಸ್‌ನಿಂದ ಹೊರ ಹೋಗಿರುವ ಮುಖಂಡರು, ಕುಮಾರಸ್ವಾಮಿಯವರೇ ಜಿ.ಟಿ.ದೇವೇಗೌಡರ ಸೋಲಿಸಲು ಸೂಚಿಸಿದ್ದಾರೆ ಎನ್ನುವಂತೆ ಹೇಳಿಕೆ ನೀಡುತ್ತಿದ್ದಾರಲ್ಲಾ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಚುನಾವಣೆ ಫಲಿತಾಂಶ ಬಂದಾಗ ಸತ್ಯವೋ, ಅಸತ್ಯವೋ ಎನ್ನುವುದು ಗೊತ್ತಾಗುತ್ತದೆ. ಜಿಟಿಡಿ ಮತ್ತು ಸಾರಾ ಮಹೇಶ್ ನೇತೃತ್ವದಲ್ಲಿ ಮೈಸೂರು ಜಿಲ್ಲೆಯ 11ರಲ್ಲಿ 7–8 ಸ್ಥಾನ ಗೆಲ್ಲುತ್ತೇವೆ. ಚಾಮರಾಜನಗರದಲ್ಲೂ ಕನಿಷ್ಠ 3 ಸ್ಥಾನ ಗೆಲ್ಲುತ್ತೇವೆ ಎಂದರು. ಇದೇ ವೇಳೆ ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿ ನಮ್ಮಲ್ಲಿರುವವರನ್ನೇ ಸಮಾಧಾನ ಮಾಡುವುದು ಕಷ್ಟವಾಗಿದೆ. ಬೇರೆಯವರ ಸಂಪರ್ಕ ನಮಗೇಕೆ ಎಂದರು.


ನಿಧನ




ಜೆ.ಎಲ್.ಕೃಷ್ಣತಂತ್ರಿ

ಮೈಸೂರು, ಮಾ. 2– ಅಜಂತಾ ಮತ್ತು ಅಯೋಧ್ಯಾ ಗ್ರೂಪ್ ಆಫ್ ಹೋಟೆಲ್ಸ್‌ನ ಸಂಸ್ಥಾಪಕ ಪಾಲುದಾರರು ಹಾಗೂ ಮೈಸೂರಿನ ಸಿದ್ದಾರ್ಥನಗರದ ನಿವಾಸಿ ಜೆ.ಎಲ್. ಕೃಷ್ಣತಂತ್ರಿ (81) ಗುರುವಾರ ಬೆಳಗ್ಗೆ ನಿಧನರಾದರು. ಜೆ.ಎಲ್. ಕೃಷ್ಣತಂತ್ರಿ ಅವರು ಮೈಸೂರಿನ ಶ್ರೀ ಕೃಷ್ಣಧಾಮದ ಮಾಜಿ ಅಧ್ಯಕ್ಷರು ಮತ್ತು ಮೈಸೂರು ಹೋಟೆಲ್ ಮಾಲೀಕರ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದರು. ಶ್ರೀಯುತರು ಪತ್ನಿ ಕಲಾ ತಂತ್ರಿ, ಪುತ್ರರಾದ ರಾಘವೇಂದ್ರ ತಂತ್ರಿ ಮತ್ತು ಹರೀಶ್ ತಂತ್ರಿ, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು ವರ್ಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಜೆ.ಎಲ್.ಕೃಷ್ಣತಂತ್ರಿ ಅವರ ನಿಧನಕ್ಕೆ ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಸಂತಾಪ ಸೂಚಿಸಿದ್ದಾರೆ.

ಯಶೋಧರಮ್ಮ




ಮೈಸೂರು, ಮಾ. 2– ಮೈಸೂರಿನ ಬೃಂದಾವನ ಬಡಾವಣೆಯ ನಿವೃತ್ತ ಕೃಷಿ ಅಧಿಕಾರಿ ಎಂ.ಮಾಯಣ್ಣನವರ ಪತ್ನಿ ಶ್ರೀಮತಿ ಯಶೋಧರಮ್ಮ (69) ಬುಧವಾರ ನಿಧನರಾದರು. ಇವರು ಪತಿ, ಇಬ್ಬರು ಪುತ್ರರು ಮತ್ತು ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಸಂಸ್ಕಾರ ಅವರ ಸ್ವಗ್ರಾಮ ರಾಮನಗರ ಜಿಲ್ಲೆಯ ಪೇಟೆ ಕುರುಬಳ್ಳಿಯಲ್ಲಿ ಬುಧವಾರ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮಾಜಿ ಶಾಸಕ ವಾಸು ಸೇರಿದಂತೆ ಅನೇಕ ಗಣ್ಯರು ಮೃತರ ಕುಟುಂಬಕ್ಕೆ ಸಾಂತ್ವನ ಹೇಳಿದರು.




ಆರ್.ಎಸ್.ಚೆನ್ನಪ್ಪಯ್ಯ

ಮೈಸೂರು, ಮಾ.2–ಮೈಸೂರಿನ ಬಂಬೂ ಬಜಾರ್ ನಿವಾಸಿ ಆರ್.ಎಸ್.ಚೆನ್ನಪ್ಪಯ್ಯ(78) ಅವರು ಗುರುವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ನಗರದ ಲಲಿತಾದ್ರಿಪುರದಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ಶುಕ್ರವಾರ ಮಧ್ಯಾಹ್ನ 12 ಗಂಟೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೋಡಿರ ರತಿ (ಮುತ್ತಮ್ಮ)



ಮೈಸೂರು, ಮಾ. 2– ಮೈಸೂರಿನ ರಾಮಕೃಷ್ಣನಗರ ಹೆಚ್.ಬ್ಲಾಕ್‌ನಲ್ಲಿ ವಾಸವಿದ್ದ ಕೋಡಿರ ರತಿ (ಮುತ್ತಮ್ಮ) ಬಾಲಕೃಷ್ಣ ಅವರು ಗುರುವಾರ ಸಂಜೆ ನಿಧನರಾದರು. ಅವರಿಗೆ 71 ವರ್ಷ ವಯಸ್ಸಾಗಿತ್ತು. ಅಂತ್ಯಕ್ರಿಯೆ ನಾಳೆ (ಮಾ.3) ಮಧ್ಯಾಹ್ನ 1 ಗಂಟೆ ನಂತರ ಚಾಮುಂಡಿಬೆಟ್ಟ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಶಿವಶಂಕರ್

ಮೈಸೂರು, ಮಾ.2–ಮೈಸೂರಿನ ಅಗ್ರಹಾರ ನಿವಾಸಿ ಹಾಗೂ ಖೋಖೋ ಹಿರಿಯ ಆಟಗಾರ ಶಿವಶಂಕರ್(59) ಗುರುವಾರ ನಿಧನರಾದರು. ಮೃತರು ಪತ್ನಿ ಹಾಗೂ ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಶುಕ್ರವಾರ ಮಧ್ಯಾಹ್ನ 1.30ಕ್ಕೆ ವಿದ್ಯಾರಣ್ಯಪುರಂನ ವೀರಶೈವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...




ಇಂದಿನ ಪಂಚಾಂಗ

3.3.2023 ಶುಕ್ರವಾರ, ಮಳೆ ನಕ್ಷತ್ರ: ಶತಭಿಷ, 19.02.2023ರಿಂದ 04.03.2023
ಶ್ರೀ ಶುಭಕೃತ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ಪುನರ್ವಸು, ರಾಹುಕಾಲ: ಬೆಳಗ್ಗೆ 10.30 ರಿಂದ 12 ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹೈಪೋಥೈರಾಯ್ಡಿಸಮ್, ಪುರುಷರಲ್ಲಿ ಬಂಜೆತನ ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30ರಿಂದ.
- **ಧಾರ್ಮಿಕ ದತ್ತಿ ಇಲಾಖೆ :** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ರಾತ್ರಿ ವೃಷಭಾರೋಹಣ, ಸ್ಥಳ: ದೇವಸ್ಥಾನದ ಆವರಣ, ಹಳೇ ಸಂತೇಪೇಟೆ, ಬೆಳಗ್ಗೆಯಿಂದ.
- **ಶ್ರೀ ದಿಗಂಬರ ಜೈನ ಸಮಾಜ ಮತ್ತು ಪದ್ಮಶ್ರೀ ಜೈನ ಮಹಿಳಾ ಸಮಾಜ :** ಫಾಲ್ಗುಣ ಮಾಸದ ನಂದೀಶ್ವರ ಅಷ್ಟಾಹ್ನಿಕ ಪರ್ವ, ಶ್ರೀಮತಿ ಲತಾ ಸುದರ್ಶನ್ ಅವರಿಂದ ಗಾಥ : 476 ರಿಂದ 500 ಕುರಿತು ಪ್ರವಚನ, ಸ್ಥಳ: ಶ್ರೀ ಶಾಂತೀಶ್ವರ ಸ್ವಾಮಿ ಬಸದಿ (ಕೋಟೆ ಬಸದಿ), ಬೆಳಗ್ಗೆ 6 ಗಂಟೆಯಿಂದ.
- **ಕ್ಯಾತಮಾರನಹಳ್ಳಿ ಗ್ರಾಮಸ್ಥರು:** ಹುಲಿಯಮ್ಮ ಜಾತ್ರಾ ಮಹೋತ್ಸವ, ರಾತ್ರಿ 8 ಗಂಟೆಯಿಂದ ದೇವಾಲಯದ ಮುಂಭಾಗದಲ್ಲಿ ಕೋಲಾಟ, ತಮಟೆ ವಾದ್ಯದೊಂದಿಗೆ ಕುಣಿತ, ಸ್ಥಳ: ಕ್ಯಾತಮಾರನಹಳ್ಳಿ ದೇವಸ್ಥಾನ ಆವರಣ.
- **ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಮೂಲ ಸಂಸ್ಕೃತಿ–ಕನ್ನಡ ಸಂಸ್ಕೃತಿ ನಶಿಸಿ ಹೋಗುತ್ತಿರುವ ತಳ ಸಮುದಾಯಗಳ ವಿಶಿಷ್ಟ ಕಲೆಗಳ ತರಬೇತಿ ಶಿಬಿರದ ಸಮಾರೋಪ ಸಮಾರಂಭ ಮತ್ತು ಶಿಬಿರಾರ್ಥಿಗಳಿಂದ ಕಲಾ ಪ್ರದರ್ಶನ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಉಪಸ್ಥಿತರು: ಕನ್ನಡ ಮತ್ತು ಸಂಸ್ಕೃತಿ, ಇಂಧನ ಸಚಿವ ವಿ.ಸುನಿಲ್‌ಕುಮಾರ್, ಅಧ್ಯಕ್ಷತೆ: ಶಾಸಕ ಎಸ್.ಎ.ರಾಮದಾಸ್, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್, ಸ್ಥಳ: ಅರಮನೆ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗ, ಸಂಜೆ 5.30ಕ್ಕೆ.
- **ಅದಮ್ಯ ರಂಗಶಾಲೆ:** ರಂಗ ತರಬೇತಿ ಶಿಬಿರ ಉದ್ಘಾಟನೆ, ಸಂವಾದ ಹಾಗೂ ಅಭಿನಂದನೆ, ಉದ್ಘಾಟನೆ: ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಅಧ್ಯಕ್ಷತೆ: ರಂಗಕರ್ಮಿ ಪ್ರೊ.ಎಚ್.ಎಸ್.ಉಮೇಶ್, ಆಶಯ ನುಡಿ: ಸಾಹಿತಿ ಟಿ.ಸತೀಶ್ ಜವರೇಗೌಡ, ಮುಖ್ಯ ಅತಿಥಿಗಳು: ಹಿರಿಯ ವಿಜ್ಞಾನ ಲೇಖಕ ಸಾತನೂರು ದೇವರಾಜ್, ಸ್ಥಳ: ಶ್ರೀಕುವೆಂಪು ರಂಗಮಂದಿರ, ಶ್ರೀ ವಿವೇಕಾನಂದ ಪದವಿಪೂರ್ವ ಕಾಲೇಜು, ಜಯಲಕ್ಷ್ಮಿಪುರಂ, ಸಂಜೆ 6ಕ್ಕೆ.
- **ಗಾನಭಾರತೀ :** ನೃತ್ಯೋಲ್ಲಾಸ, ಸಂಜೆ 6 ರಿಂದ ಡಾ. ಮನಸ್ವಿನಿ ಎಚ್.ಆರ್. ಅವರಿಂದ ಭರತನಾಟ್ಯ, ಸಂಜೆ 7 ರಿಂದ ಗಂಗೂಬಾಯಿ ಹಾನಗಲ್ ಸಂಗೀತ ಹಾಗೂ ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಭರತನಾಟ್ಯ ವಿಭಾಗದ ವಿದ್ಯಾರ್ಥಿಗಳಿಂದ ಭರತನಾಟ್ಯ, ಸ್ಥಳ: ವೀಣೆ ಶೇಷಣ್ಣ ಭವನ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಕನ್ನಡದ ಅನನ್ಯ ಲೇಖಕಿಯರು, ಲೇಖನ– ಪ್ರೊ.ಹೇಮಲತಾ ಎಚ್.ಎಂ., 6.40 ಅರಿವಿನ ಶಿಖರ, ಗಾಯನ– ಜಯಂತಿ ವಿ ಭಟ್, ಎಂ.ಎ. ಜ್ಯೋತಿ, ವ್ಯಾಖ್ಯಾನ– ಡಾ. ಬಿ.ವಿ. ವಸಂತ ಕುಮಾರ್, 7.15 ಪ್ರಾಯೋಜಿತ ಕಾರ್ಯಕ್ರಮ "ಸಮಗ್ರ ಶಿಕ್ಷಣ ಸಂಚಲನ", 9.00 ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆರೋಗ್ಯ ಕಾರ್ಯಕ್ರಮ, 9.30 ಗಾಂಧೀ ಸ್ಮೃತಿ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕಾದಂಬರಿ ವಿಹಾರ–ಡಾ.ಎಸ್.ಎಲ್. ಭೈರಪ್ಪ ನವರ ದೂರ ಸರಿದರು ಕಾದಂಬರಿಯ ಬಾನುಲಿ ಓದು ಪ್ರಸ್ತುತಿ–ಉಮೇಶ್ ಎಸ್.ಎಸ್., 1.20 ಭಾವಗೀತೆ, 2.50 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ– ಜಿ.ಕೆ. ರವೀಂದ್ರಕುಮಾರ್, 3.00 ಮೌನದಾಚೆಯ ಬೆಳಕು– ಸದಾಶಿವ ಬ್ರಹ್ಮೇಂದ್ರರ ಜೀವನ ಹಾಗೂ ರಚನೆಗಳನ್ನಾಧರಿಸಿದ ವಿಶೇಷ ಕಾರ್ಯಕ್ರಮ ಸರಣಿ, 4.00 ಮಹಿಳಾರಂಗ, 4.30 ವೃತ್ತಿ ಮಾಗದರ್ಶನ, 6.50 ಕೃಷಿರಂಗ ಕಿಸಾನ್‌ವಾಣಿ, 9.15 ಜನಪದಸಂಗೀತ, 10.00 ವಾದ್ಯವೃಂದ, 10.30 ಸವಿನೆನಪು

ಕ್ಷೇತ್ರದ ಜನತೆ ಸ್ವಚ್ಛ ರಾಜಕಾರಣಕ್ಕೆ ಈ ಬಾರಿ ಭಾಷ್ಯ ಬರೆಯಲಿದ್ದಾರೆ

● ಶಾಸಕ ರಾಮದಾಸ್ ಅತೀವ ವಿಶ್ವಾಸ ● ಕ್ಷೇತ್ರದ ಇತ್ತೀಚಿನ ವಿದ್ಯಮಾನದ ಬಗ್ಗೆ ಬೇಸರ



ಮೈಸೂರು, ಮಾ.2–ಚುನಾವಣೆಯಲ್ಲಿ ಜಾತಿ–ಮತ–ಸ್ವಜನ ಪಕ್ಷಪಾತಿಗಳಿಗೆ ಮಣೆ ಹಾಕಬೇಡಿ ಎಂದು ಶಾಸಕ ಎಸ್.ಎ. ರಾಮದಾಸ್ ಮನವಿ ಮಾಡಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ಆರಾಧ್ಯ ಮಹಾಸಭಾದಲ್ಲಿ ಆಯೋಜಿಸಿದ್ದ ವಾರ್ಡ್ ನಂ 55ರ ಭಾರತೀಯ ಜನತಾ ಪಾರ್ಟಿ ಮಹಿಳಾ ಮೋರ್ಚಾದ ವಾರ್ಡ್ ಮಟ್ಟದ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಚುನಾವಣೆಗೆ ಕೆಲವೇ ದಿನಗಳಿದ್ದು, ಈ ಸಂದರ್ಭದಲ್ಲಿ ಕೆಲವರು ಜಾತಿ ಹಾಗೂ ಧರ್ಮವನ್ನು ಮುನ್ನೆಲೆಗೆ ತಂದಿದ್ದಾರೆ. ಆದರೆ, ನಾನು ಅದೆಲ್ಲವನ್ನು ಮೀರಿ ಆಲೋಚಿಸುವವನು. ಹುಟ್ಟುವಾಗ ಇಂತಹವರುದೇ ಜಾತಿಯಲ್ಲಿ ಹುಟ್ಟಬೇಕೆಂದು ಅರ್ಜಿ ಹಾಕಿರಲಿಲ್ಲ. ಕೆಲವರು ಅವಕಾಶದ ದುರುಪಯೋಗಕ್ಕಾಗಿ ಹವಣಿಸುತ್ತಿದ್ದಾರೆ. ಅವರಿಗೆ ಮತದ ಮೂಲಕವೇ ಉತ್ತರ ನೀಡಿ ಎಂದು ಕರೆ ನೀಡಿದರು.

ಜಾತಿಯನ್ನು ಇಟ್ಟುಕೊಂಡೇ ಕೆಲವರು ನಿತ್ಯ ವ್ಯವಹಾರದಲ್ಲಿ ತೊಡಗಿದ್ದಾರೆ. ಅದರಂತಹ ಕೆಟ್ಟ ರಾಜಕಾರಣ ಮತ್ತೊಂದಿಲ್ಲ. ವ್ಯಕ್ತಿ ನೋಡಿ ಮತ ನೀಡಿ ಎಂದ ಅವರು, ಈ ಚುನಾವಣೆಯಲ್ಲಿ ಕೃಷ್ಣರಾಜ ವಿಧಾನ ಸಭಾ ಕ್ಷೇತ್ರ ಭ್ರಷ್ಟಾಚಾರ ಮುಕ್ತ ಕ್ಷೇತ್ರವೆಂಬ ಖ್ಯಾತಿ ಪಡೆಯಲಿದೆ. ಅದನ್ನು ಕ್ಷೇತ್ರದ ಮತದಾರರು ಸಾಕ್ಷಿ ಕರಿಸಲಿದ್ದಾರೆ. 1994ರಿಂದ ಈವರೆಗೆ ಕ್ಷೇತ್ರದಲ್ಲಿ ಹಣ, ಹೆಂಡ ಹಂಚಿಲ್ಲ. ನಿಮ್ಮೆಲ್ಲರ ವಿಶ್ವಾಸದಿಂದ ಆಯ್ಕೆಯಾಗುತ್ತಾ ಬಂದಿದ್ದೇನೆ. ನಿಮ್ಮ ಋಣ ನನ್ನ ಮೇಲಿದ್ದು, ಅದನ್ನು ಕಾಯಾ, ವಾಚಾ, ಮನಸಾ ತೀರಿಸುತ್ತಲೂ ಬಂದಿದ್ದೇನೆ. ಇದೀಗ ಮತ್ತೆ ಚುನಾವಣೆ ಎದುರಾಗಿದ್ದು, ಯಾವುದೇ ರೀತಿಯ ಖರ್ಚಿಲ್ಲದೆ ಈ ಚುನಾವಣೆ ನಡೆಸುವ ಮೂಲಕ ಹೊಸ ಭಾಷ್ಯ ಬರೆಯೋಣ ಎಂದರು.

ಹಣ, ಹೆಂಡ ಹಂಚಿ ಚುನಾವಣೆ ಮಾಡಬೇಡ ಎಂದು ನಮ್ಮ ತಾಯಿ ತಿಳಿಸಿದ್ದು, ಅವರಿಗೆ ಕೊಟ್ಟ ಮಾತಿನಂತೆ ಈವರೆಗೂ ನಡೆದುಕೊಂಡಿದ್ದೇನೆ. ತತ್ವಾದರ್ಶಗಳನ್ನು ಇಟ್ಟುಕೊಂಡು ರಾಜಕೀಯ ಬದುಕು ನಡೆಸಿದ್ದೇನೆ. ಆ ಬಗ್ಗೆ ಮೈಸೂರಿನ ಜನರಿಂದ ರಾಷ್ಟ್ರವ್ಯಾಪಿ ನಾಯಕರಿಗೂ ತಿಳಿದಿದೆ. ಅದು ಹಲವಾರು ದೊಡ್ಡ ದೊಡ್ಡ ವೇದಿಕೆಯಲ್ಲಿ ಚರ್ಚೆಯೂ ಆಗಿದೆ. ಅದು ನನ್ನೊಬ್ಬನಿಗೆ ಸಂದ ಗೌರವ ಅಲ್ಲ. ಇಡೀ ಕೃಷ್ಣರಾಜ ಕ್ಷೇತ್ರಕ್ಕೆ ಸಂದ ಗೌರವ ಎಂದು ತಿಳಿಸಿದರು.

ಪ್ರತಿಯೊಬ್ಬರೂ ಸ್ವಂತ ಮನೆ ಹೊಂದಲೇಬೇಕು ಎಂಬ ಮಹಾಸಂಕಲ್ಪದೊಂದಿಗೆ ಪ್ರಧಾನಮಂತ್ರಿ ಆವಾಸ್ ಯೋಜನೆಯನ್ನು ಕೃಷ್ಣರಾಜ ಕ್ಷೇತ್ರದಲ್ಲಿ ಯಶಸ್ವಿಯಾಗಿ ಜಾರಿ ಮಾಡಲಾಗಿದ್ದು, ಭಾಗಶಃ ಜನರಿಗೆ ಮನೆ ನೀಡಲಾಗಿದೆ. ಬಾಕಿ 6 ಸಾವಿರ ಮಂದಿಗೆ ಇದೇ ತಿಂಗಳ 19ರಂದು ಹಕ್ಕುಪತ್ರ ನೀಡಲಾಗುವುದು ಎಂದು ಘೋಷಿಸಿದರು.


ಕಾರ್ಯಕ್ರಮದಲ್ಲಿ ಕ್ಷೇತ್ರದ ಮಹಿಳಾ ಮೋರ್ಚಾ ಅಧ್ಯಕ್ಷೆ ಅನ್ನಪೂರ್ಣ, ಮುಖಂಡರಾದ ರವಿ ಕಾಳಪ್ಪ, ಗೀತಾ, ಭಾಗ್ಯ, ಶಿವಪ್ಪ ಮತ್ತಿತರರು ಉಪಸ್ಥಿತರಿದ್ದರು.

10 ರೂ. ನೀಡಿ

ನಾನು ನಿಮ್ಮ ಮನೆಯ ಮಗ, ನಿಮ್ಮ ಸಹೋದರ. ಆದ ಕಾರಣ ಒಂದು ಸಹಾಯ ಮಾಡಿ. ಪ್ರತಿ ಮನೆಯಿಂದ ಕೇವಲ 10 ರೂ. ಅನ್ನು ನಿಮ್ಮ ಮನೆಯಲ್ಲಿರುವ ಭಗವಂತನ ಮುಂದಿಟ್ಟು ಪೂಜಿಸಿ ಕೊಡಿ. ಅದು ಈ ಚುನಾವಣೆಗೆ ಠೇವಣಿ ಹಣವಾಗಲಿದೆ, ಅಷ್ಟು ಆಶೀರ್ವಾದ ಮಾಡಿ. ಈ ಕ್ಷೇತ್ರಕ್ಕೆ ನಾವ್ಯಾರೂ ಶಾಶ್ವತ ಅಲ್ಲ. ಆದರೆ, ಕ್ಷೇತ್ರ ಮಾದರಿಯಾಗಿ ಇರಬೇಕು. ಒಬ್ಬ ಸಾಮಾನ್ಯ ಕಾರ್ಯಕರ್ತ ಈ ಕ್ಷೇತ್ರದ ಶಾಸಕನಾಗಬೇಕು. ಆದರೆ, ದುರ್ದೈವದ ಸಂಗತಿ ಎಂದರೆ ಹಣ ಇರುವವರಿಗೆ ಮಾತ್ರ ಚುನಾವಣೆ ಎಂಬಂತಾಗಿದೆ. ಅದು ಕೃಷ್ಣರಾಜ ಕ್ಷೇತ್ರದ ಮಟ್ಟಿಗೆ ದೂರವಾಗಬೇಕಿದೆ.

-ಎಸ್.ಎ.ರಾಮದಾಸ್, ಶಾಸಕ

ಮಾ.5 ರಂದು ಕೆಬಿಜಿ ವೃತ್ತಿಪರ ಪಯಣ



ಮೈಸೂರು, ಮಾ. 2– ಮೈಸೂರು ಓಪನ್ ಫೋರಂ ವತಿಯಿಂದ ಮಾ. 5 ರಂದು ಸಂಜೆ 5 ಗಂಟೆಗೆ ವಿಜಯನಗರ 4ನೇ ಹಂತದಲ್ಲಿರುವ ಕಲ್ಪಕ್ಷೇತ್ರ ಸಭಾಂಗಣದಲ್ಲಿ 'ಸ್ಟಾರ್ ಆಫ್ ಮೈಸೂರ್' ಮತ್ತು 'ಮೈಸೂರು ಮಿತ್ರ' ಸಂಸ್ಥಾಪಕ ಸಂಪಾದಕರಾದ ಕೆ.ಬಿ. ಗಣಪತಿ (ಕೆಬಿಜಿ) ಅವರ 'ಓರ್ವ ಪತ್ರಕರ್ತನ ವೃತ್ತಿಪರ ಪಯಣ' ಕಾರ್ಯಕ್ರಮ ಆಯೋಜಿಸಲಾಗಿದೆ.

ಕೆಬಿಜಿ ಅವರು, ನಾಲ್ಕೂವರೆ ದಶಕಗಳ ಹಿಂದೆ 'ಸ್ಟಾರ್ ಆಫ್ ಮೈಸೂರ್' ಹಾಗೂ 'ಮೈಸೂರು ಮಿತ್ರ' ಆರಂಭಿಸಿದರು. ಈಗ ಈ ಎರಡೂ ಪತ್ರಿಕೆಗಳು ಹಳೆ ಮೈಸೂರು ಭಾಗದಲ್ಲಿ ಅಪಾರ ಜನಮನ್ನಣೆ ಗಳಿಸಿವೆ.

ಇವರು ಹೆಸರಾಂತ ಬರಹಗಾರರೂ ಕೂಡ. ಆಂಗ್ಲ ಮತ್ತು ಕನ್ನಡದಲ್ಲಿ 'ಆದರ್ಶವಾದಿ', 'ಅಮೇರಿಕ–ಎನ್ ಏರಿಯಾ ಆಫ್ ಲೈಟ್', 'ದಿ ಕ್ರಾಸ್ ಅಂಡ್ ದಿ ಕೂರ್ಗ್ಸ್', 'ಸ್ವೋರ್ಡ್ಸ್ ಆಫ್ ಶಿವಾಜಿ', ಈ ಪತ್ರಿಕೆಗಳಲ್ಲಿ ಪ್ರಕಟಿತ ಇವರ ಲೇಖನಗಳ ಸಂಕಲನ 'ಭೂಮಂತ್ರ' ಇತ್ಯಾದಿ ಪುಸ್ತಕಗಳು ಪ್ರಕಟಗೊಂಡಿವೆ.

ಕೆ.ಬಿ. ಗಣಪತಿಯವರು ತಾವು ಆಕಸ್ಮಿಕ ಪತ್ರಿಕೋದ್ಯಮಿಯಾಗಿ ನಡೆದು ಬಂದ ಹಾದಿ, ಅದರಲ್ಲಿನ ಏರು ಪೇರಿನ ಬಗ್ಗೆ ಮಾತನಾಡಲಿದ್ದಾರೆ.

PUBLIC NOTICE

The General public are hereby notified that, our clients have agreed to purchase the Schedule Property from its Owner **SMT.NAGARATHNAMMA (NAGARATHNA)** W/o Sri.A.Papanna, residing at No.150, Hundi Street, Hinkal, Mysore-570017.

Apart from the said owner,if any other person/s have any manner of right, title and or interest or claim or charge or lien over the Schedule Property or otherwise have any lawful objection/s for this sale transaction, they are hereby called upon to file their objection/s in writing, along with the photocopies of documents on which they rely, with the undersigned, **within 05 days** from the date of publication of this notice. Objection/s received thereafter will not be binding on our clients.

SCHEDULE

Item No.1: All that piece and parcel of the residential **Site bearing No.801/A**, measuring East to West 15.00 Mtrs and North to South 24.00 Mtrs, in all measuring 360.00 Sq.Mtrs, situated at **2nd Phase, 4th Stage, Vijayanagara, Mysore City** and bounded as follows :

East by : Site bearing No.801
West by : Site bearing No.801/B
North by : Site bearing No.771/A
South by : Road

Item No.2: All that piece and parcel of the residential **Site bearing No.801/B**, measuring East to West 15.00 Mtrs and North to South 24.00 Mtrs, in all measuring 360.00 Sq.Mtrs, situated at **2nd Phase, 4th Stage, Vijayanagara, Mysore** and bounded as follows :

East by : Site bearing No.801/A
West by : Site bearing No.801/C
North by : Site bearing No.771
South by : Road

Sd/- BAYYA REDDY. M
ISHA LAW CHAMBERS LLP,
Advocates & Solicitors,
No.101, 4th Floor, Sri Manjunatha Complex, Opp. Banashankari BDA Complex, 22nd Main Road, BSK 2nd Stage, Bengaluru-560070

JNANAGANGA RESIDENTIAL SCHOOL, ATTUR

AFFILIATED TO CBSE NEW DELHI Affiliation No. 830174
School Code. 45165
PANCHAVATI, ATTUR, HARANGI POST – 571 233
KUSHALNAGAR, KODAGU
TEACHER VACANCIES
BOTH RESIDENTIAL AND NON-RESIDENTIAL

SL. NO	NAME OF THE POST	SUBJECT	NO. OF VACANCIES	MINIMUM QUALIFICATION
1	ASSISTANT TEACHER	KANNADA	2	M. A / B. A B.Ed
		ENGLISH	1	M. A/ B. A B.Ed
		HINDI	2	M. A / B. A B.Ed
		SCIENCE	4	M. Sc / B. Sc B.Ed
		MATHS	2	M. Sc / B. Sc B.Ed
		SOCIAL	1	M. A / B. A B.Ed
		COMPUTER	1	M. C. A / B. C. A B.Ed
2	PHYSICAL INSTRUCTOR	PHYSICAL TRAINING	3	M. P. Ed / B.P.Ed

Candidates with Application, who are dynamic, committed to their profession, proficient in the subjects and in written and spoken English should apply with their Resume latest by 15th of March 2023. The interview will be scheduled on 23rd, 24th and 25th of March between 10:00 AM to 03:00 PM. The candidates should carry all the necessary documents from SSLC onwards.

For all the posts candidates must possess minimum qualification as prescribed by CBSE, B.Ed is Mandatory for all candidates except for physical instructor.

PLEASE CONTACT THE SCHOOL OFFICE FOR DETAILS
08276-200581, 200591, 9481386320, 8296216250
Email : jnanagangaschool@yahoo.com

ನಕ್ಕರೆ ಅದೇ ಸ್ವರ್ಗ

ಗುಂಡ : ನಂಗೇನಾಗಿದೆ ಡಾಕ್ಟ್ರೇ?
ಡಾಕ್ಟರ್ : ಸಾರಿ ಗುಂಡ... ನೀವು ಇನ್ನು ಎರಡು ಗಂಟೇಲಿ ಸಾಯ್ತೀರಿ. ಅದಕ್ಕೂ ಮುಂಚೆ ಯಾರನ್ನಾದ್ರೂ ನೋಡ್ಬೇಕಾ?
ಗುಂಡ : "ಹೌದು ಸಾರ್... ಒಳ್ಳೆ ಡಾಕ್ಟ್ರನ್ನ ನೋಡ್ಬೇಕು ಅಂತಿದ್ದೀನಿ!

ಮೈಸೂರು ಮಿತ್ರ
ಶುಕ್ರವಾರ, 3 ಮಾರ್ಚ್ 2023
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........
ಅಪವಾದಗಳಿಗೆ ಅತ್ಯುತ್ತಮ ಉತ್ತರ ಮೌನ –ಬೆನ್ ಜಾನ್ಸನ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮನವೇ ಗಂಗೆ ಮನೆಯೇ ಕಾಶಿ

ನಿಮ್ಮ ಪತ್ರಗಳು

ಹದಗೆಟ್ಟ ರಸ್ತೆಗಳಿಗೆ ಡಾಂಬರೀಕರಣ ಮಾಡಿ

ಮಾನ್ಯರೇ,
ಮೈಸೂರಿನ ಪ್ರತಿಷ್ಠಿತ ಏರಿಯಾಗಳಲ್ಲಿ ಒಂದಾದ ಕುವೆಂಪುನಗರ ಕೆ ಬ್ಲಾಕ್‌ನ ಹಲವು ಕ್ರಾಸ್‌ಗಳಲ್ಲಿ ಒಳಚರಂಡಿ ಪೈಪ್ ಅಳವಡಿಸಲು ಎರಡು ವರ್ಷಗಳ ಮುಂಚೆ ರಸ್ತೆಯನ್ನು ಅಗೆದು ಅದನ್ನು ಹಾಗೆ ಬಿಟ್ಟಿದ್ದಾರೆ. ಇತ್ತೀಚಿನ ದಿನಗಳಲ್ಲಿ ಚೆನ್ನಾಗಿರುವ ಹಲವು ರಸ್ತೆಗಳಿಗೆ ಡಾಂಬರೀಕರಣ ಮಾಡಿದರೂ ಸಹ ಈ ರಸ್ತೆಯನ್ನು ಏನು ಮಾಡದೆ ಹಾಗೆ ಬಿಡಲಾಗಿದೆ. ಸಂಬಂಧಪಟ್ಟ ಶಾಸಕರು ಹಾಗೂ ಅಧಿಕಾರಿಗಳು ಇದರ ಬಗ್ಗೆ ತಲೆಕೆಡಿಸಿಕೊಳ್ಳುತ್ತಿಲ್ಲ. ಕೆಲವು ದಿನಗಳ ಮುಂಚೆ ಇದೇ ಏರಿಯಾದಲ್ಲಿ ಏಳು ರಸ್ತೆಗಳಲ್ಲಿ ಸರಿಯಿದ್ದ ಒಂದು ಕ್ರಾಸ್‌ನಲ್ಲಿ ಮಾತ್ರ ಡಾಂಬರೀಕರಣ ನಡೆಸಿದ್ದು, ಉಳಿದ ಹಾಳಾಗಿರುವ 6 ರಸ್ತೆಯನ್ನು ಹಾಗೆ ಬಿಟ್ಟು ಹೋಗಲಾಗಿದೆ.
ಈಗ ಚುನಾವಣೆ ಸಮಯ ಹತ್ತಿರ ಬಂದು ಈ ತಿಂಗಳು ಈ ರಸ್ತೆಯನ್ನು ಸರಿಪಡಿಸದಿದ್ದಲ್ಲಿ ಚುನಾವಣಾ ನೀತಿ ಸಂಹಿತೆ ಜಾರಿಯಾಗಲಿದ್ದು, ಮತ್ತಷ್ಟು ವರ್ಷ ಹೀಗೆ ಬಿದ್ದಿರುತ್ತದೆ. ಸಂಬಂಧಪಟ್ಟ ಅಧಿಕಾರಿಗಳು ಈಗಲಾದರೂ ಎಚ್ಚೆತ್ತು ಈ ಕಾರ್ಯ ಪೂರ್ಣಗೊಳಿಸಬೇಕಾಗಿ ವಿನಂತಿ. ಇಲ್ಲದೇ ಹೋದರೆ ಮತ ಕೇಳಲು ಬರುವ ನಾಯಕರು ಯೋಚಿಸಿ ನಂತರ ಮತ ಕೇಳಲು ನಮ್ಮ ಕ್ಷೇತ್ರಕ್ಕೆ ಬರಬೇಕು.
–ರಾಘವೇಂದ್ರ, ಸಾಮಾಜಿಕ ಕಾರ್ಯಕರ್ತ, ಕುವೆಂಪು ನಗರ, ಮೈಸೂರು.

ಶಾಸಕ ತನ್ವೀರ್ ಸೇಠ್ ಸಕ್ರಿಯ ರಾಜಕಾರಣ ತೊರೆಯದಿರಲಿ

ಮಾನ್ಯರೆ,
ಮೈಸೂರಿನ ನರಸಿಂಹರಾಜ ಕ್ಷೇತ್ರದ ಹಿರಿಯ ಕಾಂಗ್ರೆಸ್ ನಾಯಕ, ಮಾಜಿ ಸಚಿವ ತನ್ವೀರ್ ಸೇಠ್ ಚುನಾವಣಾ ರಾಜಕೀಯದಿಂದ ಹಿಂದಕ್ಕೆ ಸರಿಯುವ ನಿರ್ಧಾರದ ವಿರುದ್ಧ ಅವರ ಸಾವಿರಾರು ಅಭಿಮಾನಿಗಳು ತೀವ್ರ ವಿರೋಧ ಸೂಚಿಸಿ ಪ್ರತಿಭಟನೆ ನಡೆಸಿರುವುದು ಮಾಧ್ಯಮಗಳಲ್ಲಿ ವರದಿಯಾಗಿದೆ. ಒಂದಿಬ್ಬರು ಆತ್ಮಹತ್ಯೆಗೆ ಕೂಡ ಪ್ರಯತ್ನಿಸಿದ್ದಾರೆ. ಅಲ್ಪ ಸಂಖ್ಯಾತ ಮುಸ್ಲಿಂ ಸಮುದಾಯಕ್ಕೆ ಸೇರಿರುವ ತನ್ವೀರ್ ಸೇಠ್ ತಮ್ಮ ಎನ್.ಆರ್. ಕ್ಷೇತ್ರದಲ್ಲಿ ಸಾಕಷ್ಟು ಜನಪರವಾದ ಹಾಗೂ ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಾ ಬಂದಿದ್ದಾರೆ ಹಾಗೂ ಐದು ಬಾರಿ ವಿಧಾನಸಭಾ ಚುನಾವಣೆಯಲ್ಲಿ ಗೆದ್ದು ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು ಕೂಡ ಆಗಿದ್ದಾರೆ. ತಮ್ಮ ಕ್ಷೇತ್ರದಲ್ಲಿ ಜನಾನುರಾಗಿಯಾಗಿದ್ದಾರೆ. ಅವರ ತಂದೆ ದಿವಂಗತ ಅಜೀಜ್ ಸೇಠ್ ಸಹ ಓರ್ವ ಜನಪ್ರಿಯ ನಾಯಕರಾಗಿ ಜನಪ್ರಿಯತೆ ಗಳಿಸಿದವರು. ಇಂದಿರಾ ಗಾಂಧಿಯವರ ಕಾಲದಲ್ಲಿ ಅತ್ಯಂತ ಜನಪ್ರಿಯರಾಗಿದ್ದ ಅಜೀಜ್ ಸೇಠ್ ದಿವಂಗತ ಮುಖ್ಯಮಂತ್ರಿ ದೇವರಾಜ ಅರಸು ಅವರ ಕ್ಯಾಬಿನೆಟ್‌ನಲ್ಲಿ ಸಾರಿಗೆ ಸೇರಿದಂತೆ ಹಲವಾರು ಪ್ರಮುಖ ಖಾತೆಗಳನ್ನು ಯಶಸ್ವಿಯಾಗಿ ನಿರ್ವಹಿಸಿದವರು. ಯಾವುದೇ ಸಭೆ ಸಮಾರಂಭಗಳಲ್ಲಿ ಕಾಲ ಮೇಲೆ ಕಾಲು ಹಾಕಿ ಕುಳಿತು ಅವರಿಗೆ ಪ್ರಿಯವಾದ ಸಿಗಾರ್ ಸೇದುತ್ತಲೇ ನೆರೆದ ಜನರ ಗಮನ ಸೆಳೆಯುತ್ತಿದ್ದ ಅಜೀಜ್ ಸೇಠ್ ಒಮ್ಮೆ ಧಾರವಾಡ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ನಿಂತು ಗೆಲುವು ಸಾಧಿಸಿದ್ದರು. ಕೆಲವು ವರ್ಷಗಳ ಹಿಂದೆ ತನ್ವೀರ್ ಸೇಠ್ ಮೇಲೆ ಮಾರಣಾಂತಿಕ ಹಲ್ಲೆ ನಡೆದು ಸಾವು ಬದುಕಿನ ನಡುವೆ ಸೆಣೆಸಿ, ಪುನರ್ಜನ್ಮ ಪಡೆದಿದ್ದರೂ ಸಹ ತನ್ವೀರ್ ಅವರಿಗೆ ಕೆಲವು ಆರೋಗ್ಯ ಸಮಸ್ಯೆಗಳಿದ್ದು ಅವುಗಳಿಂದಾಗಿಯೇ ಸಕ್ರಿಯ ರಾಜಕೀಯ ತೊರೆಯುವ ನಿರ್ಧಾರ ತೆಗೆದುಕೊಂಡಿರುವುದಾಗಿ ಅವರೇ ಹೇಳಿಕೊಂಡಿದ್ದಾರೆ. ತನ್ವೀರ್ ಸೇಠ್ ಓರ್ವ ಸಮರ್ಥ ಹಾಗೂ ಪ್ರಾಮಾಣಿಕ ರಾಜಕಾರಿಣಿಯಾಗಿದ್ದು ರಾಜಕೀಯ ವಲಯದಲ್ಲಿ "ಅಜಾತ ಶತ್ರು" ಎನ್ನಿಸಿಕೊಂಡಿದ್ದಾರೆ. ಅವರು ತಮ್ಮ ಆರೋಗ್ಯವನ್ನು ಸರಿಪಡಿಸಿಕೊಂಡು, ತಮ್ಮ ಕ್ಷೇತ್ರದ ಜನರ ಭಾವನೆಗಳಿಗೆ ಸ್ಪಂದಿಸಿ ಸಕ್ರಿಯ ರಾಜಕಾರಣದಲ್ಲಿ ಮುಂದುವರೆಯುವುದು ಒಳ್ಳೆಯದು. ಪ್ರಜಾಪ್ರಭುತ್ವದಲ್ಲಿ ಜನರೇ ಅಂತಿಮ ಪ್ರಭುಗಳು. ಅವರನ್ನು ತನ್ವೀರ್ ನಿರಾಸೆಗೊಳಿಸದಿರಲಿ. –ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಸರ್ಕಾರಿ ಶಾಲೆಗಳ ಮುಚ್ಚುವ ಆದೇಶ ವಾಪಸ್ ಪಡೆಯಲಿ

ಮಾನ್ಯರೆ,
ನಮ್ಮ ದೇಶವು ಕೃಷಿ ಅವಲಂಬಿತ ಪ್ರದೇಶ. ಶೇ. 75ಕ್ಕೂ ಹೆಚ್ಚು ವ್ಯವಸಾಯ ಮಾಡಿಕೊಂಡು ಬದುಕು ಕಟ್ಟಿಕೊಂಡು ಜೀವನ ನಡೆಸುತ್ತಿರುವ ಕುಟುಂಬಗಳಲ್ಲಿ ಅವರ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಿ ಉದ್ಯೋಗಕ್ಕೆ ಸೇರಿಸಿ ಬದುಕು ಕಟ್ಟಿಕೊಳ್ಳುವ ನಿರ್ಧಾರದಿಂದ ಖಾಸಗಿ ಶಾಲೆಗೆ ಹಣ ಕಟ್ಟಲಾಗದೆ ಒದ್ದಾಡುತ್ತಿದ್ದಾರೆ. ರಾಜ್ಯ ಹಾಗೂ ದೇಶದಾದ್ಯಂತ ದಲಿತರು, ಬಡವರು, ಕೂಲಿ ಕಾರ್ಮಿಕರ, ಪೌರ ಕಾರ್ಮಿಕರ, ಅಲ್ಪಸಂಖ್ಯಾತರ ಹಾಗೂ ಇತರರು ಮಕ್ಕಳು ಶಿಕ್ಷಣ ಪಡೆಯುವ ಗುರಿಯನ್ನು ಹೊಂದಿ ಸರ್ಕಾರಿ ಶಾಲೆಗೆ ಕಳುಹಿಸುತ್ತಾರೆ. ಈಗಾಗಲೇ ಕರ್ನಾಟಕ ಆಡಳಿತ ಸುಧಾರಣಾ ಆಯೋಗದಿಂದ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದು, ಪ್ರಕಾರ ಕಿರಿಯ ಪ್ರಾಥಮಿಕ ಶಾಲೆ – 3457 ಹಾಗೂ ಹಿರಿಯ ಪ್ರಾಥಮಿಕ ಶಾಲೆ 1667 ಒಟ್ಟು 5124 ಶಾಲೆಯಲ್ಲಿ ವಿದ್ಯಾರ್ಥಿಗಳ ಕೊರತೆಯ ಕಾರಣ ನೀಡಿ ಶಾಲೆಗಳ ಬಂದ್‌ಗೆ ಶಿಫಾರಸ್ಸು ಮಾಡಿರುವುದು ಖಂಡನೀಯ. ಹಾಗೂ ಇವುಗಳಲ್ಲಿ 2460 ಮತ್ತು 1135 ಶಾಲೆಗಳನ್ನು ಸಂಯುಕ್ತ, ಕ್ಲಸ್ಟರ್ ಪ್ರೌಢಶಾಲೆ, ಕರ್ನಾಟಕ ಪಬ್ಲಿಕ್ ಶಾಲೆ ಗಳಾಗಿಸಲು ತೀರ್ಮಾನಿಸಲಾಗಿದೆ. ಆದರೂ ಸಹ ಈ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರು ಉದ್ಯೋಗ ಕಳೆದು ಕೊಂಡರೇ ಅವರಿಗೆ ಪರಿಹಾರವೇನು? ಇಲ್ಲಿನ ವಿದ್ಯಾರ್ಥಿಗಳನ್ನು ಖಾಸಗಿ ಶಾಲೆಯಲ್ಲಿ ಸೇರಿಸಿದರೆ ಸರ್ಕಾರವೇ ವಿದ್ಯಾರ್ಥಿಗಳ ಶುಲ್ಕ ವಿಚಾರವೇನು? ರಾಜ್ಯದಲ್ಲಿ ಖಾಸಗಿ ಶಿಕ್ಷಣ ಸಂಸ್ಥೆಗಳು ಹೆಚ್ಚಾದರೇ ಪೋಷಕರು ಬಡವರಾಗಿದ್ದು, ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಹಣಕಟ್ಟಲಾಗದಿರುವ ದಿನ ಬರುತ್ತದೆ. ಇಂತಹ ಕಷ್ಟದ ಬಗ್ಗೆ ಸರ್ಕಾರ ಕೂಡಲೇ ಯೋಚಿಸಿ ಸರ್ಕಾರಿ ಶಾಲೆಗಳನ್ನು ಮುಚ್ಚುವ ಆದೇಶವನ್ನು ವಾಪಸ್ಸು ಪಡೆಯಬೇಕೆಂದು ಈ ಮೂಲಕ ಮನವಿ.
–ನಾಗೇಶ್, ಮಾನಸಗಂಗೋತ್ರಿ

ಚತುಷ್ಪಥ ಮೇಲ್ಸೇತುವೆ ಯೋಜನೆ ಕೈಬಿಡಿ

ಮಾನ್ಯರೇ,
ನಮ್ಮ ಬೆಂಗಳೂರಿನ ವಾಹನ ಸಂಚಾರದ ದಟ್ಟಣೆ ಕಡಿಮೆ ಮಾಡಲು, ಬಹಳಷ್ಟು ಕಡೆ ಚತುಷ್ಪಥ ಮೇಲ್ಸೇತುವೆಗಳನ್ನು ರಾಜಧಾನಿಯಲ್ಲಿ ನಿರ್ಮಿಸುವ ಪ್ರಸ್ತಾವನೆ ಸರಕಾರದಿಂದ ಕೇಳಿಬರುತ್ತಿದೆ. ಈ ಯೋಜನೆಗಳಿಗಾಗಿ 400ಕ್ಕೂ ಹೆಚ್ಚು ಪಾರಂಪರಿಕ ಮರಗಳನ್ನು ಧರೆಗೆ ಉರುಳಿಸಲಾಗುವುದು ಎಂದು ಅಂದಾಜಿಸಲಾಗಿದೆ. ಇದು ಮತ್ತಷ್ಟು ವಾಹನ ಸಂಚಾರ ಅಡೆತಡೆಗಳನ್ನು ಉಂಟುಮಾಡಬಹುದಲ್ಲದೆ, ಪ್ರಧೂಷಣೆಯನ್ನೂ ಹೆಚ್ಚು ಮಾಡುತ್ತದೆ. ಈ ಯೋಜನೆಗಳು ಪಾದಚಾರಿಗಳಿಗೆ ಅಡೆ ತಡೆ ಉಂಟುಮಾಡುತ್ತದೆ ಹಾಗೂ ಸಂಚಾರ ದಟ್ಟಣೆಯ ಸಮಸ್ಯೆಯಿಂದಾಗಿ ಹೆಚ್ಚಿನ ಇಂಧನ ವಿನಿಯೋಗವಾಗುತ್ತದೆ. ಆದ್ದರಿಂದ, ಸರ್ಕಾರ ಮತ್ತು ಬಿಬಿಎಂಪಿ ಈ ಯೋಜನೆಗಳನ್ನು ಕೈ ಬಿಡಬೇಕು. – ವಿಜಯಕುಮಾರ್ ಎಚ್.ಕೆ., ಪರಿಸರವಾದಿ

ಚಿರತೆ ರಕ್ಷಣೆಗೆ ಕೊಡಗಿನ ಪಶುವೈದ್ಯೆಯ ಹರಸಾಹಸ





ಬಾವಿಯೊಳಗೆ ಬಿದ್ದಿದ್ದ ಚಿರತೆ ರಕ್ಷಣೆಗಾಗಿ ಬೋನಿನಲ್ಲಿ ಬಾವಿಯೊಳಗೆ ಇಳಿಯುತ್ತಿರುವ ಡಾ.ಮೇಘನಾ.


ರೋಚಕ ಕಾರ್ಯಾಚರಣೆ ಮೂಲಕ 25 ಅಡಿ ಆಳದ ಬಾವಿಗಿಳಿದು ರಕ್ಷಣೆ

ಮೈಸೂರು, ಮಾ.2(ಅಕ್ಷಯ್/ಬಿಸಿಟಿ/ಪಿಎಂ)– ಅತ್ಯಂತ ಸವಾಲು ಮತ್ತು ರೋಚಕ ಕಾರ್ಯಾಚರಣೆ ಮೂಲಕ ಕೊಡಗು ಮೂಲದ ಪಶುವೈದ್ಯೆ ಡಾ. ಪಂದಿಕಂಡ ಮೇಘನಾ ಪೆಮ್ಮಯ್ಯ, ಚಿರತೆ ಮರಿಯೊಂದನ್ನು ರಕ್ಷಿಸಿ ಅದಕ್ಕೆ ಮರುಜೀವ ನೀಡಿದ್ದಾರೆ.
ದಾರಿ ತಪ್ಪಿ ಬಾವಿಯೊಳಗೆ ಬಿದ್ದು ಆತಂಕದಲ್ಲಿದ್ದ ಒಂದು ವರ್ಷ ಪ್ರಾಯದ ಹೆಣ್ಣು ಚಿರತೆ ಮರಿ, ಇದೀಗ ಮರಳಿ ಕಾಡಿಗೆ ಸೇರಿದೆ. ದಕ್ಷಿಣ ಕನ್ನಡದ ಮೂಡುಬಿದಿರೆಯ ನಿಡ್ಡೋಡಿ ಎಂಬಲ್ಲಿ ಬಾವಿಯೊಂದಕ್ಕೆ ಬಿದ್ದಿದ್ದ ಚಿರತೆಯನ್ನು ಸುರಕ್ಷಿತವಾಗಿ ಮೇಲೆ ತರಲು ಕಾರ್ಯಾಚರಣೆ ನಡೆಸಿ ಡಾ.ಮೇಘನಾ ಪೆಮ್ಮಯ್ಯ ಯಶಸ್ವಿಯಾಗಿದ್ದಾರೆ. 25 ಅಡಿ ಆಳದ ಬಾವಿಯೊಳಗೆ ಬಿದ್ದಿದ್ದ ಚಿರತೆಯನ್ನು ರಕ್ಷಿಸಿದ್ದು, 36 ಗಂಟೆಗಳ ಕಾಲ ಹಸಿವಿ ನಿಂದ ಕಂಗೆಟ್ಟಿದ್ದ ಚಿರತೆಯ ರಕ್ಷಣೆ ಕಾರ್ಯಾಚರಣೆ ರೋಮಾಂಚನ ಕಾರಿಯೇ ಸರಿ. ಅರಿವಳಿಕೆ ಮದ್ದು ತುಂಬಿದ್ದ ಡಾರ್ಟ್ ಗನ್ ಹಿಡಿದು ಬೋನಿಯೊಳಗೆ ಕೂತು ಬಾವಿಗೆ ಇಳಿದಿದ್ದ ಇವರು, ಅದೇ ಬೋನಿಗೆ ಚಿರತೆ ಮರಿಯನ್ನು ಹಾಕಿಕೊಂಡು ಮೇಲೆ ತರುವಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ.
ಎರಡು ಗಂಟೆಗಳ ರಕ್ಷಣಾ ಕಾರ್ಯಾಚರಣೆ ನೋಡುಗರ ಮೈ ನಡುಗಿಸಿತು. ಡಾ.ಮೇಘನಾರ ಪತಿ ಡಾ.ಯಶಸ್ವಿ ನಾರಾವಿಯವರು ಕೂಡ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು. 31 ವರ್ಷದ ಡಾ.ಮೇಘನಾ ಸ್ವಯಂಪ್ರೇರಣೆಯಿಂದ ಬಾವಿಗಿಳಿದು ಸಂಕಷ್ಟಕ್ಕೆ ಸಿಲುಕಿದ್ದ ವನ್ಯ ಜೀವಿಯೊಂದನ್ನು ರಕ್ಷಿಸಿದ್ದಾರೆ.
'ಮಂಗಳೂರಿನಿಂದ ಸುಮಾರು 35 ಕಿ.ಮೀ. ದೂರದ ನಿಡ್ಡೋಡಿ ಗ್ರಾಮದಲ್ಲಿ ಮನೆಯೊಂದರ ಬಳಿಯ ಬಾವಿಯೊಳಗೆ ಚಿರತೆ ಬಿದ್ದಿತ್ತು. ಮಂಗಳೂರಿನ 'ಚಿಟ್ಟೆ



ಮೇಘನಾ ಪೆಮ್ಮಯ್ಯ

ಪಿಲಿ' ವೈಲ್ಡ್ ಲೈಫ್ ರೆಸ್ಕ್ಯೂ ಸೆಂಟರ್‌ನ ನಮ್ಮ ತಂಡಕ್ಕೆ ಫೆ.13ರಂದು ಬೆಳಗ್ಗೆ 9 ಗಂಟೆಗೆ ಅರಣ್ಯ ಇಲಾಖೆಯಿಂದ ಕರೆ ಬಂದಿತು. ನಮ್ಮ ಈ ತಂಡದಲ್ಲಿ ನಾನು, ನನ್ನ ಪತಿ ಮತ್ತು ತಜ್ಞರಾದ ಡಾ.ಪ್ರೀತ್ ಸಾಲಿಯಾನ್ ಮತ್ತು ಡಾ.ನಫೀಸಾ ಕೌಸರ್ ಇದ್ದೇವೆ. ನಮ್ಮ ತಂಡವು ರಕ್ಷಣೆ ಕಾರ್ಯಾಚರಣೆಗಾಗಿ ಅಗತ್ಯ ಸಾಧನ ಸಲಕರಣೆಯೊಂದಿಗೆ ಸ್ಥಳಕ್ಕೆ ಬೆಳಗ್ಗೆ 11ಕ್ಕೆ ತಲುಪಿತು' ಎಂದು ಡಾ.ಮೇಘನಾ ತಮ್ಮ ಕಾರ್ಯಾಚರಣೆ ಕಾರ್ಯವೈಖರಿಯನ್ನು 'ಮೈಸೂರು ಮಿತ್ರ'ನೊಂದಿಗೆ ಹಂಚಿಕೊಂಡರು.
'ಅದಾಗಲೇ ಏಣಿ ಮತ್ತು ಬೋನಿನ ಮೂಲಕ ಚಿರತೆಯನ್ನು ರಕ್ಷಿಸಲು ವಿಫಲ ಪ್ರಯತ್ನ ನಡೆಸಲಾಗಿತ್ತು. ಇದೇ ರೀತಿ ಪ್ರಕರಣಗಳಲ್ಲಿ ಸಾಮಾನ್ಯವಾಗಿ ಬಾವಿಯೊಳಗೆ ಇಳಿಸುವ ಬೋನಿನೊಳಗೆ ಚಿರತೆಗಳು ಬರುತ್ತವೆ. ಆದರೆ ಈ ಚಿರತೆ ಅತ್ತಿತ್ತ ಜಗ್ಗದೇ ಕುಳಿತಿತ್ತು. ಬಾವಿಯ ಮೇಲ್ಭಾಗದಿಂದ ಚಿರತೆ ಕಾಣಿಸುತ್ತಿರಲಿಲ್ಲ. ಅಲ್ಲದೆ, ಬಾವಿಯ ತಳದಲ್ಲಿ ಶೇಖರಣೆಗೊಂಡಿದ್ದ ಒಂದಿಷ್ಟು ನೀರಿನಲ್ಲಿ ಬೀಳುವ ಆತಂಕದಲ್ಲಿ ಗುಹೆಯಂತಹ ಕುಳಿಯೊಳಗೆ ಸದರಿ ಚಿರತೆ ಆಶ್ರಯ ಪಡೆದಿತ್ತು. ಅಂತಿಮವಾಗಿ ಬೋನಿನೊಳಗೆ ಕುಳಿತು ಬಾವಿಯೊಳಗೆ ಇಳಿಯುವ ತಂತ್ರ ರೂಪಿಸಲಾಯಿತು. ಬೋನಿನಲ್ಲಿ ಹೋಗಲು ನಾನು ಸ್ವಯಂ ಪ್ರೇರಣೆಯಿಂದ ಮುಂದಾದೆ' ಎಂದು ತಮ್ಮ ಕಾರ್ಯಾಚರಣೆಯ ರೋಚಕ ಕ್ಷಣಗಳನ್ನು ಡಾ.ಮೇಘನಾ ಅನಾವರಣಗೊಳಿಸಿದರು.



ಡಾ.ಮೇಘನಾ ಅವರು ಅರವಳಿಕೆ ಚುಚ್ಚುಮದ್ದು ತುಂಬಿದ್ದ ಕೋವಿ ಹಿಡಿದು ಕುಳಿತಿದ್ದ ಬೋನನ್ನು ಬಾವಿಯೊಳಗೆ ಅರಣ್ಯ ಇಲಾಖೆ ಸಿಬ್ಬಂದಿ ಮತ್ತು ಗ್ರಾಮಸ್ಥರು ಇಳಿಸಿದರು. ಬಾವಿ ಹೆಚ್ಚು ಆಳವಾಗಿದ್ದ ರಿಂದ ಚಿರತೆ ಮೇಲಿನಿಂದ ಗೋಚರಿಸುವುದು ಅಸ್ಪಷ್ಟವಾಗಿತ್ತು. ಇಂತಹ ಸನ್ನಿವೇಶದಲ್ಲಿ ಚಿರತೆಯತ್ತ ಕಣ್ಣಾಡಿಸುತ್ತ ಡಾ.ಮೇಘನಾ ಅರವಳಿಕೆ ಚುಚ್ಚುಮದ್ದು ಪ್ರಯೋಗಿಸಲು ತವಕದಲ್ಲಿದ್ದರು.
'ಬಾವಿಯೊಳಗೆ 10ರಿಂದ 15 ಅಡಿಯಷ್ಟು ಇಳಿಯುತ್ತಿದ್ದಂತೆ ಚಿರತೆಯನ್ನು ಗುರುತಿಸಿದೆ. ಆಹಾರವಿಲ್ಲದೆ ದಣಿದಿದ್ದರೂ ನನ್ನನ್ನು ಕಂಡು ಅದು ಘರ್ಜಿಸುತ್ತಿತ್ತು. ಸರಿಯಾಗಿ ಗುರಿಯಿಟ್ಟು ಅರವಳಿಕೆ ಚುಚ್ಚುಮದ್ದನ್ನು ಪ್ರಯೋಗಿಸಿದೆ. ನಿಖರವಾದ ಗುರಿಯಿಟ್ಟಿದ್ದ ಹಿನ್ನೆಲೆಯಲ್ಲಿ ಮೊದಲ ಪ್ರಯತ್ನದಲ್ಲೇ ಚಿರತೆಯ ತೊಡೆಗೆ ಅರವಳಿಕೆ ಚುಚ್ಚುಮದ್ದು ಬಿದ್ದಿತು' ಎಂದು ಕಾರ್ಯಾಚರಣೆಯ ನಿರ್ಣಾಯಕ ಸನ್ನಿವೇಶವನ್ನು ಡಾ.ಮೇಘನಾ ವಿವರಿಸಿದರು.
'ಪ್ರಯೋಗಿಸಿದ ಚುಚ್ಚು ಮದ್ದು ಪರಿಣಾಮ ಬೀರಲು ನಾನು 15 ನಿಮಿಷ ಕಾಲ ಬೋನಿಯೊಳಗೆ ಕುಳಿತುಕೊಳ್ಳಬೇಕಾಯಿತು. ಚಿರತೆ ದುರುಗುಟ್ಟುತ್ತ ನೋಡುತ್ತಿತ್ತು. ಹಾಗೆಯೇ ನಿಧಾನವಾಗಿ ಅದಕ್ಕೆ ನಿದ್ರಾಜನಕ ಪ್ರಕ್ರಿಯೆ ಪ್ರಾರಂಭವಾಯಿತು. ಬಳಿಕ ಚಿರತೆಯನ್ನು ಬೋನಿಯೊಳಗೆ ಎಳೆಯಲು ಪ್ರಯತ್ನಿಸಿದೆ. ಆದರೆ ಅದು ಕಷ್ಟಸಾಧ್ಯವಾಗಿತ್ತು. ಅಷ್ಟರಲ್ಲೇ ಮತ್ತೊಬ್ಬ ಯುವಕ ಬಾವಿಯೊಳಗೆ ಬಂದು ನನಗೆ ಸಹಕಾರ ನೀಡಿದ್ದರಿಂದ 25 ಕೆಜಿ ತೂಕದ ಚಿರತೆ ಯನ್ನು ಬೋನಿನೊಳಗೆ ತರುವಲ್ಲಿ ಯಶಸ್ವಿಯಾದೆವು' ಎನ್ನುತ್ತಾರೆ ಡಾ.ಮೇಘನಾ.
'ಚಿರತೆಯು 15 ನಿಮಿಷಗಳ ನಂತರ ಪ್ರಜ್ಞಾಹೀನವಾಯಿತು. ಚಿರತೆಯನ್ನು ಮೇಲೆತ್ತಿದ ನಂತರ ಅದನ್ನು ಪರಿಶೀಲಿಸ ಲಾಯಿತು. ಅದು ಆರೋಗ್ಯಕರವಾಗಿತ್ತು. ಆದರೆ ದಣಿದಿತ್ತು. ಅದು ಸುಧಾರಿಸಿದ ನಂತರ ಅರಣ್ಯ ಇಲಾಖೆಯಿಂದ ಅದನ್ನು ಅರಣ್ಯಕ್ಕೆ ಬಿಡಲಾಯಿತು' ಎಂದು ಅವರು ವಿವರಿಸಿದರು.

ವನ್ಯಜೀವಿ ರಕ್ಷಣೆಗೆ ಹಲವು ಕಾರ್ಯಾಚರಣೆಗಳಲ್ಲಿ ಭಾಗಿ...

ಡಾ.ಮೇಘನಾ ಅವರಿಗೆ ವನ್ಯಜೀವಿ ರಕ್ಷಣಾ ಕಾರ್ಯಾಚರಣೆಗಳು ಹೊಸದೇನಲ್ಲ. ಕಳೆದ 6 ವರ್ಷಗಳಿಂದ ರಾಜ್ಯದಲ್ಲಿ ಅವರು ಅನೇಕ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದಾರೆ. ಇವರು ಕೊಡಗು ಜಿಲ್ಲೆಯ ವಿರಾಜಪೇಟೆ ಸಮೀಪದ ಹಾಲುಗುಂದ ಗ್ರಾಮದವರು. ಪಶುವೈದ್ಯಕೀಯ ವಿಜ್ಞಾನದಲ್ಲಿ ಪದವಿ ಪಡೆದ ಬಳಿಕ ಬೆಂಗಳೂರಿನ ಪಶುವೈದ್ಯಕೀಯ ಕಾಲೇಜಿನಲ್ಲಿ ವನ್ಯಜೀವಿ ಮತ್ತು ಶಸ್ತ್ರಚಿಕಿತ್ಸೆಯಲ್ಲಿ ಸ್ನಾತಕೋತ್ತರ ಪದವಿ ಪಡೆದರು. ನಿವೃತ್ತ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ದಿವಂಗತ ಪಂದಿಕಂಡ ಎಂ.ಪೆಮ್ಮಯ್ಯ ಇವರ ತಂದೆ. ಮೇಘನಾರ ತಾಯಿ ಮತ್ತು ಕುಟುಂಬದವರು ಬೆಂಗಳೂರಿನಲ್ಲಿ ನೆಲೆಸಿದ್ದಾರೆ. ಮಂಗಳೂರಿನ ಪಶುವೈದ್ಯ ಡಾ.ಯಶಸ್ವಿ ನಾರಾವಿ ಅವರನ್ನು ಮದುವೆಯಾದ ಡಾ.ಮೇಘನಾ, ಇದೀಗ ಮಂಗಳೂರಿನಲ್ಲಿ ನೆಲೆಸಿದ್ದು, ಪತಿಯೊಂದಿಗೆ ಚಿಟ್ಟೆ ಪಿಲ್ಲಿ ಸೇವಾ ಸಂಸ್ಥೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ರಾಮನಗರ ಜಿಲ್ಲಾಸ್ಪತ್ರೆ ಉದ್ಘಾಟನೆ ವೇಳೆ ನಾಯಕರ 'ಕ್ರೆಡಿಟ್ ವಾರ್'!

● ಬಿಜೆಪಿ–ಜೆಡಿಎಸ್ ಕಾರ್ಯಕರ್ತರ ತಳ್ಳಾಟ–ನೂಕಾಟ ● ಸಂಸದ ಡಿ.ಕೆ. ಸುರೇಶ್‌ರಿಂದ ಉಸ್ತುವಾರಿ ಸಚಿವ ಅಶ್ವತ್ಥನಾರಾಯಣರ ತರಾಟೆ ● ಕೊನೆಗೆ ವೇದಿಕೆಯಲ್ಲಿ, ಎಲ್ಲರೂ ಶಾಂತ; ಸುಗಮವಾಗಿ ನೆರವೇರಿದ ಉದ್ಘಾಟನಾ ಕಾರ್ಯಕ್ರಮ


ರಾಮನಗರ, ಮಾ.2–ರಾಮನಗರದ ಸುಸಜ್ಜಿತ ನೂತನ ಜಿಲ್ಲಾಸ್ಪತ್ರೆ ಉದ್ಘಾಟನೆ ಸಮಾರಂಭದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಕ್ರೆಡಿಟ್ ವಾರ್ ನಡೆದಿದೆ.
ಸಂಸದನಾಗಿರುವ ತನ್ನನ್ನು ಪ್ರೋಟೋಕಾಲ್ ಪ್ರಕಾರ ಆಹ್ವಾನಿಸಿಲ್ಲವೆಂದು ಡಿ.ಕೆ.ಸುರೇಶ್ ಅವರು ವೇದಿಕೆಯಲ್ಲೇ ಜಿಲ್ಲಾ ಉಸ್ತುವಾರಿ ಸಚಿವ ಡಾ. ಸಿ.ಎನ್.ಅಶ್ವತ್ಥನಾರಾಯಣ್ ಅವರನ್ನು ತರಾಟೆಗೆ ತೆಗೆದುಕೊಂಡರೆ, ಆಸ್ಪತ್ರೆಯನ್ನು ಮಾಜಿ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿ ಬಂದ ನಂತರವೇ ಉದ್ಘಾಟಿಸಬೇಕೆಂದು ಜೆಡಿಎಸ್ ಕಾರ್ಯಕರ್ತರು ಪಟ್ಟು ಹಿಡಿದಿದ್ದರಿಂದ ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ನೂಕಾಟ–ತಳ್ಳಾಟ ನಡೆದು ಕೆಲ ಕಾಲ ಗೊಂದಲ ಸೃಷ್ಟಿಯಾಗಿತ್ತು.
ವೇದಿಕೆಯಲ್ಲಿ ಡಿ.ಕೆ.ಸುರೇಶ್ ಅವರು ಜಿಲ್ಲಾ ಉಸ್ತುವಾರಿ ಸಚಿವ ಅಶ್ವತ್ಥನಾರಾಯಣ ಅವರನ್ನುದ್ದೇಶಿಸಿ ಏರು ಧ್ವನಿಯಲ್ಲಿ 'ಏಯ್, ನಿಲ್ರೀ ಮಂತ್ರಿಗಳೇ, ನಿಂತ್ಕೊಳ್ರಿ.... ನಾನು ಈ ಕ್ಷೇತ್ರದ ಪ್ರತಿನಿಧಿ. ನನಗೂ ಪ್ರೋಟೋ




ಕಾಲ್ ಇದೆ. ನಿಮ್ಮೊಬ್ಬರಿಗೇ ಅಲ್ಲ...' ಎಂದು ಹರಿಹಾಯ್ದರು. ಆಗ ಅಶ್ವತ್ಥ್‌ನಾರಾಯಣ, 'ನಿಮಗೆ ನಾವು ಗೌರವ ಕೊಡ್ತಾ ಇದ್ದೇವಲ್ಲಾ' ಎಂದಾಗ, ಡಿ.ಕೆ.ಸುರೇಶ್, 'ಅದ್ಯಾವ ಗೌರವ, ನಿನ್ನೆ ರಾತ್ರಿ ನನಗೆ ಇನ್ವಿಟೇಷನ್ ಕಳಿಸಿದ್ದೀರಲ್ಲಾ, ಅದಾ ಗೌರವ' ಅನ್ನುತ್ತಾ 'ಯಾವಾನ್ರೀ ಅವ್ನು ಡೆಪ್ಯುಟಿ ಕಮಿಷ್ನರ್, ಸಿಇಓ ಕರೀರಿ' ಎಂದು ಏರು ಧ್ವನಿಯಲ್ಲಿ ರೇಗಾಡಿದರು.
ಅದೇ ವೇಳೆ ಆಸ್ಪತ್ರೆಯನ್ನು ಜಿಲ್ಲಾ ಉಸ್ತುವಾರಿ ಸಚಿವ ಅಶ್ವತ್ಥನಾರಾಯಣ ಉದ್ಘಾಟಿಸಲು ಮುಂದಾದಾಗ ಜೆಡಿಎಸ್ ಕಾರ್ಯಕರ್ತರು ಗದ್ದಲ ಎಬ್ಬಿಸಿದರು. ಕುಮಾರಣ್ಣ ಬರುವ ವರೆಗೂ ಉದ್ಘಾಟನೆ ಮಾಡಬಾರದು ಎಂದು ಘೋಷಣೆ ಕೂಗಿದರು. ಇದೇ ವೇಳೆ ಬಿಜೆಪಿ ಕಾರ್ಯಕರ್ತರು ಪ್ರತಿಯಾಗಿ ಮೋದಿ... ಮೋದಿ ಎಂದು ಘೋಷಣೆ ಕೂಗಿದರೆ, ಜೆಡಿಎಸ್ ಕಾರ್ಯಕರ್ತರು ಕುಮಾರಸ್ವಾಮಿ ಪರ ಘೋಷಣೆ ಕೂಗಿದರು. ಉಭಯ ಪಕ್ಷಗಳ ಕಾರ್ಯಕರ್ತರ ನಡುವೆ ನೂಕಾಟ–ತಳ್ಳಾಟ ನಡೆದು ಬಿಗುವಿನ ವಾತಾವರಣ ನಿರ್ಮಾಣವಾಯಿತು. ಅಷ್ಟರಲ್ಲಿ ಅಲ್ಲಿಗೆ ಆಗಮಿಸಿದ ಕುಮಾರಸ್ವಾಮಿ ಅವರು ಆಸ್ಪತ್ರೆಯನ್ನು ಉದ್ಘಾಟಿಸುವಂತೆ ನಾನೇ ಜಿಲ್ಲಾ ಉಸ್ತುವಾರಿ ಸಚಿವರಿಗೆ ಹೇಳಿದ್ದೆ ಈ ವಿಚಾರದಲ್ಲಿ ಯಾವುದೇ ಗೊಂದಲ ಇಲ್ಲ ಎಂದು ಸ್ಪಷ್ಟಪಡಿಸಿದಾಗ ಪರಿಸ್ಥಿತಿ ತಿಳಿಯಾಯಿತು.
ಭಾಷಣದ ವೇಳೆ ಡಿ.ಕೆ.ಸುರೇಶ್, ತಾವು ಸಂಸದರಾಗಿ, ಹೆಚ್.ಡಿ.ಕುಮಾರಸ್ವಾಮಿ ಅವರು ಮುಖ್ಯಮಂತ್ರಿಯಾಗಿದ್ದ ವೇಳೆ ಈ ಆಸ್ಪತ್ರೆ ನಿರ್ಮಾಣ ಕಾಮಗಾರಿ ಆರಂಭವಾಯಿತು ಎಂದರೆ, ಬಿಜೆಪಿ ಸರ್ಕಾರದಲ್ಲಿ ರಾಮನಗರದಲ್ಲಿ ಸುಸಜ್ಜಿತ ಜಿಲ್ಲಾಸ್ಪತ್ರೆ ನಿರ್ಮಿಸಲಾಗಿದೆ ಎಂದು ಡಾ. ಅಶ್ವತ್ಥನಾರಾಯಣ್ ಮತ್ತು ಡಾ. ಕೆ.ಸುಧಾಕರ್ ಹೇಳಿದರು.

ಮೋದಿ ಹೆಸರಲ್ಲಿ ಮತ ಕೇಳಲು ಬಂದ ನಾಯಕರಿಗೆ ಚಪ್ಪಲಿಯಲ್ಲಿ ಹೊಡೆಯಿರಿ

ಪ್ರಮೋದ್ ಮುತಾಲಿಕ್ ಕಿಡಿನುಡಿ



ಕಾರವಾರ: ಪ್ರಧಾನಿ ನರೇಂದ್ರ ಮೋದಿ ಹೆಸರು ಹೇಳಿ, ವೋಟ್ ಹಾಕಿ ಅಂತಾ ಬರುವ ನಾಯಕರಿಗೆ ಚಪ್ಪಲಿಯಲ್ಲಿ ಹೊಡೆಯಿರಿ ಎಂದು ಶ್ರೀರಾಮ ಸೇನೆಯ ಸಂಸ್ಥಾಪಕ ಪ್ರಮೋದ ಮುತಾಲಿಕ್ ಕಿಡಿಕಾರಿದ್ದಾರೆ.
ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಸೈದಾದ್ರಿ ರಂಗಮಂದಿರದಲ್ಲಿ ಆಯೋಜಿಸಿದ್ದ ಹಿಂದೂ ಸಮಾಜೋತ್ಸವದ ಕಾರ್ಯಕ್ರಮದಲ್ಲಿ ಮಾತನಾಡಿ, ನಾಲಾಯಕ್ ನಾಯಕರು ಇದ್ದಾರೆ. ಮೋದಿ ಹೆಸರು ಹೇಳಿಕೊಂಡು ಬರುತ್ತಾರೆ. ಅಂತಹವರಿಗೆ ಚಪ್ಪಲಿ ಏಟು ಕೊಡಿ ಎಂದು ಆಕ್ರೋಶದ ಕರೆ ನೀಡಿದ್ದಾರೆ. ಆರೇಳು ಬಾರಿ ಗೆದ್ದವರಿದ್ದಾರೆ. ಕರ್ನಾಟಕವನ್ನು ಲೂಟಿ ಮಾಡಿದವರು ಇದ್ದಾರೆ. ಮೊದಲು ಇದ್ದಾಗ ಆಸ್ತಿ ಎಷ್ಟಿತ್ತು, ಈಗ ಎಷ್ಟಿದೆ ಅಂತಾ ಲೆಕ್ಕಾ ಹಾಕುವುದಕ್ಕೂ ಆಗುವುದಿಲ್ಲ ಅಷ್ಟು ಗಳಿಸಿದ್ದಾರೆ ಎಂದು ವಾಗ್ದಾಳಿ ಮಾಡಿದ್ದಾರೆ.
ನಿಮಗೆ ಶಾಪ ತಟ್ಟದೆ ಬಿಡುವುದಿಲ್ಲ: ಜನ ಸಂಘ ಹುಟ್ಟಿದ್ದು ಯಾಕೆ ಎನ್ನುವುದು ನೆನಪಿದೆಯಾ. ಜನ ಸೇವೆ ಮರೆತು ತಮ್ಮ ಸೇವೆ ಮಾಡಿಕೊಳ್ಳುತ್ತಿದ್ದೀರಾ. ಸಾವಿರ ವರ್ಷಗಳಿಂದ ಗೋಮಾತೆ ಉಳಿಸಿ ಅಂತಾ ಋಷಿ ಮುನಿಗಳು ಹೇಳುತ್ತಿದ್ದಾರೆ. ಗ್ರಾಮದಿಂದ ಕೇಂದ್ರದವರೆಗೆ ನಮ್ಮದೆ ಸರ್ಕಾರ ಇದೆ. ಗೋಮಾತೆ ರಕ್ತ ನಿಮ್ಮಿಂದ ಉಳಿಸಲು ಆಗುತ್ತಿಲ್ಲ. ಅಧಿಕಾರ ಇದೆ, ಆದರೆ ನಿಮ್ಮ ಹತ್ರ ಇಚ್ಛಾಶಕ್ತಿ ಇಲ್ಲ. ಆಕಳ ರೋಧನೆ ಅದರ ರಕ್ತ ನಿಮಗೆ ಕಾಣುತ್ತಿಲ್ಲ. ನಿಮಗೆ ಶಾಪ ತಟ್ಟದೆ ಬಿಡುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.
ಮೋದಿ ಹೆಸರು ಹೇಳಿ ಗೆದ್ದವರು ನೀವು: ನಾಚಿಕೆ, ಮಾನ, ಮರ್ಯಾದೆ ಇಲ್ಲದೆ ಮೋದಿ ಹೆಸರು ಹೇಳಿ ಗೆದ್ದವರು ನೀವು. ತಾಕತ್ ಇದ್ದರೆ ಮೋದಿ ಹೆಸರು ಬಿಟ್ಟು ನಿಮ್ಮ ಅಭಿವೃದ್ಧಿ ಹೇಳಿ ಗೆದ್ದು ಬನ್ನಿ. ಪರೇಶ ಮೇಸ್ತಾ ಅನಾಥವಾಗಿ ಸತ್ತ ರಕ್ತ ಬಲಿದಾನವಾದರು ಏನು ಆಗಲಿಲ್ಲ. ಅವನ ಹೆಣದ ಮೇಲೆ ರಾಜಕೀಯ ಮಾಡಿದವರು ನೀವು. ಅವನ ಆತ್ಮ ಕೇಳುತ್ತಿದೆ ನ್ಯಾಯ ಕೊಡಿಸಿ ಅಂತಾ. ಅವನ ಆತ್ಮಕ್ಕೆ ಶಾಂತಿಯಿಲ್ಲದೆ ಇನ್ನು ಅಲೆಯುತ್ತಿದೆ, ನ್ಯಾಯ ಬೇಕು ಎಂದು.
ಸಿಐಡಿ, ಸಿಬಿಐ, ಎಲ್ಲಾ ಬಂತು ತನಿಖೆ ಮಾಡಿತು, ಏನು ಪ್ರಯೋಜನವಾಗಲಿಲ್ಲ. ಹಿಂದೂ ಆಕ್ರೋಶದ ಲಾಭ ಪಡೆದು ಅಧಿಕಾರಕ್ಕೆ ಬಂದ ನಾಲಾಯಕ್, ನಿರ್ಲಜ್ಜರು ಇವರು. ಹಿಂದೂ ಸಮಾಜ ಉಳಿಸಿಕೊಳ್ಳಲು ಛತ್ರಪತಿ ಶಿವಾಜಿಯಂತೆ ಹೋರಾಡಬೇಕಾದ ಅನಿವಾರ್ಯತೆ ಇದೆ ಎಂದು ಮುತಾಲಿಕ್ ಹೇಳಿದರು.

ಕೆಎಸ್‌ಡಿಎಲ್‌ಗೆ ರಾಸಾಯನಿಕ ಪೂರೈಕೆ ಟೆಂಡರ್ ಕಾರ್ಯಾದೇಶ ನೀಡಲು 40 ಲಕ್ಷ ಲಂಚ ಸ್ವೀಕಾರ

ಬಿಜೆಪಿ ಶಾಸಕನ ಪುತ್ರನೂ ಆದ ಹಿರಿಯ ಕೆಎಎಸ್ ಅಧಿಕಾರಿ ಲೋಕಾಯುಕ್ತ ಬಲೆಗೆ

● ತಂದೆ ಚನ್ನಗಿರಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ಪುತ್ರ ಪ್ರಶಾಂತ್ ಲಂಚ ಸ್ವೀಕಾರ ● ತಂದೆ ಇದೇ ಕೆಎಸ್‌ಡಿಎಲ್ ಅಧ್ಯಕ್ಷ, ಮಗ ಬೆಂಗಳೂರು ಜಲ ಮಂಡಳಿ ಅಧಿಕಾರಿ ● ತಪಾಸಣೆ ವೇಳೆ ಕಚೇರಿಯಲ್ಲಿ 1.62 ಕೋಟಿ ನಗದು ಪತ್ತೆ ● ತಂದೆಯ ಖಾಸಗಿ ಕಚೇರಿಯಲ್ಲಿ ನಡೆಯುತ್ತಿತ್ತು ವಸೂಲಿ ದಂಧೆ ● ಪ್ರಶಾಂತ್ ಕಚೇರಿ, ಮನೆ ಮೇಲೆ ಲೋಕಾಯುಕ್ತ ಮುಂದುವರೆದ ದಾಳಿ, ಕಡತ ಪರಿಶೀಲನೆ




ಬೆಂಗಳೂರು, ಮಾ.2–ಕರ್ನಾಟಕ ಸಾಬೂನು ಮತ್ತು ಮಾರ್ಜಕ ಕಾರ್ಖಾನೆಗೆ (ಕೆಎಸ್‌ಡಿಎಲ್) ರಾಸಾಯನಿಕ ಪೂರೈಸುವ ಟೆಂಡರ್ ಪಡೆದಿದ್ದ ಗುತ್ತಿಗೆದಾರನಿಗೆ ಕಾರ್ಯಾದೇಶ ನೀಡಲು 40 ಲಕ್ಷ ರೂ. ಲಂಚ ಪಡೆಯುತ್ತಿದ್ದ ವೇಳೆ ದಾವಣಗೆರೆ ಜಿಲ್ಲೆ ಚನ್ನಗಿರಿ ಕ್ಷೇತ್ರದ ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಪುತ್ರ ಕೆಎಎಸ್ ಅಧಿಕಾರಿ ಪ್ರಶಾಂತ್ ಅವರನ್ನು ಲೋಕಾಯುಕ್ತ ಪೊಲೀಸರು ಗುರುವಾರ ಸಂಜೆ ಶಾಸಕರ ಕಚೇರಿಯಲ್ಲೇ ಬಂಧಿಸಿದ್ದಾರೆ.
ಬೆಂಗಳೂರು ಜಲ ಮಂಡಳಿಯ ಮುಖ್ಯ ಲೆಕ್ಕಾಧಿಕಾರಿಯಾಗಿರುವ ವಿರೂಪಾಕ್ಷಪ್ಪ ಅವರ ಪುತ್ರ ಪ್ರಶಾಂತ್, ಕಾರ್ಯಾದೇಶ ನೀಡಲು ಕೆಎಸ್‌ಡಿಎಲ್ ಗುತ್ತಿಗೆದಾರನಿಂದ 80 ಲಕ್ಷ ರೂ. ಲಂಚ ಕೇಳಿದ್ದರೆಂದು ಹೇಳಲಾಗಿದ್ದು, ಮೊದಲ ಹಂತವಾಗಿ 40 ಲಕ್ಷ ರೂ. ನೀಡಿದ ವೇಳೆ ಬೆಂಗಳೂರು ವಿಭಾಗದ ಲೋಕಾಯುಕ್ತ ಎಸ್ಪಿ ಅಶೋಕ್ ಮತ್ತು ಇನ್ಸ್‌ಪೆಕ್ಟರ್ ಕುಮಾರಸ್ವಾಮಿ ನೇತೃತ್ವದ ಅಧಿಕಾರಿಗಳ ತಂಡ ಹಠಾತ್ ದಾಳಿ ನಡೆಸಿ ಲಂಚದ ಹಣ ಸಮೇತ ಪ್ರಶಾಂತ್ ಅವರನ್ನು ರೆಡ್‌ಹ್ಯಾಂಡ್ ಆಗಿ ಬಂಧಿಸಿದೆ. ಇದೇ ವೇಳೆ ಅವರ ಕಚೇರಿಯಲ್ಲಿ ಮೂರು ಬ್ಯಾಗ್‌ಗಳಲ್ಲಿ ಪ್ರತ್ಯೇಕವಾಗಿಟ್ಟಿದ್ದ ಒಟ್ಟು 1.62 ಕೋಟಿ ರೂ.ಗಳನ್ನೂ ಕೂಡ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ. ಈ ಮೂರೂ ಬ್ಯಾಗ್‌ಗಳಲ್ಲಿ ಪ್ರಶಾಂತ್‌ಗೆ ನೀಡಲು ಹಣ ತಂದಿದ್ದರು ಎನ್ನಲಾದ ಮೂವರನ್ನು ವಶಕ್ಕೆ ಪಡೆದು ವಿಚಾರಣೆಗೊಳಪಡಿಸಿದ್ದಾರೆ.
ಈ ದಾಳಿ ವೇಳೆ ಭಾರೀ ಮೊತ್ತದ ಹಣ ಸಿಕ್ಕಿಬಿದ್ದ ಹಿನ್ನೆಲೆಯಲ್ಲಿ ಲೋಕಾಯುಕ್ತ ಪೊಲೀಸರು ಪ್ರಶಾಂತ್ ಅವರ ಕಚೇರಿ ಹಾಗೂ ಮನೆ ಮೇಲೆ ದಾಳಿ ನಡೆಸಿ ಪರಿಶೀಲನೆಯಲ್ಲಿ ತೊಡಗಿದ್ದಾರೆ. ಜೊತೆಗೆ ಪ್ರಶಾಂತ್ ಅವರ ಅಕೌಂಟೆಂಟ್ ಸೇರಿದಂತೆ ಕಚೇರಿಯಲ್ಲಿದ್ದ ಐವರನ್ನು ಬಂಧಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.
ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಕೆಎಸ್‌ಡಿಎಲ್ ಅಧ್ಯಕ್ಷರಾಗಿದ್ದು, ಅವರ ಪರವಾಗಿಯೇ ಪ್ರಶಾಂತ್ ಲಂಚ ಪಡೆಯುತ್ತಿದ್ದರು ಎಂಬ ಮಾತುಗಳು ಕೇಳಿಬಂದಿವೆಯಾದರೂ, ಲೋಕಾಯುಕ್ತ ಐಜಿಪಿ ಡಾ.ಎ.ಸುಬ್ರಹ್ಮಣ್ಯೇಶ್ವರ ರಾವ್ ಈ ಸಂಬಂಧ ಸುದ್ದಿಗಾರರೊಂದಿಗೆ ಮಾತನಾಡಿ, ಕೆಎಸ್‌ಡಿಎಲ್ ಗುತ್ತಿಗೆ ವಿಚಾರದಲ್ಲಿ ಪ್ರಶಾಂತ್ ಎಂಬ ವ್ಯಕ್ತಿ ಲಂಚ ಕೇಳುತ್ತಿದ್ದಾನೆ ಎಂದು ಖಾಸಗಿ ವ್ಯಕ್ತಿಯೊಬ್ಬರು ನೀಡಿದ ದೂರಿನನ್ವಯ ಭ್ರಷ್ಟಾಚಾರ ನಿಗ್ರಹ ಕಾಯ್ದೆ ಸೆಕ್ಷನ್–8ರಡಿ ಎಫ್‌ಐಆರ್ ದಾಖಲಿಸಿಕೊಂಡು ದಾಳಿ ನಡೆಸಲಾಗಿದೆ. ಲಂಚದ ಹಣ 40 ಲಕ್ಷದ ಜೊತೆಗೆ ಹೆಚ್ಚುವರಿಯಾಗಿ 1.62 ಕೋಟಿ ರೂ. ದೊರೆತಿದೆ. ಈ ಹಣವನ್ನು ಯಾರ ಪರವಾಗಿ ಪಡೆಯಲಾಗುತ್ತಿತ್ತು ಎಂಬುದರ ಕುರಿತೂ ಕೂಡ ತನಿಖೆ ಪ್ರಗತಿಯಲ್ಲಿದೆ ಎಂದು ಹೇಳಿದರು.
ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಬೆಂಗಳೂರಿನ ಕ್ರೆಸೆಂಟ್ ರಸ್ತೆಯ ಬೃಹತ್ ಕಟ್ಟಡವೊಂದರಲ್ಲಿ ಸುಸಜ್ಜಿತವಾದ ಖಾಸಗಿ ಕಚೇರಿಯನ್ನು ಹೊಂದಿದ್ದು, ಈ ಕಚೇರಿಯನ್ನು ಅವರ ಪುತ್ರ ಕೆಎಎಸ್ ಅಧಿಕಾರಿ ಪ್ರಶಾಂತ್ ತನ್ನ ಚಟುವಟಿಕೆಗಳ ಕೇಂದ್ರ ಸ್ಥಾನವಾಗಿ ಬಳಸಿಕೊಳ್ಳುತ್ತಿದ್ದ ಎಂದು ಹೇಳಲಾಗಿದೆ. 2017ರಲ್ಲಿ ಕರ್ನಾಟಕ ರೂರಲ್ ಡೆವಲಪ್‌ಮೆಂಟ್ ಲಿಮಿಟೆಡ್‌ನಲ್ಲಿ (ಕೆಆರ್‌ಡಿಸಿ) 55 ಕೋಟಿ ರೂ. ಕಬಳಿಕೆ ಪ್ರಕರಣದಲ್ಲೂ ಪ್ರಶಾಂತ್ ಮೊದಲ ಆರೋಪಿಯಾಗಿದ್ದು, ಈ ಪ್ರಕರಣದಲ್ಲಿ ರಾಜ್ಯ ಸರ್ಕಾರ ಪ್ರಶಾಂತ್ ಸೇರಿದಂತೆ ಮೂವರನ್ನು ಅಮಾನತುಪಡಿಸಿತ್ತು. ತನಿಖೆಯನ್ನು ಸಿಐಡಿಗೆ ವಹಿಸಲಾಗಿತ್ತು. ಈ ಸಂಬಂಧ ಸುರತ್ಕಲ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.


Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ಜನಮನ ಗೆದ್ದ ಚಿತ್ರ 'ಹೊಂದಿಸಿ ಬರೆಯಿರಿ'



ಅತಿಯಾದ ನಿರೀಕ್ಷೆ ಇಟ್ಟುಕೊಳ್ಳದೆ ಬದುಕನ್ನು ಬಂದಂತೆ ಸ್ವೀಕರಿಸಿ ಹೊಂದಿಕೊಂಡು ಹೋಗಬೇಕು ಎಂಬ ಮೆಸೇಜ್ ಇಟ್ಟುಕೊಂಡು ತೆರೆಗೆ ಬಂದಂಥ ಚಿತ್ರ 'ಹೊಂದಿಸಿ ಬರೆಯಿರಿ'. ಭಾವನೆಗಳ ಜೊತೆ ಸಾಗುವ ಈ ಚಿತ್ರದಲ್ಲಿ ಐವರು ಸ್ನೇಹಿತರ ಜೀವನದಲ್ಲಿ ನಡೆಯೋ ಕಥೆಯನ್ನು ಹೇಳಲಾಗಿದೆ. ರಾಮೇನಹಳ್ಳಿ ಜಗನ್ನಾಥ್ ಅವರು ಪ್ರಥಮ ಪ್ರಯತ್ನದಲ್ಲೇ ವಾಸ್ತವದ ಜೊತೆಗೆ ಬದುಕಿನ ಪಾಠವನ್ನು ಹೇಳಿದ್ದಾರೆ. ಚಿತ್ರವು ಮೌತ್ ಪಬ್ಲಿಸಿಟಿಯಿಂದಲೇ ದಿನದಿಂದ ದಿನಕ್ಕೆ ಜನಪ್ರಿಯವಾಗುತ್ತಿದೆ. ಅಲ್ಲದೆ ಈ ಚಿತ್ರಕ್ಕೆ ಮಾಧ್ಯಮಗಳಿಂದ ಉತ್ತಮ ವಿಮರ್ಶೆ ಬಂದಿತ್ತು. ದಿನದಿಂದ ದಿನಕ್ಕೆ ಪ್ರೇಕ್ಷಕರನ್ನು ಸೆಳೆಯುತ್ತಿರುವ ಈ ಚಿತ್ರವೀಗ ನಾಲ್ಕನೇ ವಾರಕ್ಕೆ ಕಾಲಿಟ್ಟಿದೆ. ಈ ಖುಷಿಯನ್ನು ಹಂಚಿಕೊಳ್ಳಲೆಂದೇ ಚಿತ್ರತಂಡ ಮಾಧ್ಯಮಗಳ ಮುಂದೆ ಹಾಜರಾಗಿ, ಅನುಭವ ಹೇಳಿಕೊಂಡಿತು.

ಈ ಸಂದರ್ಭದಲ್ಲಿ ನಿರ್ದೇಶಕ ಜಗನ್ನಾಥ್ ಮಾತನಾಡುತ್ತಾ, 70 ಚಿತ್ರಮಂದಿರಗಳಲ್ಲಿ ರಿಲೀಸಾದ ನಮ್ಮ ಚಿತ್ರ ವಾರದ ನಂತರ ಒಂದೇ ಥೇಟರ್‌ನಲ್ಲಿತ್ತು. ಮತ್ತೆ ಶನಿವಾರದಿಂದ ಸ್ಕ್ರೀನ್‌ಗಳ ಸಂಖ್ಯೆ ಹೆಚ್ಚುತ್ತಲೇ ಹೋಯಿತು. ಈಗ ನಾಲ್ಕನೇ ವಾರ 28 ಥೇಟರ್‌ಗಳಲ್ಲಿ ಚಿತ್ರ ಪ್ರದರ್ಶನಗೊಳ್ಳುತ್ತಿದೆ. ಚಿತ್ರದ ಕಂಟೆಂಟ್ ಜನರಿಗೆ ತುಂಬಾ ಇಷ್ಟವಾಗಿದೆ. ಮೈಸೂರು, ದಾವಣಗೆರೆಯಲ್ಲೂ ಪ್ರದರ್ಶನಗಳ ಸಂಖ್ಯೆಯನ್ನು ಹೆಚ್ಚಿಸಲಾಯಿತು ಎಂದು ಹೇಳಿದರು, ಚಿತ್ರದಲ್ಲಿ ಕಲರ್‌ಫುಲ್ ಕಾಲೇಜ್ ಲೈಫು, ತರಲೆ ತುಂಟಾಟಗಳು, ಗೆಳೆತನ, ಪ್ರೀತಿ, ಸಂಗಾತಿಯ ಆಯ್ಕೆ ಹೀಗೆ ಬದುಕಿನ ಎಲ್ಲಾ ಹಂತಗಳನ್ನು ನಿರ್ದೇಶಕರು ಹದವಾಗಿ ಪೋಣಿಸಿ ಚಿತ್ರವನ್ನು ತೆರೆಮೇಲೆ ಕಟ್ಟಿಕೊಟ್ಟಿದ್ದಾರೆ. ಬದುಕಿನ ವಾಸ್ತವತೆಯನ್ನು ಅರ್ಥ ಮಾಡಿಸುತ್ತಾ ಅದಕ್ಕೆ ಹೊಂದಿಕೊಂಡು, ಬಂದಂತೆ ಸ್ವೀಕರಿಸಿ ಎನ್ನುವ ಸಂದೇಶವನ್ನು ಅರ್ಥಪೂರ್ಣವಾಗಿ ಹೇಳಿದ್ದಾರೆ. ಸಿನಿಮಾ ನೋಡಿದವರು ಸಾಮಾಜಿಕ ಜಾಲತಾಣಗಳಲ್ಲಿ ಚಿತ್ರದ ಬಗ್ಗೆ ಮೆಚ್ಚಿ ಬರೆದುಕೊಳ್ಳುತ್ತಿದ್ದಾರೆ. ದಿನದಿಂದ ದಿನಕ್ಕೆ ಚಿತ್ರ ನೋಡುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಪ್ರೇಕ್ಷಕರು ತೋರಿಸುತ್ತಿರುವ ಪ್ರೀತಿ ಚಿತ್ರತಂಡಕ್ಕೂ ಸಂತಸ ತಂದಿದೆ. ಪ್ರತಿಭಾವಂತ ಕಲಾವಿದರ ತಂಡವೇ ನಿರ್ದೇಶಕರ ಕನಸಿಗೆ ಜೊತೆಯಾಗಿದ್ದು, ಪ್ರವೀಣ್‌ತೇಜ್, ನವೀನ್‌ಶಂಕರ್, ಮಹಾದೇವ್, ಅರ್ಚನಾ ಜೋಯಿಸ್, ಅನಿರುದ್ದ ಆಚಾರ್ಯ, ಭಾವನಾರಾವ್, ಐಶಾನಿಶೆಟ್ಟಿ, ಸಂಯುಕ್ತ ಹೊರನಾಡು, ಅರ್ಚನಾ ಕೊಟ್ಟಿಗೆ ಎಲ್ಲರೂ ತಮ್ಮ ಭಾವಪೂರ್ಣ ನಟನೆಯ ಮೂಲಕವೇ ನೋಡುಗರನ್ನು ಕಾಡುತ್ತಾರೆ. ಜೋಕೋಸ್ಟ ಅವರ ಸಂಗೀತದ ಹಾಡುಗಳು, ಶಾಂತಿಸಾಗರ್ ಅವರ ಕ್ಯಾಮೆರಾ ವರ್ಕ್ ಚಿತ್ರವನ್ನು ಮತ್ತಷ್ಟು ಕಲರ್‌ಫುಲ್ ಆಗಿಸಿದೆ.



ಶಿಡ್ಲಘಟ್ಟದಲ್ಲಿ 'ಕಬ್ಜ' ಹಾಡುಗಳ ಹಬ್ಬ !

ಸದ್ಯ ಪ್ಯಾನ್ ಇಂಡಿಯಾ ಹಂತದಲ್ಲಿ ಟ್ರೆಂಡಿಂಗ್‌ನಲ್ಲಿರುವ ಚಿತ್ರ 'ಕಬ್ಜ'. ಈಗಾಗಲೇ ತನ್ನ ಟೀಸರ್, ಹಾಡುಗಳ ಮೂಲಕ ಜನರ ಮನ ಗೆದ್ದಿರುವ ಕಬ್ಜ ಚಿತ್ರದಿಂದ ಇದೀಗ ಪಡ್ಡೆ ಹುಡುಗರ ಹೃದಯಕ್ಕೆ ಲಗ್ಗೆ ಇಡುವಂಥ ಹಾಡೊಂದು ಆರ್.ಚಂದ್ರು ಅವರ ಹುಟ್ಟೂರಾದ ಶಿಡ್ಲಘಟ್ಟದಲ್ಲಿ ಬಿಡುಗಡೆಯಾಗಿದೆ. ಚುಮ್ ಚುಮ್ ಚಳಿಚಳಿ, ತಬ್ಕೊ ಚಳುವಳಿ' ಎಂಬ ಮಾಸ್ ಹಾಡಿಗೆ ಪ್ರಮೋದ್ ಮರವಂತೆ ಸಾಹಿತ್ಯ ಬರೆದದ್ದು, ರವಿ ಬಸ್ರೂರ್ ಸಂಗೀತ ನೀಡಿದ್ದಾರೆ. ಶಿಡ್ಲಘಟ್ಟದ ನೆಹರು ಮೈದಾನದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ನಟ ಶಿವಣ್ಣ, ಗೀತಾ ಶಿವರಾಜಕುಮಾರ್, ಆರೋಗ್ಯ ಸಚಿವ ಡಾ.ಕೆ.ಸುಧಾಕರ್, ಶಿಡ್ಲಘಟ್ಟದ ಶಾಸಕ ಮುನಿಯಪ್ಪ, ಸಮಾಜಸೇವಕ ರಾಮಚಂದ್ರಗೌಡರು, ಮಾಜಿ ಸಚಿವ ಹೆಚ್.ಎಂ.ರೇವಣ್ಣ ಸೇರಿದಂತೆ ಅನೇಕ ಗಣ್ಯರು ಭಾಗಿಯಾಗಿದ್ದರು. ಈ ವೇಳೆ ಮಾತನಾಡಿದ ಶಿವಣ್ಣ, ನಾನು ಉಪೇಂದ್ರ ಅಭಿಮಾನಿ. ಅವರು 'ಓಂ' ಚಿತ್ರದ ಮೂಲಕ ಭಾರತಕ್ಕೆ ರೌಡಿಸಂ ಚಿತ್ರ ಅಂದ್ರೆ ಹೀಗಿರಬೇಕೆಂದು ಹೇಳಿದವರು. ಅಂಥವರ ಜೊತೆ ಕೆಲಸ ಮಾಡುವುದೇ ಖುಷಿ. ಆರ್.ಚಂದ್ರು ಕೂಡ ಅದ್ಭುತವಾದ ಸಿನಿಮಾಗಳನ್ನು ನೀಡುತ್ತಾ ಬರುತ್ತಿದ್ದಾರೆ. ಇವರ ಪಯಣ ಯಶಸ್ಸಿನತ್ತ ಸಾಗಲಿ ಎಂದು ಶುಭ ಹಾರೈಸಿದರು.

ಸಚಿವ ಡಾ.ಕೆ.ಸುಧಾಕರ್ ಮಾತನಾಡಿ, ಇದು 'ಕಬ್ಜ' ಸಿನಿಮಾದ ಹಬ್ಬ. ಈ ಹಾಡನ್ನು ನಮ್ಮ ಚಿಕ್ಕಬಳ್ಳಾಪುರದಲ್ಲಿ ರಿಲೀಸ್ ಮಾಡೋಣ ಎಂದು ಚಂದ್ರುಗೆ ಹೇಳಿದ್ದೆ. ಆದರೆ, ಅವರು ತಮ್ಮ ತವರಲ್ಲಿ ಮಾಡಿದ್ದಾರೆ. ಇಂದು ಎಲ್ಲಾ ಕಡೆ ಕನ್ನಡ ಸಿನಿಮಾಗಳನ್ನು ಮೆಚ್ಚಿಕೊಳ್ಳುತ್ತಿದ್ದಾರೆ 'ಕಬ್ಜ' ಕೂಡ ದೊಡ್ಡಮಟ್ಟದಲ್ಲಿ ಸೌಂಡ್ ಮಾಡಿ ಗೆಲ್ಲಬೇಕು ಎಂದರು.

ನಿರ್ದೇಶಕ ಆರ್.ಚಂದ್ರು ಮಾತನಾಡಿ, ಈಗಾಗಲೇ ನಾವು ಎರಡು ಗೀತೆಗಳನ್ನು ಹೈದರಾಬಾದ್, ಚೆನ್ನೈನಲ್ಲಿ ಬಿಡುಗಡೆ ಮಾಡಿದ್ದು. ಮೂರನೇ ಹಾಡನ್ನು ನಮ್ಮ ಶಿಡ್ಲಘಟ್ಟದಲ್ಲಿ ರಿಲೀಸ್ ಮಾಡಿದ್ದೇವೆ. ಗೀತಕ್ಕ ಅವರು ನಮ್ಮ ಸಿದ್ದೇಶ್ವರ ಎಂಟರ್‌ಪ್ರೈಸಸ್ ಬ್ಯಾನರ್ ಉದ್ಘಾಟಿಸಿದ್ದರು. ಇಂದು ಅವರೂ ಸಮಾರಂಭಕ್ಕೆ ಬಂದಿರುವುದು ವಿಶೇಷ. ಕನ್ನಡದ ಹೆಮ್ಮೆಯ ಪ್ಯಾನ್ ಇಂಡಿಯಾ ಸಿನಿಮಾ 'ಕಬ್ಜ' ದೊಡ್ಡಮಟ್ಟದಲ್ಲಿ ಸದ್ದು ಮಾಡುತ್ತಿದೆ. ಬಾಲಿವುಡ್‌ನಲ್ಲಿ ಸುಮಾರು 1800ಕ್ಕೂ ಹೆಚ್ಚು ಥಿಯೇಟರ್‌ಗಳಲ್ಲಿ ಕಬ್ಜ ಬಿಡುಗಡೆಯಾಗಲಿದೆ ಎಂದು ಹೇಳಿದರು.

ನಾಯಕ ಉಪೇಂದ್ರ ಮಾತನಾಡಿ, 'ಕಬ್ಜ' ನನ್ನ ಕರಿಯರ್‌ನಲ್ಲಿ ನೆನಪಾಗಿ ಉಳಿಯೋ ಚಿತ್ರ. ಚಂದ್ರು ತುಂಬಾ ಎಫರ್ಟ್ ಹಾಕಿ ಇಡೀ ಭಾರತೀಯ ಚಿತ್ರರಂಗವೇ 'ಕಬ್ಜ' ಬಗ್ಗೆ ಮಾತಾಡುವಂತೆ ಮಾಡಿದ್ದಾರೆ. ಚಂದ್ರು ಈ ಸಿನಿಮಾ ಮೂಲಕ ಪ್ರತಿಯೊಬ್ಬರ ಹೃದಯವನ್ನೂ "ಕಬ್ಜ" ಮಾಡಲಿದ್ದಾರೆ. ಚಿತ್ರದಲ್ಲಿ ತುಂಬಾನೇ ಅದ್ಭುತಗಳಿದ್ದು, ಪ್ರೇಕ್ಷಕರಿಗೆ ನಿಜಕ್ಕೂ ಹಬ್ಬ ಎನಿಸಲಿದೆ. ಚಂದ್ರು ಕಥೆಯನ್ನು ಎಲ್ಲೂ ಬಿಟ್ಟುಕೊಟ್ಟಿಲ್ಲ. ಕಥೆಯೇ ಚಿತ್ರದ ಹೈಲೈಟ್ ಎನ್ನಬಹುದು ಎಂದರು. ಇಡೀ ತಂಡ ತುಂಬಾ ಶ್ರಮದಿಂದ ಈ ಸಿನಿಮಾ ಮಾಡಿದ್ದು, 'ಕಬ್ಜ'ದಲ್ಲಿ ನನಗೊಂದು ಒಳ್ಳೆಯ ಪಾತ್ರವಿದೆ ಎಂದು ನಾಯಕಿ ಶ್ರೇಯಾಶರಣ್ ಹೇಳಿದರು. ವಿಶೇಷ ಪಾತ್ರದಲ್ಲಿ ಕಾಣಿಸಿಕೊಂಡಿರುವ ಅನೂಪ್ ರೇವಣ್ಣ ತಮ್ಮ ಅನುಭವಗಳನ್ನು ಹಂಚಿಕೊಂಡರು. ಅಪ್ಪು ಹುಟ್ಟುಹಬ್ಬವಾದ ಮಾ.17ರಂದು ಪ್ಯಾನ್ ಇಂಡಿಯಾ ಸಿನಿಮಾ "ಕಬ್ಜ" ವಿಶ್ವದಾದ್ಯಂತ ಬಿಡುಗಡೆಯಾಗುತ್ತಿದೆ. ಈ ಚಿತ್ರದ ಮುಖ್ಯ ಪಾತ್ರವೊಂದರಲ್ಲಿ ಕಿಚ್ಚ ಸುದೀಪ್ ಅವರು ಅಭಿನಯಿಸಿದ್ದಾರೆ. ಕಾರ್ಯಕಾರಿ ನಿರ್ಮಾಪಕರಾಗಿ ಅಲಂಕಾರ್ ಪಾಂಡ್ಯನ್ ಸಾಥ್ ನೀಡಿದ್ದಾರೆ.


ಐದು ಪಾತ್ರಗಳ ಸುತ್ತ 'ಕಡಲತೀರದ ಭಾರ್ಗವ'



ಕಡಲತೀರದ ಭಾರ್ಗವ ಡಾ.ಶಿವರಾಮ ಕಾರಂತರ ಬಿರುದು. ಇದೇ ಶೀರ್ಷಿಕೆಯಡಿ ಸ್ನೇಹಿತರಾದ ವರುಣ್‌ರಾಜು ಹಾಗೂ ಭರತ್‌ಗೌಡ ಚಿತ್ರವೊಂದನ್ನು ನಿರ್ಮಿಸಿದ್ದು ಆ ಚಿತ್ರ ಈ ವಾರ ರಾಜ್ಯಾದ್ಯಂತ ತೆರೆ ಕಾಣುತ್ತಿದೆ. ಚಿತ್ರದಲ್ಲಿ ನಾಯಕ ಭಾರ್ಗವನ(ಪರಶುರಾಮ) ಗುಣಗಳನ್ನು ಮೈಗೂಡಿಸಿಕೊಂಡಿರುತ್ತಾನೆ. ವರುಣ್‌ರಾಜು, ಭರತ್‌ಗೌಡ, ಶೃತಿಪ್ರಕಾಶ್, ಕೆ.ಎಸ್.ಶ್ರೀಧರ್ ಹಾಗೂ ರಾಘವನಾಗ್ ಈ ಐದು ಪ್ರಮುಖ ಪಾತ್ರಗಳ ಸುತ್ತ ನಡೆಯುವ ಕಥೆಯಿದಾಗಿದ್ದು, ಅವರಲ್ಲಿ ನಾಯಕ ವರುಣ್ ಸ್ನೇಹಕ್ಕೆ ಬೆಲೆ ಕೊಡುವಂಥ, ಫಿಲಾಸಫಿ ಬಗ್ಗೆ ತಿಳಿದುಕೊಂಡಿರುವ ಜೊತೆಗೆ ಕೋಪವನ್ನೂ ಮೈಗೂಡಿಸಿಕೊಂಡವನು. ಈ ಚಿತ್ರಕ್ಕೆ ಪನ್ನಗ ಸೋಮಶೇಖರ್ ಕಥೆ ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಈ ಕುರಿತಂತೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ನಾಯಕ, ನಿರ್ಮಾಪಕ ವರುಣ್‌ರಾಜು, ಮನುಷ್ಯನಲ್ಲಿ ಎಲ್ಲ ರೀತಿಯ ಭಾವನೆಗಳಿರುತ್ತವೆ. ಆ ಎಮೋಷನ್‌ಗಳನ್ನಿಟ್ಟುಕೊಂಡು ಮಾಡಿರುವ ಕಥೆಯೇ ಕಡಲತೀರದ ಭಾರ್ಗವ. ಟೈಟಲ್‌ರೋಲ್ ನಾನೇ ಮಾಡಿದ್ದೇನೆ. ಹಾಗಂತ ನಾನೊಬ್ಬನೇ ಹೀರೋ ಅಲ್ಲ, ಐದು ಪಾತ್ರಗಳಿಗೂ ಸಮಾನ ಅವಕಾಶವಿದೆ, ಎಲ್ಲೂ ಇದು ಹೊಸಬರ ಚಿತ್ರ ಎನಿಸಲ್ಲ. ನನಗೆ ಚಿಕ್ಕವನಿದ್ದಾಗಿನಿಂದಲೂ ಕಲಾವಿದನಾಗಬೇಕು ಎಂಬ ಆಸೆಯಿತ್ತು. ಸ್ನೇಹಿತ ಭರತ್ ಜೊತೆ ಸೇರಿ ನಿರ್ಮಾಪಕನೂ ಆದೆ. ಭಾರ್ಗವರಾಮ ಅಥವಾ ಪುರಾಣಗಳಲ್ಲಿ ಬರುವ ಪವರ್‌ಫುಲ್ ಪಾತ್ರ, ಇಲ್ಲಿ ನಾಯಕ ಭಾರ್ಗವ, ಪರಶುರಾಮನ ಗುಣಲಕ್ಷಣಗಳನ್ನು ಹೊಂದಿದವನು. ಏನೇ ಆದರೂ ಗುರಿ ಸಾಧಿಸುತ್ತೇನೆಂಬ ಛಲದಿಂದ ಮುನ್ನಡೆಯುವವನು. ನಮ್ಮಲ್ಲಿ ಏನೇ ವಿಷಯ ಇದ್ದರೂ ಮಾತಾಡದೆ ಹೋದರೆ ಅದು ಯಾವ ಹಂತ ತಲುಪಬಹುದು, ಅಲ್ಲದೆ ಒಂದು ನಗುವಿಗೆ ಎಂಥ ಶಕ್ತಿಯಿದೆ ಎಂದು ಈ ಚಿತ್ರದಲ್ಲಿ ತೋರಿಸಿದ್ದೇವೆ. 6 ಸುಂದರ ಹಾಡುಗಳಿದ್ದು, ಯಾವ ಹಾಡೂ ಕಥೆಯಿಂದ ಹೊರತಾಗಿಲ್ಲ, ಕಡಲತೀರದ ಭಾರ್ಗವ ಒಂದು ಫೀಲ್‌ಗುಡ್ ಚಿತ್ರ ಎಂದು ಹೇಳಿದರು. ನಿರ್ದೇಶಕ ಪನ್ನಗ ಸೋಮಶೇಖರ್ ಮಾತನಾಡಿ, ಇದು ಸೈಕಲಾಜಿಕಲ್ ಥ್ರಿಲ್ಲರ್ ಚಿತ್ರ, ಶಿವರಾಮ ಕಾರಂತರಿಗೆ ಧಕ್ಕೆ ತರುವಂತಹ ಯಾವುದೇ ಕೆಲಸವನ್ನೂ ಮಾಡಿಲ್ಲ. ಈಗಾಗಲೇ ಚಿತ್ರವನ್ನು ಹಲವರಿಗೆ ತೋರಿಸಿದ್ದು, ನೋಡಿದವರೆಲ್ಲ ಮೆಚ್ಚಿಕೊಂಡಿದ್ದಾರೆ ಎಂದರು. ಈಗಾಗಲೇ 'ಕಡಲತೀರದ ಭಾರ್ಗವ' ಚಿತ್ರದ ಮೊದಲ ಟಿಕೆಟ್ ದಾಖಲೆಯ ಎರಡೂವರೆ ಲಕ್ಷ ರೂ.ಗಳಿಗೆ ಹರಾಜಿನಲ್ಲಿ ಮಾರಾಟವಾಗಿದೆ. ನಾಯಕ ವರುಣ್‌ರಾಜು ಅವರ ಸಂಬಂಧಿಯೂ ಆದ ಮೋಹನ್‌ರಾಜು ಈ ಟಿಕೆಟ್ ಪಡೆದಿದ್ದಾರೆ. ಕಡಲತೀರದ ಭಾರ್ಗವ ಚಿತ್ರದ ಹಿಂದೆ ಉತ್ಸಾಹಿ ಯುವಕರ ತಂಡವಿದ್ದು, ಈ ಚಿತ್ರವನ್ನು ವರುಣ್‌ರಾಜು ಮತ್ತು ಭರತ್‌ಗೌಡ ಜಂಟಿಯಾಗಿ ನಿರ್ಮಿಸಿದ್ದಾರೆ. ಇನ್ನು ಈ ಚಿತ್ರಕ್ಕೆ ಅನಿಲ್ ಸಿ.ಜೆ. ಅವರ ಸಂಗೀತ ಸಂಯೋಜನೆ ಮತ್ತು ಕೀರ್ತನ್ ಪೂಜಾರಿ ಅವರ ಛಾಯಾಗ್ರಹಣವಿದೆ.

ರುದ್ರಭೂಮಿಯಲ್ಲಿ 'ಕೊನೆಯ ನಿಲ್ದಾಣ'

ಮೈಸೂರಿನ ಹಿಂದೂ ರುದ್ರಭೂಮಿಯಲ್ಲಿ ಎಂ.ಡಿ.ಕೌಶಿಕ್ ಅವರ ನಿರ್ದೇಶನದ 'ಕೊನೆಯ ನಿಲ್ದಾಣ' ಚಿತ್ರದ ಮುಹೂರ್ತ ನಡೆಯಿತು. ಮೈಸೂರು ಮೇಯರ್ ಶಿವಕುಮಾರ್ ಚಿತ್ರದ ಮೊದಲ ದೃಶ್ಯಕ್ಕೆ ಕ್ಲಾಪ್ ಮಾಡಿದರು. ನಂತರ ಮಾತನಾಡಿದ ಅವರು, ಮಾನವೀಯ ಮೌಲ್ಯವನ್ನು ಎತ್ತಿ ಹಿಡಿಯುವ ಚಿತ್ರ ಇದಾಗಿದ್ದು, ಜೀವನದ ಕೊನೆಯ ದಿನಗಳಲ್ಲಿ ಮನುಷ್ಯ ಮುಕ್ತಿಯನ್ನು ಹೊಂದುತ್ತಾನೆ. ಇದೇ ಊರಿನ ಆದರ್ಶ ಮಹಿಳೆ ನೀಲಮ್ಮನ ಕಥೆಯನ್ನು ಈ ಚಿತ್ರದಲ್ಲಿ ಹೇಳುತ್ತಿದ್ದಾರೆ ಎಂದರು. ಅನಿವಾಸಿ ಕನ್ನಡಿಗ ಹರೀಶ್.ಎಸ್. ಕೋಲಾರ ಅವರು ನಿರ್ಮಿಸುತ್ತಿರುವ ಚಿತ್ರ ಇದಾಗಿದ್ದು ಹಿರಿಯನಟ, ನಿರ್ದೇಶಕ ಎಂ.ಡಿ.ಕೌಶಿಕ್ ಈ ಚಿತ್ರಕ್ಕೆ ಆಕ್ಷನ್‌ಕಟ್ ಹೇಳುವ ಜತೆಗೆ ಒಂದು ಪಾತ್ರದಲ್ಲೂ ನಟಿಸುತ್ತಿದ್ದಾರೆ. ಹುಟ್ಟು ಸಾವು ನಿರಂತರ ಪ್ರಕ್ರಿಯೆ. ಇಲ್ಲಿ ಯಾರೂ ಶಾಶ್ವತವಾಗಿರಲು ಸಾಧ್ಯವಿಲ್ಲ. ಆತ ಪ್ರಪಂಚವನ್ನಾಳುವ ದೊರೆಯಾಗಿದ್ದರೂ, ಅಥವಾ ರಸ್ತೆಯಲ್ಲಿ ಭಿಕ್ಷೆ ಬೇಡುವ ಭಿಕಾರಿಯಾಗಿದ್ದರೂ ಅಷ್ಟೇ. ಇಬ್ಬರಿಗೂ ಕಡೆಯ ನಿಲ್ದಾಣ ಒಂದೇ ಆಗಿರುತ್ತದೆ ಎಂಬುದನ್ನು ನಿರ್ದೇಶಕ ಎಂ.ಡಿ. ಕೌಶಿಕ್ ಈ ಸಿನಿಮಾದ ಮೂಲಕ ಹೇಳಹೊರಟಿದ್ದಾರೆ. ಮೂರು ದಶಕಕ್ಕೂ ಹೆಚ್ಚು ಕಾಲದಿಂದ ರುದ್ರಭೂಮಿಯಲ್ಲಿ ಸಾವಿರಕ್ಕೂ ಹೆಚ್ಚು ಗುಂಡಿಗಳನ್ನು ತೋಡಿರುವ ನೀಲಮ್ಮ ಅವರು 'ಕೊನೆಯ ನಿಲ್ದಾಣ' ಚಿತ್ರದಲ್ಲಿ ತನ್ನದೇ ಪಾತ್ರವನ್ನು ನಿರ್ವಹಿಸುತ್ತಿದ್ದಾರೆ. ಹೀಗೆ ತನ್ನ ಲೈಫ್ ಸ್ಟೋರಿಯಲ್ಲಿ ತಾನೇ ಅಭಿನಯಿಸುವ ಅವಕಾಶ ಸಿಗೋದು ತುಂಬಾ ಕಮ್ಮಿ. ಚಿತ್ರದ ಉಳಿದ ತಾರಾಗಣದಲ್ಲಿ ಮಹೇಶ್ ದೇವು, ಹಾಸನದ ಪೂಜಾ ರಘುನಂದನ್, ಮೀಸೆ ಆಂಜನಪ್ಪ, ಬಸವರಾಜ ಮೈಸೂರು, ಉಗ್ರಂ ಸುರೇಶ್, ನಾಣಿ ಹೆಬ್ಬಾಳ ನಟಿಸುತ್ತಿದ್ದಾರೆ. ಪ್ರೊ.ದೊಡ್ಡರಂಗೇ ಗೌಡ ಮತ್ತು ಆಸ್ಟ್ರೇಲಿಯಾದ ಕೃಷ್ಣಪ್ರಸಾದ್, ಅಮೇರಿಕಾದ ಮಧು ಅಕ್ಕಿಹೆಬ್ಬಾಳ್ ಅವರ ಸಾಹಿತ್ಯಕ್ಕೆ ಮೂಡಲ್ ಕುಣಿಗಲ್ಕೆರೆ ಖ್ಯಾತಿಯ ರಾಮ್‌ಪ್ರಸಾದ್ ಸಂಗೀತವಿದೆ. ಪಿ.ವಿ.ಆರ್.ಸ್ವಾಮಿ ಛಾಯಾಗ್ರಹಣ, ಬಿ.ಶಿವಾನಂದ ಕಥೆ ಚಿತ್ರಕಥೆ, ಸಂಭಾಷಣೆ ಚಿತ್ರಕ್ಕಿದೆ. ಚಿತ್ರದ ಸಂಪೂರ್ಣ ಚಿತ್ರೀಕರಣ ಸ್ಮಶಾನದಲ್ಲಿಯೇ ನಡೆಯಲಿದೆ.



'ಕೊನೆಯ ನಿಲ್ದಾಣ' ಚಿತ್ರದ ಮುಹೂರ್ತದಲ್ಲಿ ಮೈಸೂರು ಮೇಯರ್ ಶಿವಕುಮಾರ್ ಚಿತ್ರದ ಮೊದಲ ದೃಶ್ಯಕ್ಕೆ ಕ್ಲಾಪ್ ಮಾಡಿದರು.

ಸಾಮಾಜಿಕ ಸಮಸ್ಯೆಗಳ ಸುತ್ತ 'ಮೈ ಹೀರೋ'




ಈ ಹಿಂದೆ ಪುನೀತ್ ಅಭಿನಯದ ಬೆಟ್ಟದ ಹೂ ಚಿತ್ರದಲ್ಲಿ ಹಾಲಿವುಡ್ ನಟಿಯೊಬ್ಬರು ಅಭಿನಯಿಸಿದ್ದರು, ಅದೇ ರೀತಿಯ ಮತ್ತೊಂದು ಚಿತ್ರ ನಿರ್ಮಾಣವಾಗುತ್ತಿದೆ. ವಿಜಯಕುಮಾರ್ ಅವರ ನಿರ್ದೇಶನದ ಸಾಮಾಜಿಕ ಸಮಸ್ಯೆಗಳ ಸುತ್ತ ಹೆಣೆಯಲಾದ ಕಥಾಹಂದರ ಹೊಂದಿರುವ 'ಮೈ ಹೀರೋ' ಚಿತ್ರಕ್ಕೆ ಬಸವನಗುಡಿಯ ರೇಣುಕಾದೇವಿ ದೇವಸ್ಥಾನದಲ್ಲಿ ಇತ್ತೀಚೆಗೆ ಚಾಲನೆ ದೊರೆಯಿತು.

ಮುಹೂರ್ತದ ನಂತರ ನಡೆದ ಪತ್ರಿಕಾಗೋಷ್ಠಿಯಲ್ಲಿ ಚಿತ್ರದ ನಿರ್ದೇಶಕ ಹಾಗೂ ನಿರ್ಮಾಪಕ ಅವಿನಾಶ್ ವಿಜಯಕುಮಾರ್ ಮಾತನಾಡುತ್ತಾ, ಮೂಲತಃ ನಾನೊಬ್ಬ ರಂಗಭೂಮಿ ಕಲಾವಿದ. ನನ್ನ ನಿರ್ದೇಶನದಲ್ಲಿ ಮೂಡಿಬರುತ್ತಿರುವ ಮೊದಲ ಚಿತ್ರವಿದು, ಎ.ವಿ.ಸ್ಟುಡಿಯೋಸ್ ಬ್ಯಾನರ್ ಮೂಲಕ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದೇವೆ. ಪ್ರಪಂಚದಾದ್ಯಂತ ಇರುವ ಸಾಮಾಜಿಕ ಸಮಸ್ಯೆಗಳನ್ನು ಕೇಂದ್ರವಾಗಿಟ್ಟುಕೊಂಡು ಹೆಣೆದಿರುವ ಕಥೆಯಿದು. ಅಧಿಕಾರಿಯೊಬ್ಬರು ಅಮೇರಿಕಾದಿಂದ ಭಾರತಕ್ಕೆ ಬಂದಾಗ ಇಲ್ಲಿ ಅವರಿಗೆ ಹುಡುಗನೊಬ್ಬನ ಪರಿಚಯವಾಗುತ್ತದೆ. ಅವರಿಬ್ಬರ ನಡುವೆ ಹೆಚ್ಚಿನ ಕಥೆ ಸಾಗುತ್ತದೆ. ಕೆಲವು ಚಿತ್ರಗಳಲ್ಲಿ ಭಾರತವನ್ನು ಬಡರಾಷ್ಟ್ರ ಎಂದು ಬಿಂಬಿಸಿ ತೋರಿಸಲಾಗುತ್ತದೆ. ಆದರೆ ನಮ್ಮ ಚಿತ್ರದಲ್ಲಿ ಭಾರತವನ್ನು ಬೇರೆಯದೇ ರೀತಿಯಲ್ಲಿ ತೋರಿಸುತ್ತಿದ್ದೇವೆ. ನಮ್ಮ ಚಿತ್ರ ನೋಡಿದ ಮೇಲೆ ಭಾರತವನ್ನು ನೋಡುವ ರೀತಿಯೇ ಬದಲಾಗಬಹುದು ಎಂಬುದು ನನ್ನ ಅನಿಸಿಕೆ. ಹಾಲಿವುಡ್ ನಟ ಜಿಲಾಲಿ ರೆಜ್ ಕಲ್ಲಾಹ್ ಹಾಗೂ ಬಾಲನಟ ವೇದಿಕ್ ಕೌಶಿಕ್ 'ಮೈ ಹೀರೋ' ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸುತ್ತಿದ್ದಾರೆ. ಪ್ರಕಾಶ್ ಬೆಳವಾಡಿ ಅವರು ಜಿಲ್ಲಾಕಾರಿಯಾಗಿ, ದತ್ತಣ್ಣ ಅವರು ಪುರೋಹಿತರ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ನಟ ನಿರಂಜನ್ ದೇಶಪಾಂಡೆ ಕೂಡ ಈ ಚಿತ್ರದಲ್ಲಿ ನಟಿಸುತ್ತಿದ್ದಾರೆ.

ಸಿನಿಪದಬಂಧ-463

ಉಮ್ಮತ್ತೂರು ಇಂದುಶೇಖರ್
ಮೊ.9880820462



ಹೆಸರು ____________________

ವಿಳಾಸ ____________________

____

ದೂರವಾಣಿ ಸಂಖ್ಯೆ ____________________

ಎಡದಿಂದ ಬಲಕ್ಕೆ

1.'ಹುಚ್ಚ'ನ ಹಾಡಿನ ಆರಂಭದಲ್ಲೇ ರವಿಚಂದ್ರನ್ ಅಭಿನಯವಿದೆ	3
2.ಸುನೀಲ್‌ರಾವ್-ಮಾನ್ಯಳ ರಜತಗಿರಿ	4
5.ಜಿಂಕೆಯಂತಹ ನಟಿ	3
6.ಪುನೀತ್ ರಾಜ್‌ಕುಮಾರ್ 'ಯುದ್ಧಶೂರ'	5
8.ಕ್ಷೀರ ಮಾರುವ ಶಶಿಕುಮಾರ್‌ಗೆ ಎ.ಆರ್.ಬಾಬು ನಿರ್ದೇಶಕ	3
10.ಶಿವಣ್ಣ ಪಟ್ಟಕ್ಕೇರಿದ 'ದೊರೆ'	4
11.ನೀಲ, ವಜ್ರ, ಪದ್ಮ, ಮುತ್ತು, ಹವಳ	4
14.ಮೌನಗೀತೆ ಹಾಡಿದ ನಾಯಕಿ	3
15.ವಿಜಯಲಕ್ಷ್ಮಿಗೆ ಈ ನಾಯಕ 'ನಂಬರ್ ಒನ್'	5
16.ಹಗಲಿನೊಂದಿಗೆ ಬಂದ ರಾತ್ರಿ	3
17.ಲಾಲಿ ಚಿತ್ರದ ನಾಯಕಿ	4
18.ಕುಮಾರ್‌ಗೋವಿಂದ್-ಶಿಲ್ಪಾ ಅಭಿನಯದ 'ಕೊಳ'	3

ವಿಜೇತರು: ಎಸ್.ರಾಜಣ್ಣ SRS, ಹೆಚ್.ಎಂ.ಸರ್ಕಲ್, ಹಾಡ್ಲಿ ಪೋಸ್ಟ್, ಮಳವಳ್ಳಿ ತಾ., ಮಂಡ್ಯ ಜಿಲ್ಲೆ-571475

ಸಿನಿ ಪದಬಂಧ 462ರ ಸರಿ ಉತ್ತರ

ಕಂ	ಬ್ಬಿ	ಹು	ಳ				ಮೃ	ತ್ಯುಂ	ಜ	ಯ
ಶೀ				ಕ	ಲಿ	ಯು	ಗ			
ರ	ವಿ	ಚಂ	ದ್ರ				ಶಿ	ವ	ನಾ	ಗ
ವ		ದ್ರ		ಜಿ			ರ		ದ	
		ಕ		ಮ್ಮಿ		ಕಾ			ಮ	
	ಶಿ	ಲಾ	ಯು	ಗ		ಶಿ	ವ	ಮ	ಯ	
	ವ			ಲ್ಲು		ನಾ		ದ		
	ಲೀ		ಮ			ಥ್		ಕ		ಅಂ
ಆ	ಲೆ	ಮ	ನೆ				ಸಿ	ರಿ	ವಂ	ತ
			ಮ	ಣಿ	ರ	ತ್ನಂ				ರಾ
ಅ	ರ	ಮ	ನೆ				ಕ	ಪ್ಪು	ಕೊ	ಳ

ಮೇಲಿನಿಂದ ಕೆಳಕ್ಕೆ

1.ದಕ್ಷಿಣದ ವಿರುದ್ಧ ದಿಕ್ಕಿನಿಂದ ಬಂದ 'ಶೂರ'	5
3.ಬಂಗಾರಪ್ಪನ ಜೊತೆ ಬಂದವನು	4
4.ಸಂಭಾಷಣೆಗಾರ ನಾಗಭೂಷಣ್ ಅವರ ಊರು	4
5.'ಒಂದು ದಿನ ಎಲ್ಲಿಂದಲೋ ನೀ ಬಂದೆ...', ಹಾಡಿನ ಚಿತ್ರ	6
7.ಕಿಚ್ಚ ಸುದೀಪ್ ಅಭಿನಯದ 'ಚಕ್ರವರ್ತಿ'	4
9.ಹೆಂಡತಿಯಪ್ಪನ ಪುತ್ರಿ 'ಜಯಲಲಿತಾ'	6
11.ಕನ್ನಡದ 'ಫೈವ್‌ಸ್ಟಾರ್'	4
12.ಇದು ಮಣ್ಣಿನದಲ್ಲ....ಕಾಗದದಲ್ಲಿ ಮಾಡಿದ 'ನಾವೆ'	5
13. '_ _ _ _ ನೋಡುವೆ ಏಕೆ ನಿಲ್ಲು ಅಲ್ಲೇ......',	4
14.ವಿಷ್ಣುವರ್ಧನ್-ಸುಮಲತಾ ಅಭಿನಯದಲ್ಲಿ ಉರಿದ ಹಣತೆ	4

ರಾಜ್ಯವನ್ನೇ ಮಾರಾಟಕ್ಕಿಟ್ಟಿರುವ ಬಿಜೆಪಿ

ಕಾಂಗ್ರೆಸ್ ಪಕ್ಷದ ಭರವಸೆಗಳ ಗ್ಯಾರಂಟಿ ಕಾರ್ಡ್ ಬಿಡುಗಡೆ ಸಮಾರಂಭದಲ್ಲಿ ಸುರ್ಜೇವಾಲ ವಾಗ್ದಾಳಿ

ಮಡಿಕೇರಿ, ಮಾ.2– ಕೇಂದ್ರ ಮತ್ತು ರಾಜ್ಯದಲ್ಲಿ ಡಬಲ್ ಭ್ರಷ್ಟಾಚಾರದ ಜನ ವಿರೋಧಿ ಸರ್ಕಾರ ಆಡಳಿತ ನಡೆಸುತ್ತಿದೆ ಎಂದು ಟೀಕಿಸಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಂದೀಪ್ ಸಿಂಗ್ ಸುರ್ಜೇವಾಲ, ಸೋಲನ್ನೇ ಕಣ್ಣ ಮುಂದೆ ಕಾಣುತ್ತಿರುವ ಬಿಜೆಪಿ ಈಗ ದ್ವೇಷದ ರಾಜಕೀಯಕ್ಕೆ ಮುಂದಾಗಿ ಕಾಂಗ್ರೆಸ್ ನಾಯಕರನ್ನು ಮುಗಿಸಿ ಎಂಬಂತಹ ಕೀಳು ಹೇಳಿಕೆ ನೀಡುತ್ತಿದೆ ಎಂದರು.

ನಗರದ ಅಂಬೇಡ್ಕರ್ ಭವನದಲ್ಲಿ ಕಾಂಗ್ರೆಸ್‌ನ ಗ್ಯಾರಂಟಿ ಕಾರ್ಡ್ ಬಿಡುಗಡೆಗೊಳಿಸಿ ಪಕ್ಷದ ಪದಾಧಿಕಾರಿಗಳ ಸಭೆಯನ್ನುದ್ದೇಶಿಸಿ ಮಾತನಾಡಿದ ಸುರ್ಜೇವಾಲ, **ಬಿಜೆಪಿ ಸರ್ಕಾರ ಕರ್ನಾಟಕ ರಾಜ್ಯವನ್ನೇ ಮಾರಾಟಕ್ಕಿಟ್ಟಿದೆ. ಪ್ರತಿಯೊಂದು ಇಲಾಖೆಯಲ್ಲಿಯೂ ಲಂಚಾವತಾರ ತಾಂಡವವಾಡುತ್ತಿದೆ. ವರ್ಗಾವಣೆಯಲ್ಲಿಯೂ ಲಂಚ ಕಾಡುತ್ತಿದ್ದು, ಜನ ಬಿಜೆಪಿ ಬಗ್ಗೆ ಬೇಸತ್ತು ಹೋಗಿದ್ದಾರೆ. ಕರ್ನಾಟಕದಲ್ಲಿ ಬದಲಾವಣೆಗಾಗಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ಜನರು ಸಹಕಾರ ನೀಡಿ ಉತ್ತಮ ಆಡಳಿತಕ್ಕೆ ಅವಕಾಶ ಕಲ್ಪಿಸಬೇಕೆಂದು** ಕರೆ ನೀಡಿದರು.

ಪ್ರತೀ ಮನೆಗೆ 200 ವ್ಯಾಟ್ಸ್ ಉಚಿತ ವಿದ್ಯುತ್, ಪ್ರತೀ ಗೃಹಿಣಿಗೂ ತಿಂಗಳಿಗೆ 2 ಸಾವಿರ ರೂ. ಆರ್ಥಿಕ ನೆರವು , ಪ್ರತೀ ಪಡಿತರದಾರರಿಗೆ 10 ಕೆಜಿ ಉಚಿತ ಅಕ್ಕಿ ನೀಡುವುದಾಗಿ ಕಾಂಗ್ರೆಸ್ ಗ್ಯಾರಂಟಿ ಕಾರ್ಡ್‌ನ ಮಾಹಿತಿ ನೀಡಿದ ಸುರ್ಜೇವಾಲ, ಕಾಂಗ್ರೆಸ್ ಭರವಸೆಯನ್ನು ಪ್ರತೀ ಮನೆ ಮನೆಗೂ ಕಾರ್ಯಕರ್ತರ ತಂಡ ತಲುಪಿಸಬೇಕು. ಈ ಮೂಲಕ ಕಾಂಗ್ರೆಸ್ ಕರ್ನಾಟಕದಲ್ಲಿ ಅಧಿಕಾರಕ್ಕೆ ಬರುವಂತೆ ಮಾಡಬೇಕೆಂದು ಸೂಚಿಸಿದರು.

ಕಾಂಗ್ರೆಸ್ ನೀಡಿರುವ ಭರವಸೆಯನ್ನು ಹೇಗೆ ಈಡೇರಿಸಲಿದೆ. ಆರ್ಥಿಕ ಕ್ರೋಡೀಕರಣ ಹೇಗೆ ಎಂಬ ಪ್ರಶ್ನೆ ಹಲವರದ್ದಾಗಿದೆ ಎಂದ ರಂದೀಪ್ ಸುರ್ಜೇವಾಲ, ಈಗ ಬಿಜೆಪಿ ಸರ್ಕಾರ ಶೇ.40ರ ಕಮಿಷನ್ ದಂಧೆಯಲ್ಲಿ ನಿರತವಾಗಿದೆ. ರಾಜ್ಯ ಸರ್ಕಾರದ ಬಜೆಟ್ 3.10 ಲಕ್ಷ ಕೋಟಿಗಳಾಗಿದೆ. ಶೇ.40 ಕಮಿಷನ್ ಎಂದಾದರೆ 1.12 ಲಕ್ಷ ಕೋಟಿ ರೂ. ಲಂಚಕ್ಕೆ ವಿನಿಯೋಗವಾಗುತ್ತಿದೆ. ಈ ಕಮಿಷನ್ ಹಣವನ್ನೇ ರಾಜ್ಯದ ಜನತೆಗೆ ಸೌಲಭ್ಯಗಳ ಮೂಲಕ ನೀಡಲು ಬಳಸುವುದಾಗಿ ವಿವರಿಸಿದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದೊಡನೇ ಲಂಚ ಮುಕ್ತ ಕರ್ನಾಟಕದ ಗುರಿ ಹೊಂದುವುದಾಗಿ ಹೇಳಿದ ಅವರು, ಕಾಂಗ್ರೆಸ್‌ನ ಯಾವುದೇ ನಾಯಕರು ಲಂಚ ಪಡೆದದ್ದು ಗೊತ್ತಾದಲ್ಲಿ ಅಂತಹವರನ್ನು ಪಕ್ಷದಿಂದಲೇ ಹೊರದಬ್ಬುವುದಾಗಿ ಘೋಷಿಸಿದರು. ಶೇ.40 ಕಮಿಷನ್ ದಂಧೆಯಿಂದ ಜನರ ನಂಬಿಕೆ ಕಳೆದುಕೊಂಡಿರುವ ರಾಜ್ಯ ಬಿಜೆಪಿ ಮೋದಿ, ಅಮಿತ್ ಶಾ ಅವರನ್ನು ಪದೇ ಪದೆ ರಾಜ್ಯಕ್ಕೆ ಕರೆಯಿಸಿಕೊಂಡು ಸುಳ್ಳು ಪ್ರಚಾರದ ಮೂಲಕ ಜನರ ವಿಶ್ವಾಸ ಗಿಟ್ಟಿಸಲು ಹೆಣಗಾಡುತ್ತಿದೆ. ಆದರೆ ರಾಜ್ಯದ ಜನತೆಗೆ ಬಿಜೆಪಿಯ ಬಗ್ಗೆ ನಂಬಿಕೆ, ವಿಶ್ವಾಸವೇ ಹೊರಟು ಹೋಗಿದೆ ಎಂದೂ ಅವರು ಹೇಳಿದರು.

ಚುನಾವಣಾ ಸ್ಪರ್ಧಾಕಾಂಕ್ಷಿಗಳ ಸಂಖ್ಯೆ ಎರಡೂ ಕ್ಷೇತ್ರಗಳಲ್ಲಿ ಹೆಚ್ಚು ಇರುವ ಹಿನ್ನೆಲೆಯಲ್ಲಿ ಸಭೆಯ ಪ್ರಾರಂಭದಲ್ಲಿಯೇ ನಿರೂಪಕ ಎಸ್.ಐ. ಮುನೀರ್ ಅಹಮ್ಮದ್ ಯಾವುದೇ ಆಕಾಂಕ್ಷಿಯ ಪರ ಜೈಕಾರ ಹಾಕದಂತೆ ಪದಾಧಿಕಾರಿಗಳನ್ನು ವಿನಂತಿಸಿದ್ದರು.

ಕಾರ್ಯಕ್ರಮದಲ್ಲಿ ಎಐಸಿಸಿ ಕಾರ್ಯದರ್ಶಿ, ಕೊಡಗು ಉಸ್ತುವಾರಿ ರೋಜಿ ಜಾನ್, ಮಾಜಿ ಸಂಸದ ಧ್ರುವನಾರಾಯಣ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಕೊಡಗು ಕಾಂಗ್ರೆಸ್ ಅಧ್ಯಕ್ಷ ಧರ್ಮಜ ಉತ್ತಪ್ಪ ಪ್ರಮುಖರಾದ ಎಚ್.ಎಸ್.ಚಂದ್ರಮೌಳಿ, ಎ.ಎಸ್. ಪೊನ್ನಣ್ಣ ವೀಣಾ ಅಚ್ಚಯ್ಯ, ಬಿ.ಎ.ಜೀವಿಜಯ, ಡಾ.ಮಂಥರ್ ಗೌಡ, ಕೆ.ಕೆ.ಮಂಜುನಾಥ್ ಕುಮಾರ್, ಕೆ.ಪಿ.ಚಂದ್ರಕಲಾ, ಹರಪನಹಳ್ಳಿ ರವೀಂದ್ರ ಕೆ.ಎಂ. ಲೋಕೇಶ್‌ಕುಮಾರ್, ಸುರಯ್ಯ ಅಬ್ರಾರ್, ರಾಜೇಶ್ ಯಲ್ಲಪ್ಪ ಟಿ.ಪಿ.ರಮೇಶ್, ನಟೇಶ್ ಗೌಡ, ಹಂಸ, ನವೀನ್ ಹಾಜರಿದ್ದರು.



10 ದಿನಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಮೊದಲ ಪಟ್ಟಿ ಬಿಡುಗಡೆ

ಇನ್ನು 10 ದಿನಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆಗೊಳಿಸುವುದಾಗಿ ಘೋಷಿಸಿದ ಎಐಸಿಸಿ ಪ್ರಧಾನ ಕಾರ್ಯದರ್ಶಿ ರಂದೀಪ್ ಸಿಂಗ್ ಸುರ್ಜೇವಾಲ ಭಾರತದಲ್ಲಿ ಮೋದಿ ರಾಜ್ ಅಂತ್ಯಕ್ಕೆ ಕರ್ನಾಟಕವೇ ನಾಂದಿ ಹಾಡಲಿದೆ ಎಂದೂ ಭವಿಷ್ಯ ನುಡಿದಿದ್ದಾರೆ.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಸುರ್ಜೇವಾಲ, ಕರ್ನಾಟಕದಲ್ಲಿ ಕಾಂಗ್ರೆಸ್ ಪರ ಮತದಾರರ ಒಲವು ವ್ಯಕ್ತವಾಗಿದ್ದು ಬಿಜೆಪಿಯ ಲಂಚಾವತಾರದ ವಿರುದ್ದ ಜನ ಬೇಸತ್ತು ಹೋಗಿದ್ದಾರೆ. ಹೀಗಾಗಿ ಕಾಂಗ್ರೆಸ್ ಮುಂದಿನ ಚುನಾವಣೆಯಲ್ಲಿ ಅಧಿಕಾರಕ್ಕೆ ಬರಲಿದೆ. ಹೀಗಾಗಿ ಕಾಂಗ್ರೆಸ್ ಜನರಿಗೆ ಪ್ರಯೋಜನವಾಗುವಂತಹ ಅನೇಕ ಸೌಲಭ್ಯಗಳನ್ನು ಕಲ್ಪಿಸಿದೆ. ಕೊಡಗಿನ ಕಾಫಿ ಬೆಳೆಗಾರರ ಸಮಸ್ಯೆ, ವನ್ಯಜೀವಿ ಸಂಘರ್ಷದ ಸಮಸ್ಯೆಗಳನ್ನು ಕಾಂಗ್ರೆಸ್ ಪರಿಹರಿಸಲಿದೆ ಎಂದು ಅವರು ಭರವಸೆ ನೀಡಿದರು. ಬಿಜೆಪಿಯು ಕರ್ನಾಟಕದ ಜನರ ಪಾಲಿಗೆ ಶಾಪದಂತಾಗಿದೆ. ಇದುವೇ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಪಾಲಿಗೆ ವರವಾಗಲಿದೆ ಎಂದೂ ಸುರ್ಜೇವಾಲ ಅಭಿಪ್ರಾಯ ವ್ಯಕ್ತಪಡಿಸಿದರು.

ಮೇಘಾಲಯ, ತ್ರಿಪುರ ರಾಜ್ಯಗಳಲ್ಲಿನ ಚುನಾವಣಾ ಫಲಿತಾಂಶದ ಬಗ್ಗೆ ಅನಿಸಿಕೆ ವ್ಯಕ್ತಪಡಿಸಿದ ಸುರ್ಜೇವಾಲ, ಹಣ, ತೋಳ್ಬಲದಿಂದ ಬಲದಿಂದ ಬಿಜೆಪಿ ಅಲ್ಲಿ ಗೆಲವು ಸಾಧಿಸಿದೆ. ಆದರೆ ಅನೇಕ ರಾಜ್ಯಗಳಲ್ಲಿನ ಉಪಚುನಾವಣೆಗಳಲ್ಲಿ ಬಿಜೆಪಿ ಹೀನಾಯವಾಗಿ ಸೋಲು ಕಂಡಿದೆ. ಇದು ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಾಲಿಗೆ ಆಶಾದಾಯಕವಾಗಿದೆ. ವಿಶೇಷವಾಗಿ ಕರ್ನಾಟಕದಲ್ಲಿ ಸ್ಪಷ್ಟವಾಗಿ ಕಾಂಗ್ರೆಸ್ ಪರ ಅಲೆಯಿದ್ದು, ಭಾರತದಲ್ಲಿ ಮೋದಿ ರಾಜ್ ಅಂತ್ಯಕ್ಕೆ ಕರ್ನಾಟಕವೇ ನಾಂದಿ ಹಾಡಲಿದೆ ಎಂದೂ ರಂದೀಪ್ ಸಿಂಗ್ ಸುರ್ಜೇವಾಲ ಭವಿಷ್ಯ ನುಡಿದರು.

ಅಮ್ಮತ್ತಿಯಲ್ಲಿ ಅಂಬೇಡ್ಕರ್ ಭವನ ನಿರ್ಮಾಣಕ್ಕೆ 75 ಲಕ್ಷ ರೂ ಮಂಜೂರು

ಮಡಿಕೇರಿ, ಮಾ.2– ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರ ಸಮುದಾಯ ಚಟುವಟಿಕೆಗಳಿಗಾಗಿ ಡಾ.ಬಿ.ಆರ್.ಅಂಬೇಡ್ಕರ್ ಭವನ, ಡಾ.ಬಾಬು ಜಗಜೀವನ ರಾಂ ಭವನ, ಮಹರ್ಷಿ ವಾಲ್ಮೀಕಿ ಭವನ ಮತ್ತು ಇತರೇ ಸಮುದಾಯಗಳ ಭವನ ನಿರ್ಮಾಣದ ಉದ್ದೇಶ ಮತ್ತು ಅಗತ್ಯ ಸೌಲಭ್ಯಗಳನ್ನು ಪರಿಗಣಿಸಿ, ವೆಚ್ಚದ ಮೊತ್ತವನ್ನು ಪರಿಷ್ಕರಿಸಿ 2019 ರ ಮಾರ್ಚ್, 25 ರ ಆದೇಶದಲ್ಲಿ ಪರಿಷ್ಕೃತ ಮಾರ್ಗಸೂಚಿ ಹೊರಡಿಸಲಾಗಿದೆ. ಶಾಸಕ ಕೆ.ಜಿ.ಬೋಪಯ್ಯ ಅವರ ಪ್ರಯತ್ನದಿಂದ ಕೊಡಗು ಜಿಲ್ಲೆಯ ವಿರಾಜಪೇಟೆ ತಾಲೂಕಿನ ಅಮ್ಮತ್ತಿ ಹೋಬಳಿ ಮಟ್ಟದಲ್ಲಿ ಡಾ.ಬಿ.ಆರ್.ಅಂಬೇಡ್ಕರ್ ಭವನ ನಿರ್ಮಾಣ ಕಾಮಗಾರಿಗೆ 75 ಲಕ್ಷ ರೂ. ಅನುದಾನ ಮಂಜೂರು ಮಾಡಿ ಸರ್ಕಾರ ಆದೇಶ ಹೊರಡಿಸಿದೆ.

ಆಸ್ತಿ ವಿಚಾರವಾಗಿ ಆರಂಭವಾದ ಜಗಳ ಕೊಲೆಯಲ್ಲಿ ಅಂತ್ಯ

ಸೋದರ ಸಂಬಂಧಿಯನ್ನು ಇರಿದುಕೊಂದು ಜೈಲು ಸೇರಿದ ಆರೋಪಿ

ಮಡಿಕೇರಿ, ಮಾ.2– ಆಸ್ತಿ ವಿಚಾರಕ್ಕೆ ವ್ಯಕ್ತಿಯೊಬ್ಬರನ್ನು ಚೂರಿಯಿಂದ ಇರಿದು ಕೊಲೆಗೈದ ಘಟನೆ ಪೊನ್ನಂಪೇಟೆ ತಾಲೂಕಿನ ಹರಿಹರ ಗ್ರಾಮದಲ್ಲಿ ಸಂಭವಿಸಿದೆ.

ಅಲ್ಲಿನ ನಿವಾಸಿ ಎಂ.ಸಂತು ಸುಬ್ಬಯ್ಯ (39) ಎಂಬುವರೇ ಕೊಲೆಯಾದ ದುರ್ದೈವಿ. ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಕಾಳಪ್ಪ (35) ಎಂಬಾತನನ್ನು ಶ್ರೀಮಂಗಲ ಪೊಲೀಸರು ಬಂಧಿಸಿದ್ದಾರೆ.

ಘಟನೆ ವಿವರ: ಮೃತ ಸಂತು ಸುಬ್ಬಯ್ಯ ಮತ್ತು ಕೊಲೆ ಆರೋಪಿ ಕಾಳಪ್ಪ ಸೋದರ ಸಂಬಂಧಿಗಳಾಗಿದ್ದು, ನಿನ್ನೆ ಇಬ್ಬರು ರಾತ್ರಿ ಒಟ್ಟಿಗೆ ಮದ್ಯ ಸೇವಿಸಿದ್ದಾರೆ ಎನ್ನಲಾಗುತ್ತಿದೆ. ಈ ವೇಳೆ ಕಾಳಪ್ಪ ಮತ್ತು ಸಂತು ಸುಬ್ಬಯ್ಯ ನಡುವೆ ಆಸ್ತಿ ವಿಚಾರಕ್ಕೆ ಗಲಾಟೆ ನಡೆದಿದೆ. ಈ ಸಂದರ್ಭ ಕಾಳಪ್ಪ ಚೂರಿಯಿಂದ ಸಂತು ಸುಬ್ಬಯ್ಯ ಅವರ ಹೊಟ್ಟೆಯ ಭಾಗಕ್ಕೆ ಇರಿದಿದ್ದಾನೆ. ರಕ್ತದ ಮಡುವಿನಲ್ಲಿದ್ದ ಸಂತು ಸುಬ್ಬಯ್ಯ ಅವರನ್ನು ತಕ್ಷಣವೇ ಸಮೀಪದ ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗಾಗಿ ಹುಣಸೂರು ಆಸ್ಪತ್ರೆಗೆ ಸ್ಥಳಾಂತರಿಸಲಾಯಿತು. ಆದರೆ ಆ ಹೊತ್ತಿಗೆ ಸಂತು ಸುಬ್ಬಯ್ಯ ಮೃತಪಟ್ಟಿರುವುದಾಗಿ ವೈದ್ಯರು ದೃಢಪಡಿಸಿದ್ದಾರೆ. ಘಟನೆಯ ಕುರಿತು ಮೃತರ ಪತ್ನಿ ಶ್ರೀಮಂಗಲ ಪೊಲೀಸರಿಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು ಆರೋಪಿ ಕಾಳಪ್ಪನನ್ನು ಬಂಧಿಸಿ, ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ.

ಪದ್ಮಾವತಿ ನಿಧನ



ಸುಂಟಿಕೊಪ್ಪ, ಮಾ.2– ಗದ್ದೆಹಳ್ಳ ನಾರ್ಗಾಣೆ ಗ್ರಾಮದ ಶ್ರೀದೇವಿ ಬಡಾವಣೆ ನಿವಾಸಿ ಪತ್ರಕರ್ತ ರಾಜು ರೈ ಅವರ ಅತ್ತೆ ಪದ್ಮಾವತಿ(85) ಅವರು ಗುರುವಾರ ಮುಂಜಾನೆ ನಿಧನರಾಗಿದ್ದಾರೆ. ಮೃತರ ಅಂತ್ಯಕ್ರಿಯೆ ಗುರುವಾರ ಸಂಜೆ ಸುಂಟಿಕೊಪ್ಪ ಹಿಂದೂ ರುದ್ರಭೂಮಿಯಲ್ಲಿ ನಡೆದಿದೆ. ಮೃತರು ಇಬ್ಬರು ಪುತ್ರಿಯರು ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ರಸ್ತೆ ಬದಿಗೆ ಬಸ್ ಮಗುಚಿ ಮಹಿಳೆ ಸಾವು, 15 ಮಂದಿಗೆ ಗಾಯ

● ನಾಪೋಕ್ಲು ಬಳಿ ದುರಂತ ● ಪಿಡಬ್ಲ್ಯೂಡಿ ಇಲಾಖೆಯ ನಿರ್ಲಕ್ಷ್ಯವೇ ಘಟನೆಗೆ ಕಾರಣ

ಮಡಿಕೇರಿ, ಮಾ.2– ಚಾಲಕನ ನಿಯಂತ್ರಣ ಕಳೆದುಕೊಂಡ ಖಾಸಗಿ ಬಸ್ಸೊಂದು ರಸ್ತೆ ಪಕ್ಕದಲ್ಲಿ ಮಗುಚಿ ಬಿದ್ದ ಪರಿಣಾಮ ಓರ್ವ ಮಹಿಳೆ ಸಾವನ್ನಪ್ಪಿ 15ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆ ನಾಪೋಕ್ಲು ಬಳಿಯ ಕೊಳಕೇರಿ ಮುಖ್ಯರಸ್ತೆಯ ಕೋಟೇರಿ ಎಂಬಲ್ಲಿ ಗುರುವಾರ ಬೆಳಗ್ಗೆ ಸಂಭವಿಸಿದೆ.

ಕಕ್ಕಬ್ಬೆ ಗ್ರಾಮದ ನಿವಾಸಿ ಸರಸ್ವತಿ (65) ಮೃತ ದುರ್ದೈವಿ. ಗುರುವಾರ ಬೆಳಗ್ಗೆ ಕಕ್ಕಬ್ಬೆಯಿಂದ ಕೊಳಕೇರಿ ಮಾರ್ಗವಾಗಿ ನಾಪೋಕ್ಲುವಿನಿಂದ ಮಡಿಕೇರಿ ಕಡೆಗೆ ತೆರಳುತ್ತಿದ್ದ ಖಾಸಗಿ ಬಸ್ ಚಾಲಕನ ನಿಯಂತ್ರಣ ತಪ್ಪಿ ಕೋಟೇರಿ ಬಳಿಯ ರಸ್ತೆ ಬದಿಯ ಬರೆಯಿಂದ ಪಲ್ಟಿಯಾಗಿದೆ. ಅಪಘಾತದಿಂದ ಬಸ್‌ನಲ್ಲಿದ್ದ ವಿದ್ಯಾರ್ಥಿಗಳು ಮತ್ತು ಪ್ರಯಾಣಿಕರು ಸೇರಿ 15ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳಿಗೆ ನಾಪೋಕ್ಲು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ನೀಡಿ, ಗಂಭೀರ ಗಾಯಗೊಂಡವರನ್ನು ಮಡಿಕೇರಿ ಜಿಲ್ಲಾ ಆಸ್ಪತ್ರೆಯಲ್ಲಿ ದಾಖಲಿಸಲಾಗಿದೆ.

ಬಸ್ಸಿನಲ್ಲಿ ಪ್ರಯಾಣಿಸುತ್ತಿದ್ದ ಸರಸ್ವತಿ ಎಂಬವರಿಗೆ ಗಂಭೀರ ಗಾಯಗಳಾಗಿದ್ದು, ನಾಪೋಕ್ಲು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ನೀಡಲಾಯಿತು. ವೈದ್ಯರ ಸೂಚನೆಯಂತೆ ಸರಸ್ವತಿ ಅವರನ್ನು ಹೆಚ್ಚಿನ ಚಿಕಿತ್ಸೆಗಾಗಿ ಮಡಿಕೇರಿಯ ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದ್ದಾರೆ.

ನಾಪೋಕ್ಲು ಪೊಲೀಸರು ಸ್ಥಳ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ಘಟನಾ ಸ್ಥಳಕ್ಕೆ ಕೊಡಗು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮರಾಜನ್, ಡಿವೈಎಸ್ಪಿ ಜಗದೀಶ್, ವೃತ್ತ ನಿರೀಕ್ಷಕ ಶೇಖರ್, ನಾಪೋಕ್ಲು ಪ್ರಭಾರ ಠಾಣಾಧಿಕಾರಿ ಗೋಪಾಲಕೃಷ್ಣ ಹಾಗೂ ಸಿಬ್ಬಂದಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಕ್ರೇನ್ ಮೂಲಕ ಬಸ್‌ಅನ್ನು ಮೇಲೆತ್ತುವ ಪ್ರಯತ್ನ ನಡೆಸುತ್ತಿದ್ದ ಸಂದರ್ಭ ಮತ್ತೊಂದು ಬದಿಗೆ ಪಲ್ಟಿಯಾಗಿದೆ. ಇದರಿಂದ ಮೊದಲೇ ಹಾನಿಗೀಡಾದ ಬಸ್ ಮತ್ತಷ್ಟು ಜಖಂ ಆಗಿದೆ.





ಮೃತ ಸರಸ್ವತಿ

ಕಳೆದ ಒಂದು ವರ್ಷದ ಹಿಂದೆ ಲೋಕೋಪಯೋಗಿ ಇಲಾಖೆಯವರು ಈ ರಸ್ತೆ ನಿರ್ಮಾಣ ಮಾಡುವ ಸಂದರ್ಭ ರಸ್ತೆ ಬದಿಗೆ ಹೊಂದಿಕೊಂಡಿರುವ ಬರೆಗೆ ತಡೆಗೋಡೆ ನಿರ್ಮಿಸದೆ ನಿರ್ಲಕ್ಷ್ಯ ವಹಿಸಿರುವುದೇ ಅಪಘಾತಕ್ಕೆ ಕಾರಣವಾಗಿದೆ. ಈ ಸ್ಥಳದಲ್ಲಿ ಎರಡು ವಾಹನಗಳು ಒಟ್ಟಿಗೆ ಕ್ರಮಿಸಲಾಗದ ಪರಿಸ್ಥಿತಿಯಿಂದ ವಾಹನ ಚಾಲಕರು ಮತ್ತು ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿದೆ. ಇದರಿಂದ ಅಮಾಯಕರ ಪ್ರಾಣ ಹಾನಿಯಾಗಿ ಹಲವರು ಆಸ್ಪತ್ರೆ ಸೇರಿದ್ದಾರೆ. ಇದಕ್ಕೆ ಇಲಾಖೆಯೇ ನೇರ ಹೊಣೆಯಾಗಿದೆ ಎಂದು ಗ್ರಾಮಸ್ಥರಾದ ಕುಂಡ್ಯೋಳಂಡ ರಮೇಶ್ ಮುದ್ದಯ್ಯ ಲೋಕೋಪಯೋಗಿ ಇಲಾಖೆಯ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. ಇತ್ತೀಚಿನ ದಿನಗಳಲ್ಲಿ ನಾಪೋಕ್ಲು ವ್ಯಾಪ್ತಿಯಲ್ಲಿ ಖಾಸಗಿ ಬಸ್ ಮತ್ತು ಶಾಲಾ ವಾಹನಗಳು ಅತಿ ವೇಗವಾಗಿ ಸಂಚರಿಸುತ್ತಿವೆ. ಈ ವ್ಯಾಪ್ತಿಯಲ್ಲಿ ಇದರಿಂದ ಹಲವು ಅಪಘಾತಗಳು ಸಂಭವಿಸುತ್ತಿದ್ದು, ಮಕ್ಕಳನ್ನು ಪೋಷಕರು ಶಾಲೆಗೆ ಕಳುಹಿಸಲು ಮತ್ತು ಖಾಸಗಿ ಬಸ್‌ಗಳಲ್ಲಿ ಸಂಚರಿಸಲು ಪ್ರಯಾಣಿಕರು ಭಯಪಡುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ.

ವಾಹನಗಳು ಮತ್ತು ಚಾಲಕರಿಗೆ ಸರಿಯಾದ ದಾಖಲಾತಿ ಇದೆಯೇ ಎಂಬ ಅನುಮಾನ ಕೂಡ ವ್ಯಕ್ತವಾಗುತ್ತಿದೆ. ಆದ್ದರಿಂದ ಆರ್.ಟಿ.ಓ ಮತ್ತು ಪೊಲೀಸ್ ಇಲಾಖೆ ಪರಿಶೀಲನೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಜೆಡಿಎಸ್ ಮುಖಂಡ ಎಂ.ಎ. ಮನ್ಸೂರ್ ಆಲಿ, ಗ್ರಾಮ ಪಂಚಾಯಿತಿ ಸದಸ್ಯ ಕೆ.ವೈ. ಅಶ್ರಫ್ ಅವರುಗಳು ಇಲಾಖೆಯವರನ್ನು ಒತ್ತಾಯಿಸಿದ್ದಾರೆ.

ಬಿಜೆಪಿಯದು ವಿಜಯ ಸಂಕಲ್ಪ ಯಾತ್ರೆಯಲ್ಲ, ಕ್ಷಮಾಪಣಾ ಯಾತ್ರೆ: ಸುರ್ಜೇವಾಲ

ಚಾಮರಾಜನಗರ, ಮಾ.2– ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರದ ಭ್ರಷ್ಟಾಚಾರದಿಂದಾಗಿ ರಾಜ್ಯದ ಅಭಿವೃದ್ಧಿಗೆ ಹೊಡೆತ ಬಿದ್ದಿದ್ದು, ಬಿಜೆಪಿಯವರು ರಾಜ್ಯದ ಜನರ ಕ್ಷಮೆ ಕೇಳಲು ಕ್ಷಮಾಪಣಾ ಯಾತ್ರೆ ಮಾಡಬೇಕು ಎಂದು ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ತಿಳಿಸಿದರು.

ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಜಿಲ್ಲಾ ಕಾಂಗ್ರೆಸ್ ಸಮಿತಿಯಿಂದ ನಡೆದ ಕಾಂಗ್ರೆಸ್ ಭರವಸೆ ಕಾರ್ಡ್‌ಗಳ ಬಿಡುಗಡೆ ಕಾರ್ಯಕ್ರಮವನ್ನು ಉದ್ಘಾಟಿಸಿ ಕಾಂಗ್ರೆಸ್ ಭರವಸೆ ಕಾರ್ಡ್ ಬಿಡುಗಡೆ ಮಾಡಿ ಅವರು ಮಾತನಾಡಿದರು.

ಶೇ.40ರಷ್ಟು ಸರ್ಕಾರ ಎಂದು ದೇಶ ಎಲ್ಲಾ ಕಡೆಯುವ ಪ್ರಚಾರವಾಗಿದೆ. ಬಸವರಾಜ ಬೊಮ್ಮಾಯಿ ಹೋದ ಕಡೆಯಲ್ಲಿ ಶೇ. 40 ಪರ್ಸೆಂಟ್ ಮುಖ್ಯಮಂತ್ರಿ ಬಂದರು ಎಂದು ಸ್ವಾಗತ ಮಾಡುತ್ತಿದ್ದಾರೆ. ರಾಜ್ಯ ಘನತೆಯನ್ನು ಹಾಳು ಮಾಡಿದ ಬಸವರಾಜ ಬೊಮ್ಮಾಯಿ ಹಾಗೂ ಬಿಜೆಪಿಗೆ ಮತ ಹಾಕಬೇಕಾ ಎಂದು ಪ್ರಶ್ನೆ ಮಾಡಿದ ಅವರು, ರಾಜ್ಯ ಗುತ್ತಿಗೆದಾರ ಸಂಘದ ಅಧ್ಯಕ್ಷ ಕೆಂಪಣ್ಣ ಹಾಗೂ ಪದಾಧಿಕಾರಿಗಳು ಕಮಿಷನ್ ದಂಧೆ ವಿರುದ್ಧ ಕ್ರಮ ಕೈಗೊಳ್ಳುವಂತೆ ಅವರದೇ ಸರ್ಕಾರದ ಮುಖ್ಯಮಂತ್ರಿ ವಿರುದ್ಧ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಪತ್ರ ಬರೆದಿದ್ದಾರೆ. ಈಗ ನಾಲ್ಕೈದು ಬಾರಿ ರಾಜ್ಯಕ್ಕೆ ಭೇಟಿ ನೀಡಿರುವ ಮೋದಿ ಏನು ಕ್ರಮ ಕೈಗೊಂಡಿದ್ದಾರೆ. ಈ ಬಗ್ಗೆ ಮೌನ ವಹಿಸಿರುವುದು ಸಹ ಅವರ ಸಮ್ಮತಿ ಇದೆ ಎಂಬರ್ಥವೇ? ಎಂದರು.



2008 ಹಾಗೂ 2013ರಲ್ಲಿ ಜಿಲ್ಲೆಯ ನಾಲ್ಕು ಕ್ಷೇತ್ರಗಳಲ್ಲಿಯು ಕಾಂಗ್ರೆಸ್ ಜಯಭೇರಿ ಬಾರಿಸಿತ್ತು. ಜಿಲ್ಲೆ ಕಾಂಗ್ರೆಸ್ ಭದ್ರಕೋಟೆಯಾಗಿತ್ತು. ಇದು 2023ರ ವಿಧಾನಸಭಾ ಚುನಾವಣೆಯಲ್ಲಿ ನಾಲ್ಕು ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಗೆಲುವು ಸಾಧಿಸುವ ಮೂಲಕ ಕಾಂಗ್ರೆಸ್ ಭದ್ರಕೋಟೆ ಎಂಬುದನ್ನು ಸಾಬೀತುಪಡಿಸಿ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರಲು ತಾವೆಲ್ಲರೂ ಇಂದಿನಿಂದಲೇ ಶ್ರಮಿಸಬೇಕು. ಪ್ರತಿ ಮನೆ ಮನೆಗೂ ಅಲ್ಲದೇ ಬಿಜೆಪಿ ಕಾರ್ಯಕರ್ತರ ಮನೆಗೂ ಸಹ ಕಾಂಗ್ರೆಸ್ ಗ್ಯಾರಂಟಿ ಕಾರ್ಡುಗಳನ್ನು ತಲುಪಿಸಿ, ಬೂತ್ ಮಟ್ಟದಲ್ಲಿ ಮೇಲುಗೈ ಸಾಧಿಸಬೇಕು ಎಂದು ಕಾರ್ಯಕರ್ತರಲ್ಲಿ ಉತ್ಸಾಹ ತುಂಬಿದರು.

ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಮಾತನಾಡಿ, ಕೆಪಿಸಿಸಿ ಘೋಷಣೆ ಮಾಡಿರುವ ಗ್ಯಾರಂಟಿ ಕಾರ್ಡುಗಳನ್ನು ಮಾರ್ಚ್ 10 ರವರಗೆ ಪ್ರತಿ ಮನೆ ಮನೆಗೂ ತಲುಪಿಸಿ ಮುಂದಿನ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ತರಲು ಶ್ರಮಿಸಬೇಕು. ನಮ್ಮ ಬೂತ್ ನಮ್ಮ ಹೊಣೆ ಜವಾಬ್ದಾರಿ ಹೊತ್ತುಕೊಂಡು ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದರು.

ಶಾಸಕರಾದ ಸಿ.ಪುಟ್ಟರಂಗಶೆಟ್ಟಿ ಹಾಗೂ ನರೇಂದ್ರ ಮಾತನಾಡಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸುಳ್ಳು ಹೇಳುವುದರಲ್ಲಿ ನಿಸ್ಸೀಮರು. ಅಭಿವೃದ್ದಿಯಲ್ಲಿ ಮಾತ್ರ ಶೂನ್ಯ. ಜಿಲ್ಲೆಯ ಅಭಿವೃದ್ಧಿಗೆ ಯಾವುದೇ ಅನುದಾನ ನೀಡಿಲ್ಲ ಎಂದು ಆರೋಪಿಸಿದರು. ಕಾಂಗ್ರೆಸ್ ನುಡಿದಂತೆ ನಡೆದಿದೆ. 164 ಭರವಸೆಗಳ ಪೈಕಿಯಲ್ಲಿ 158 ಭರವಸೆ ಈಡೇರಿಸಿ, ಉತ್ತಮ ಆಡಳಿತ ನೀಡಿದೆ. ಮತ್ತೇ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬರುತ್ತದೆ. ಆಗ ಜಿಲ್ಲೆಯ ಅಭಿವೃದ್ಧಿ ಚಿತ್ರಣವೇ ಬದಲಾಗುತ್ತದೆ ಎಂದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ.ಮರಿಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯಕ್ರಮದಲ್ಲಿ ಎಐಸಿಸಿ ಸದಸ್ಯ ರೋಜಿಜಾನ್, ಮಾಜಿ ಶಾಸಕರಾದ ಎ.ಆರ್.ಕೃಷ್ಣಮೂರ್ತಿ, ಎಸ್.ಬಾಲರಾಜ್, ಎಸ್.ಜಯಣ್ಣ, ಯುವ ಕಾಂಗ್ರೆಸ್ ಮುಖಂಡ ಎಚ್.ಎಂ. ಗಣೇಶ್‌ಪ್ರಸಾದ್, ಕೆಪಿಸಿಸಿ ಸದಸ್ಯ ಬಸವರಾಜು, ಬ್ಲಾಕ್ ಅಧ್ಯಕ್ಷರಾದ ಮಹಮದ್ ಅಸ್ಗರ್, ಗುರುಸ್ವಾಮಿ, ಹೊಂಗನೂರು ಚಂದ್ರು, ರಾಜಶೇಖರ್, ಮುನಿರಾಜು, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ. ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಆರ್. ಮಹದೇವ್, ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಲತಾ ರಾಜಶೇಖರ್ ಜತ್ತಿ, ಎಸ್‌ಟಿ ಮೋರ್ಚಾದ ರಾಜ್ಯ ಕಾರ್ಯದರ್ಶಿ ಪು.ಶ್ರೀನಿವಾಸನಾಯಕ, ಕನಿಷ್ಠ ವೇತನ ಸಲಹಾ ಸಮಿತಿ ಅಧ್ಯಕ್ಷ ಉಮೇಶ್, ಜಿಪಂ ಮಾಜಿ ಸದಸ್ಯ ಸದಾಶಿವಮೂರ್ತಿ ಹಾಜರಿದ್ದರು.

ಬ್ರಹ್ಮ ಬಂದರೂ ಕೋಲಾರದಲ್ಲಿ ಸಿದ್ದು ಗೆಲ್ಲಲ್ಲ: ಕೆ.ಎಸ್. ಈಶ್ವರಪ್ಪ

ಗುಂಡ್ಲುಪೇಟೆಯಲ್ಲಿ ವಿಜಯಸಂಕಲ್ಪ ಯಾತ್ರೆ ಸಮಾವೇಶದಲ್ಲಿ ವಾಗ್ದಾಳಿ



ಗುಂಡ್ಲುಪೇಟೆ, ಮಾ.2– ದಲಿತರ ಶಾಪದಿಂದಲೇ ಸಿದ್ದರಾಮಯ್ಯ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸೋಲುಂಡರು. ಸಿದ್ದರಾಮಯ್ಯಗೆ ಇನ್ನೂ ಕ್ಷೇತ್ರವೇ ಗೊತ್ತಾಗಿಲ್ಲ. ಅವರು ಕೋಲಾರಕ್ಕೆ ಹೋದರೆ ಬ್ರಹ್ಮ ಬಂದರೂ ಗೆಲ್ಲುವುದಿಲ್ಲ. ಕೋಲಾರದಲ್ಲಿ ಎಲ್ಲಾ ಸಮುದಾಯದವರು ಸಿದ್ದರಾಮಯ್ಯ ಅವರನ್ನು ಸೋಲಿಸಲು ಕಾಯುತ್ತಿದ್ದಾರೆ ಎಂದು ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ವಾಗ್ದಾಳಿ ನಡೆಸಿದ್ದಾರೆ.

ಪಟ್ಟಣದ ನೆಹರೂ ವೃತ್ತದ ಬಳಿ ಗುರುವಾರ ನಡೆದ ವಿಜಯ ಸಂಕಲ್ಪ ಯಾತ್ರೆಯ ಸಮಾವೇಶವನ್ನು ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು. ಒಬ್ಬರ ಕಾಲು ಒಬ್ಬರು ಎಳೆಯುವುದೇ ಕಾಂಗ್ರೆಸ್ ಕೆಲಸವಾಗಿದೆ. ಚುನಾವಣೆಯಾಗದೇ ಅವರವರೇ ಸಿಎಂ ಎಂದು ಘೋಷಣೆ ಮಾಡಿಕೊಳ್ಳುತ್ತಿದ್ದಾರೆ. ಆದರೆ ಈ ಬಾರಿ ಬಿಜೆಪಿ ರಾಜ್ಯದಲ್ಲಿ 150 ಸ್ಥಾನಗಳನ್ನು ಗೆದ್ದು ಮತ್ತೆ ಅಧಿಕಾರಕ್ಕೆ ಬರಲಿದೆ ಎಂದರು. ಬಿಜೆಪಿಯಲ್ಲಿ ಅಮಿತ್ ವಿಶ್ವ ನಾಯಕರಾಗಿದ್ದಾರೆ. ಅದಕ್ಕಾಗಿ ಅವರನ್ನು ನಾವು ರಾಜ್ಯಕ್ಕೆ ಕರೆದುಕೊಂಡು ಬಂದಿದ್ದೇವೆ. ನೀವು ನಿಮ್ಮ ರಾಹುಲ್ ಗಾಂಧಿಯನ್ನು ರಾಜ್ಯಕ್ಕೆ ಕರೆದುಕೊಂಡು ಬನ್ನಿ ಎಂದು ಸವಾಲು ಹಾಕಿದರು.

ಜಾತಿವಾದಿ ಕಾಂಗ್ರೆಸ್: ಕಾಂಗ್ರೆಸ್ ಅಂದರೆ ಜಾತಿ ಹಾಗೂ ಧರ್ಮದ ಆಧಾರದಲ್ಲಿ ರಾಜಕಾರಣ ಮಾಡುವ ಪಕ್ಷ ಎಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ವಾಗ್ದಾಳಿ ನಡೆಸಿದರು. ಜಾತಿ ಮತ್ತು ಧರ್ಮಗಳನ್ನು ಒಡೆಯುವ ಕೆಲಸ ಮಾಡಿದೆ. ವೀರಶೈವ ಧರ್ಮ ಒಡೆಯುವ, ವಿದ್ಯಾರ್ಥಿಗಳಲ್ಲಿ ಜಾತಿ ವಿಷಬೀಜ ಬಿತ್ತಿ ಮತಾಂಧರ ಮೇಲಿದ್ದ ಕ್ರಿಮಿನಲ್ ಕೇಸುಗಳನ್ನು ವಾಪಸ್ ಪಡೆದು ಜೈಲಿನಿಂದ ಹೊರಬಿಟ್ಟು ಅಶಾಂತಿ ಸೃಷ್ಟಿಸಿದ್ದಾರೆ. ಆದರೆ ಯಡಿಯೂರಪ್ಪ ಹಾಗೂ ಪ್ರಧಾನಿ ನರೇಂದ್ರ ಮೋದಿ ಎಲ್ಲಾ ಸಮುದಾಯಗಳಿಗೂ ತಲುಪುವ ಭಾಗ್ಯಲಕ್ಷ್ಮಿ ಬಾಂಡ್, ಉಚಿತ ಸೈಕಲ್, ರೈತ ಸಂಜೀವಿನಿ ಮುಂತಾದ ಯೋಜನೆಗಳನ್ನು ಜಾರಿಗೊಳಿಸಿದ್ದರು. ಆದರೆ ಸಿದ್ದರಾಮಯ್ಯ ಕೇವಲ ಒಂದು ಸಮುದಾಯಕ್ಕೆ ಮಾತ್ರ ಶಾದಿ ಭಾಗ್ಯ ನೀಡಿ ಉಳಿದ ಸಮುದಾಯಗಳಿಗೆ ಅನ್ಯಾಯ ಮಾಡಿದರು ಎಂದರು.

ಜೆಡಿಎಸ್ ಮನೆಯ ಸಮಸ್ಯೆಯನ್ನೇ ಬಗೆಹರಿಸಿಲ್ಲ: ತಮ್ಮ ಮನೆಯ ಅಡುಗೆಮನೆಯಲ್ಲಿನ ಪಾತ್ರೆ ಮತ್ತು ಸೌಟಿನ ಸಮಸ್ಯೆಯನ್ನೇ ಬಗೆಹರಿಸಿಕೊಳ್ಳಲು ಆಗದವರು ರಾಜ್ಯದ ಸಮಸ್ಯೆ ಹೇಗೆ ಬಗೆಹರಿಸುತ್ತಾರೆ ಎಂದು ಭವಾನಿ ರೇವಣ್ಣ ಅವರ ಟಿಕೆಟ್ ವಿಚಾರವನ್ನು ಪರೋಕ್ಷವಾಗಿ ಮಾಜಿ ಮುಖ್ಯಮಂತ್ರಿ ಡಿ.ವಿ.ಸದಾನಂದಗೌಡ ಟೀಕಿಸಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕ ಸಿ.ಎಸ್. ನಿರಂಜನ್ ಕುಮಾರ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಜಿಜೆಪಿ ಜಿಲ್ಲಾಧ್ಯಕ್ಷ ನಾರಾಯಣಪ್ರಸಾದ್, ಉಪಾಧ್ಯಕ್ಷ ಹಿರೀಕಾಟಿ ಸೋಮಶೇಖರ್, ಮಂಡಲಾಧ್ಯಕ್ಷ ಡಿ.ಪಿ. ಜಗದೀಶ್, ಕಾಡಾ ಅಧ್ಯಕ್ಷ ನಿಜಗುಣರಾಜು, ಡಾ.ಬಾಬು, ಮುಖಂಡರಾದ ದತ್ತಾತ್ರೇಯ, ಕೊಡಸೋಗೆ ಶಿವಬಸಪ್ಪ, ಮುಖಂಡರಾದ ಪ್ರಣಯ್, ಎಸ್.ಸಿ.ಮಂಜುನಾಥ್, ಮಹದೇವ ಪ್ರಸಾದ್ ಸೇರಿದಂತೆ ಹಲವರು ಇದ್ದರು.

ಬಿಜೆಪಿ ಭರ್ಜರಿ ರೋಡ್ ಶೋ

ವಿಜಯ ಸಂಕಲ್ಪ ಯಾತ್ರೆಗೆ ಸಾಥ್ ಕೊಟ್ಟ ಯುವಕರು



ಚಾಮರಾಜನಗರ, ಮಾ.2– ಮಲೆ ಮಹದೇಶ್ವರ ಬೆಟ್ಟದಲ್ಲಿ ಬುಧವಾರ ಆರಂಭವಾದ ಬಿಜೆಪಿಯ ವಿಜಯ ಸಂಕಲ್ಪ ಯಾತ್ರೆ ಎರಡನೇ ದಿನವಾದ ಇಂದು ಚಾಮರಾಜನಗರದಲ್ಲಿ ರೋಡ್ ಶೋ ನಡೆಯಿತು.

ನಗರದ ಸಂತೇಮರಹಳ್ಳಿ ವೃತ್ತದ ಆದಿಶಕ್ತಿ ದೇವಾಲಯದ ಬಳಿ ಬಿಜೆಪಿ ಮುಖಂಡರು, ಕಾರ್ಯಕರ್ತರು ರಥಯಾತ್ರೆಗೆ ಸ್ವಾಗತ ನೀಡಿ ಬರಮಾಡಿಕೊಂಡರು. ನಂತರ ಆರಂಭವಾದ ರೋಡ್ ಶೋ ನಗರದ ಚಿಕ್ಕ ಅಂಗಡಿ ಬೀದಿ, ದೊಡ್ಡ ಅಂಗಡಿ ಬೀದಿ, ಗುಂಡ್ಲುಪೇಟೆ ವೃತ್ತದ ಮೂಲಕ ಮೂಡಲಪುರದವರೆಗೆ ಸಾಗಿತು.

ರೋಡ್ ಶೋನಲ್ಲಿ ಮಾಜಿ ಮುಖ್ಯಮಂತ್ರಿ ಡಿ.ಸದಾನಂದ ಗೌಡ, ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್.ಈಶ್ವರಪ್ಪ, ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಎನ್.ಮಹೇಶ್, ವಿಧಾನಪರಿಷತ್ ಮಾಜಿ ಸದಸ್ಯ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ, ಬಿಜೆಪಿ ರಾಜ್ಯ ಉಪಾಧ್ಯಕ್ಷ ಎಂ.ರಾಜೇಂದ್ರ, ಬಿಜೆಪಿ ಜಿಲ್ಲಾಧ್ಯಕ್ಷ ನಾರಾಯಣ ಪ್ರಸಾದ್, ನಗರಸಭಾಧ್ಯಕ್ಷೆ ಆಶಾ, ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ.ರಾಮಚಂದ್ರ, ವಕ್ತಾರ ಅಯ್ಯನಪುರ ಶಿವಕುಮಾರ್, ಮುಖಂಡರಾದ ಅಮ್ಮನಪುರ ಮಲ್ಲೇಶ್, ಡಾ. ಎ.ಆರ್.ಬಾಬು, ಮಂಗಲ ಶಿವಕುಮಾರ್, ವಿಜಯ ಸಂಕಲ್ಪ ಯಾತ್ರೆ ವಾಹನದ ಮುಂಭಾಗ ಜಿ.ನಾಗಶ್ರೀ ಪ್ರತಾಪ್ ಸ್ಕೂಟರ್ ಚಾಲನೆ ಮಾಡಿ ಗಮನ ಸೆಳೆದರು. ನೂರಾರು ಯುವಕರು ಬಿಜೆಪಿ ಬಾವುಟ ಪ್ರದರ್ಶಿಸುತ್ತಾ ಪಕ್ಷದ ಪರ ಘೋಷಣೆಗಳನ್ನು ಕೂಗುತ್ತಾ ಬೈಕ್‌ನಲ್ಲಿ ತೆರಳಿದರೆ, ಉಳಿದ ಕಾರ್ಯಕರ್ತರು ಕಾಲ್ನಡಿಗೆಯ ಮೂಲಕ ಹೆಜ್ಜೆ ಹಾಕಿದರು. ನಂತರ ಯಾತ್ರೆ ಉಡಿಗಾಲ, ತೆರಕಣಾಂಬಿ ಕಡೆ ಸಾಗಿ ಗುಂಡ್ಲುಪೇಟೆಗೆ ತೆರಳಿತು.

ಮಾದಪ್ಪ, ಮಂಟೇಸ್ವಾಮಿ ಕಾವ್ಯಗಳು ಸೃಷ್ಟಿಯಾದ ಹೊನ್ನಿನ ಮಣ್ಣು ಚಾ.ನಗರ

ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಮ್ಮೇಳನಾಧ್ಯಕ್ಷ ಕೊತ್ತಲವಾಡಿ ಶಿವಕುಮಾರ್ ಬಣ್ಣನೆ



ಚಾಮರಾಜನಗರ, ಮಾ.2– ಇಡೀ ಜಾನಪದ ಲೋಕವೇ ನಿಬ್ಬೆರಗಾಗುವಂತಹ ವ್ಯಾಪ್ತಿಯುಳ್ಳ ಮಹದೇಶ್ವರ ಹಾಗೂ ಮಂಟೇಸ್ವಾಮಿ ಕಾವ್ಯಗಳು ಸೃಷ್ಟಿಯಾದ ಹೊನ್ನಿನ ಮಣ್ಣು ಚಾಮರಾಜನಗರವಾಗಿದೆ ಎಂದು ಚಾಮರಾಜನಗರ 7ನೇ ತಾಲೂಕು ಕನ್ನಡ ಸಮ್ಮೇಳನಾಧ್ಯಕ್ಷ ಕೊತ್ತಲವಾಡಿ ಶಿವಕುಮಾರ್ ಬಣ್ಣಿಸಿದ್ದಾರೆ. ತಾಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ನಗರದ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ನಡೆದ 7ನೇ ಚಾಮರಾಜನಗರ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಸರ್ವಾಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಗತ್ತಿನ ಎಲ್ಲಾ ಸಾಹಿತ್ಯದ ಮೂಲ ಜನಪದ ಸಾಹಿತ್ಯ. ಅಂತಹ ಜಾನಪದ ಸಂಪತ್ತಿನ ಆಗರ ಈ ನೆಲವಾಗಿದೆ. ಜಾನಪದ ನಾಯಕರಾಗಿ ಜನಮಾನಸ ದಲ್ಲಿ ಶಾಶ್ವತವಾಗಿ ನೆಲೆಸಿ ಸದಾಚಾರ, ಸತ್ಕಾರ್ಯ, ಸತ್‌ಚಿಂತನೆ, ಸತ್ ಸಂಕಲ್ಪಗಳಿಗೆ ಸದಾ ಪ್ರೇರಣೆ ನೀಡುತ್ತಿರುವ ಮಲೆ ಮಹದೇಶ್ವರ, ಮಂಟೇಸ್ವಾಮಿ ಯಂತಹ ಜಂಗಮ ಶ್ರೇಷ್ಠರ, ಸಂತ ಮಹಾಂತರ ಪವಿತ್ರ ಪ್ರಾಂತ್ಯ ನಮ್ಮ ಚಾಮರಾಜನಗರ ಎಂದು ಅವರು ಹೆಮ್ಮೆ ವ್ಯಕ್ತಪಡಿಸಿದರು.

ಕಾರ್ಯಕ್ರಮ ಉದ್ಘಾಟಿಸಿದ ಕುವೆಂಪು ಭಾಷಾಭಾರತಿ ಸಂಸ್ಥೆಯ ನಿವೃತ್ತ ಪ್ರಾಧ್ಯಾಪಕ ಡಾ.ಪ್ರಧಾನ ಗುರುದತ್ ಮಾತನಾಡಿ, ಚಾಮರಾಜನಗರಕ್ಕೆ ಭವ್ಯವಾದ ಪರಂಪರೆಯಿದ್ದು, ಹೊಯ್ಸಳ ಶಿಲ್ಪಕಲೆಯ ಚಾಮರಾಜೇಶ್ವರ ದೇವಾಲಯ, ಗಂಗರಾಜ ನಿರ್ಮಿಸಿದ ಪಾರ್ಶ್ವನಾಥ ಬಸದಿ, 16ನೇ ಶತಮಾನದಲ್ಲಿ ಹರದನಹಳ್ಳಿ ಸಿದ್ದಲಿಂಗೇಶ್ವರರು ಜನ್ಮತಾಳಿದ್ದು, ಹದಿಬದೆಯಧರ್ಮ ಕೃತಿ ಬರೆದ ಸಂಚಿಹೊನ್ನಮ್ಮ, ನಿಜಗುಣ ಶಿವಯೋಗಿಗಳು ಜಿಲ್ಲೆಯವರೇ ಎಂಬುದು ಹೆಮ್ಮೆಯ ವಿಚಾರ. ಜಿಲ್ಲೆ ಕೇರಳ, ತಮಿಳುನಾಡು ಗಡಿಯಲ್ಲಿದ್ದರೂ, ಕನ್ನಡ ಭಾಷೆಗೆ ಯಾವುದೇ ಧಕ್ಕೆ ಬಂದಿಲ್ಲ ಎಂಬುದೇ ಹೆಮ್ಮೆಯ ವಿಷಯ, ನಾವು ನಮ್ಮ ಭಾಷೆಯನ್ನು ಗೌರವಿಸಿದರೆ, ಇತರರು ನಮ್ಮನ್ನು ಗೌರವಿಸುತ್ತಾರೆ ಎಂದರು. ಸಾನ್ನಿಧ್ಯ ವಹಿಸಿದ್ದ ಹರವೆ ವಿರಕ್ತಮಠದ ಶ್ರೀ ಸರ್ಪಭೂಷಣ ಸ್ವಾಮೀಜಿ ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಜಿಲ್ಲಾಧ್ಯಕ್ಷ ಎಂ.ಶೈಲಕುಮಾರ್ ಮಾತನಾಡಿದರು. 6ನೇ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದ ಮಂಜು ಕೋಡಿಉಗನೆ ಸಮ್ಮೇಳನಾಧ್ಯಕ್ಷ ಕೊತ್ತಲವಾಡಿ ಶಿವಕುಮಾರ್ ಅವರಿಗೆ ಕನ್ನಡ ಬಾವುಟ ಹಸ್ತಾಂತರಿಸಿದರು. ನಿವೃತ್ತ ಪ್ರಾಂಶುಪಾಲ ಎ.ಎಂ. ನಾಗಮಲ್ಲಪ್ಪ, ಸಾಹಿತಿ ಸೋಮಶೇಖರ ಬಿಸಲ್ವಾಡಿ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ನಿಕಟಪೂರ್ವ ಅಧ್ಯಕ್ಷ ಬಿ. ಬಸವರಾಜು, ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಸುರೇಶ್ ಋಗ್ವೇದಿ, ಕಾರ್ಯದರ್ಶಿ ಕಲೆ ನಟರಾಜು, ಜಿಲ್ಲಾ ಕಾರ್ಯದರ್ಶಿ ಮಹಾಲಿಂಗ ಗಿರ್ಗಿ, ರವಿಚಂದ್ರ ಪ್ರಸಾದ್, ಬಿ.ಕೆ. ಆರಾಧ್ಯ, ಎಸ್.ಎಂ. ಸೋಮಣ್ಣ, ಆಲೂರು ನಾಗೇಂದ್ರ ಸೇರಿದಂತೆ ಪದಾಧಿಕಾರಿಗಳು ಭಾಗವಹಿಸಿದ್ದರು.

ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಅಂಗಾಂಗ ಕಸಿಗೆ ಶೀಘ್ರ ಪರವಾನಗಿ

ಮೈಸೂರು, ಮಂಡ್ಯ, ಹಾಸನ, ಕೊಡಗು, ಚಾಮರಾಜನಗರಗಳಿಗೆ ಅಂಗಾಂಗ ಹಂಚಿಕೆ, ಕಸಿಗೆ ಸಂಬಂಧಿಸಿದ ಪ್ರಕ್ರಿಯೆಗೆ ಪೂರಕವಾಗಿ ಮೈಸೂರಲ್ಲಿ ವಲಯ ಸಮನ್ವಯ ಕೇಂದ್ರ ಸ್ಥಾಪನೆ

ಮೈಸೂರು, ಮಾ.2(ಆರ್‌ಕೆ)–ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಅಂಗಾಂಗ ಕಸಿಗೆ (organ retrieval) ಅನುವಾಗುವಂತೆ ಶೀಘ್ರ ಪರವಾನಗಿ ಪಡೆಯಲಾಗುವುದು ಎಂದು ಎಂಎಂಸಿಆರ್‌ಐ ಡೀನ್ ಅಂಡ್ ಡೈರೆಕ್ಟರ್ ಡಾ. ಕೆ.ಆರ್.ದಾಕ್ಷಾಯಿಣಿ ತಿಳಿಸಿದ್ದಾರೆ.

ಮೈಸೂರು, ಹಾಸನ, ಮಂಡ್ಯ, ಕೊಡಗು ಮತ್ತು ಚಾಮರಾಜನಗರ ಜಿಲ್ಲೆಗಳನ್ನೊಳಗೊಂಡಂತೆ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯಲ್ಲಿ ಅಂಗಾಂಗ ಕಸಿಗೆ ಸಂಬಂಧಿಸಿದಂತೆ ಸಮನ್ವಯ ಸಾಧಿಸಲು ಸಮನ್ವಯ ಕೇಂದ್ರ ಸ್ಥಾಪಿಸಲಾಗುತ್ತಿದ್ದು, ಅದರ ಮುಂದಿನ ಭಾಗವಾಗಿ ಸಂಸ್ಥೆಯೇ ಅಂಗಾಂಗ ಕಸಿಗೆ ಲೈಸೆನ್ಸ್ ಪಡೆಯಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಿದ್ಧತೆ ಮಾಡುತ್ತಿರುವುದಾಗಿ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸ್ಟೇಟ್ ಆರ್ಗನ್ ಅಂಡ್ ಟಿಷ್ಯೂ ಟ್ರಾನ್ಸ್‌ಪ್ಲಾಂಟ್ ಆರ್ಗನೈಸೇಷನ್ (SOTTO) ಆಶ್ರಯದಲ್ಲಿ ಮೈಸೂರಿನ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಬುಧವಾರ ಏರ್ಪಡಿಸಿದ್ದ ಸಮಾರಂಭದಲ್ಲಿ ಮೈಸೂರಿಗೆ ಅಂಗಾಂಗ ಕಸಿಗೆ 5ನೇ ವಲಯ ಮಾನ್ಯತಾ ಪ್ರಮಾಣ ಪತ್ರ ಸ್ವೀಕರಿಸಿದ ಹಿನ್ನೆಲೆಯಲ್ಲಿ ಪ್ರತಿಕ್ರಿಯೆ ನೀಡಿದ ಡಾ. ದಾಕ್ಷಾಯಿಣಿ ಅವರು, ರೋಗಿಗಳು, ಅಂಗಾಂಗ ದಾನಿಗಳು ಮತ್ತು ಆಸ್ಪತ್ರೆಗಳ ನಡುವೆ ಸಮನ್ವಯ ಸಾಧಿಸಲು ಈ ಕೇಂದ್ರ ಸಹಕಾರಿಯಾಗಲಿದೆ ಎಂದರು.



ಈಗಾಗಲೇ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಕೇಂದ್ರಕ್ಕೆ ಕೊಠಡಿ ಒದಗಿಸಿದ್ದು, ಸರ್ಕಾರದಿಂದ ಸಮನ್ವಯಾಧಿಕಾರಿಗಳನ್ನು ನಿಯೋಜಿಸಲಾಗುತ್ತದೆ. ಅವರು ಆಸ್ಪತ್ರೆಗಳಲ್ಲಿ ಮೆದುಳು ನಿಷ್ಕ್ರಿಯವಾಗಿರುವ ರೋಗಿಯ ಸಂಬಂಧಿಕರಿಂದ ಅಂಗಾಂಗ ದಾನದ ಸಮ್ಮತಿ ಪಡೆದು, ಆಸ್ಪತ್ರೆ ವೈದ್ಯರ ನೆರವಿನಿಂದ ಬೇರೆ ಆಸ್ಪತ್ರೆಗಳಲ್ಲಿ ಅಂಗಾಂಗಕ್ಕಾಗಿ ಕಾಯುತ್ತಿರುವ ರೋಗಿಗಳಿಗೆ ನಿಗದಿತ ಅವಧಿಯಲ್ಲಿ ತಲುಪಿಸಿ ಕಸಿ ಮಾಡಲು ನೆರವಾಗಲಿದ್ದಾರೆ ಎಂದು ತಿಳಿಸಿದರು.

ಮೊದಲ ಹಂತದಲ್ಲಿ ವಲಯ ಮಾನ್ಯತೆ ನೀಡಿದ್ದು, ಎರಡನೇ ಹಂತದಲ್ಲಿ ಅಂಗಾಂಗ ಜೋಡಣೆ ಮತ್ತು ಕಸಿ ಶಸ್ತ್ರಚಿಕಿತ್ಸೆ ನಡೆಸಲು ಅನುಮತಿ ಪಡೆದು ಪ್ರಕ್ರಿಯೆ ಆರಂಭಿಸಲಾಗುವುದು. ಇದರಿಂದ ರೋಗಿಗಳು, ದಾನಿಗಳಿಗೂ ಅನುಕೂಲವಾದಂತಾಗುತ್ತದೆ ಎಂದು ಅವರು ತಿಳಿಸಿದರು.

ಮೈಸೂರು ವಿಭಾಗದ ಐದು ಜಿಲ್ಲೆಗಳಲ್ಲಿ ಅಂಗಾಂಗ ಕಸಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಇನ್ನು ಮುಂದೆ ಮೈಸೂರನ್ನು SOTTO (State Organ & Tissue Transplant Organisation) ಅಡಿಯಲ್ಲಿ ಐದನೇ ವಲಯ ಎಂದು ಪರಿಗಣಿಸಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಡಾ. ಎಂ.ಆರ್.ನಿರಂಜನ್ ತಿಳಿಸಿದ್ದಾರೆ.

ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕಿ ಡಾ. ಕೆ.ಆರ್.ದಾಕ್ಷಾಯಿಣಿ ಹಾಗೂ ಬಿಜಿಎಸ್ ಅಪೋಲೋ ಆಸ್ಪತ್ರೆ ಉಪಾಧ್ಯಕ್ಷ ಭರತೇಶ್ ರೆಡ್ಡಿ ಅವರಿಗೆ ಮಾನ್ಯತಾ ಪ್ರಮಾಣ ಪತ್ರ ವಿತರಿಸಿ ಮಾತನಾಡಿದ ಅವರು, ಪ್ರಸ್ತುತ SOTTO ಘಟಕದ ಚಟುವಟಿಕೆಗಳನ್ನು ಮೈಸೂರು, ಕಲಬುರ್ಗಿ, ಹುಬ್ಬಳ್ಳಿ ಮತ್ತು ಮಂಗಳೂರು ವಿಭಾಗಗಳಲ್ಲಿ ಆರಂಭಿಸಲಾಗುತ್ತಿದೆ ಎಂದರು.

> ಈ ಮೊದಲು ಇಂತಹ ಪ್ರಕ್ರಿಯೆಗೆ ಬೆಂಗಳೂರು ಕೇಂದ್ರವನ್ನೇ ಅವಲಂಭಿಸಬೇಕಾಗಿತ್ತು. ರಾಜ್ಯದ ಎಲ್ಲಾ ಜಿಲ್ಲೆಗಳಿಂದಲೂ ಮಾಹಿತಿಗಾಗಿ ಬೆಂಗಳೂರನ್ನು ಸಂಪರ್ಕಿಸುವುದನ್ನು ತಪ್ಪಿಸಲು ರಾಜ್ಯದ 5 ವಿಭಾಗಗಳಲ್ಲೂ ಸಮನ್ವಯ ಕೇಂದ್ರಗಳನ್ನು ಸ್ಥಾಪಿಸಲಾಗುತ್ತಿದೆ. ಮೈಸೂರು ಕೇಂದ್ರಕ್ಕೆ ಮೈಸೂರು, ಮಂಡ್ಯ, ಹಾಸನ, ಕೊಡಗು ಹಾಗೂ ಚಾಮರಾಜನಗರ ಜಿಲ್ಲೆಗಳು ಸೇರಲಿವೆ. -ಡಾ. ದಾಕ್ಷಾಯಿಣಿ

ಮೈಸೂರಿಗೆ ವಲಯ ಮಾನ್ಯತೆ ನೀಡಿರುವುದರಿಂದ ಅಂಗಾಂಗ ಹಂಚಿಕೆ ಪ್ರಕ್ರಿಯೆಯಲ್ಲಿ ತೊಡಗಿ, ನೋಂದಾಯಿತ ಹಾಗೂ ವಲಯದೊಳಗೆ ಬರುವ ಕಸಿ ಕೇಂದ್ರದ ರೋಗಿಗಳಿಗೆ ಅಂಗಾಂಗ ನೀಡಬಹುದಾಗಿದ್ದು, ಬಿಜಿಎಸ್ ಅಪೋಲೋ ಆಸ್ಪತ್ರೆಯು ಕ್ರಾಸ್-ಮ್ಯಾಚಿಂಗ್ ಸೌಲಭ್ಯ ಹೊಂದಿರುವುದರಿಂದ ಈ ಆಸ್ಪತ್ರೆಯೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಎಂದು ಡಾ. ಕಿರಣ್‌ಕುಮಾರ್ ತಿಳಿಸಿದ್ದಾರೆ.

ಅಂಗಾಂಗ ದಾನ ಮತ್ತು ಕಸಿ ಕೇಂದ್ರಗಳ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವುದು, ಮಾಹಿತಿ ನೀಡುವುದು, ಮೆದುಳು ನಿಷ್ಕ್ರಿಯತೆ ಬಗ್ಗೆ ಪ್ರಮಾಣೀಕರಣದ ಬಗ್ಗೆಯೂ ತಿಳುವಳಿಕೆ ನೀಡಲು ಈ ವಲಯ ಕೇಂದ್ರಗಳು ಸಹಕಾರಿಯಾಗಲಿವೆ ಎಂದು ಅವರು ನುಡಿದರು.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ನಿರ್ದೇಶಕಿ ಡಾ. ಕೆ.ಆರ್.ದಾಕ್ಷಾಯಿಣಿ, ಹಿರಿಯ ನೆಫ್ರಾಲಜಿಸ್ಟ್ ಡಾ. ಎಂ.ಆರ್.ನಿರಂಜನ್, ಅಪೋಲೋ ಬಿಜಿಎಸ್ ಆಸ್ಪತ್ರೆ ಉಪಾಧ್ಯಕ್ಷ ಎನ್.ಜಿ.ಭರತೇಶ್ ರೆಡ್ಡಿ, ಡಾ. ಎಂ.ರೂಪಾ, ಡಾ. ಎಂ.ಎಸ್.ರಾಜೇಶ್, ಲಿಜಾ ವೋಲ್ ಜೋಸೆಫ್ ಹಾಗೂ ಡಾ. ಚಿನ್ನದುರೈ ಅವರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಕೆಆರ್ ಕ್ಷೇತ್ರದಲ್ಲಿ ವೀರಶೈವ ಲಿಂಗಾಯತರಿಗೆ ಬಿಜೆಪಿ ಟಿಕೆಟ್ ನೀಡಲು ಆಗ್ರಹ

ಪಕ್ಷದ ವರಿಷ್ಠರಲ್ಲಿ ವೀರಶೈವ ಲಿಂಗಾಯತ ಮತದಾರರ ಜಾಗೃತಿ ಒಕ್ಕೂಟ ಒತ್ತಾಯ

ಮೈಸೂರು,ಮಾ.2(ಪಿಎಂ)– ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕೆಆರ್ ಕ್ಷೇತ್ರದ ಬಿಜೆಪಿ ಟಿಕೆಟ್ ಅನ್ನು ವೀರಶೈವ ಲಿಂಗಾಯತ ಸಮಾಜದವರಿಗೆ ನೀಡಬೇಕೆಂದು ಪಕ್ಷದ ವರಿಷ್ಠರಲ್ಲಿ ವೀರಶೈವ ಲಿಂಗಾಯತ ಮತದಾರರ ಜಾಗೃತಿ ಒಕ್ಕೂಟ ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಸಂಚಾಲಕ ಕೆ.ಸಿ.ಬಸವರಾಜಸ್ವಾಮಿ, ಕೆಆರ್ ಕ್ಷೇತ್ರದಲ್ಲಿ ವಿಪ್ರ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿದ್ದು, ಮೊದಲ ಸ್ಥಾನದಲ್ಲಿದ್ದರೆ, ವೀರಶೈವ ಲಿಂಗಾಯತ ಸಮುದಾಯ 2ನೇ ಸ್ಥಾನದಲ್ಲಿದೆ. ಸಮುದಾಯದ ಸಾಕಷ್ಟು ಮಂದಿ ಈ ಹಿಂದೆ ಪ್ರಯತ್ನಿಸಿದರೂ ಕ್ಷೇತ್ರದ ಬಿಜೆಪಿ ಟಿಕೆಟ್ ಸಿಕ್ಕಿಲ್ಲ. ಹಾಗಾಗಿ ಈ ಬಾರಿ ನಮ್ಮ ಸಮುದಾಯದವರಿಗೆ ಅವಕಾಶ ಕಲ್ಪಿಸಬೇಕೆಂಬುದು ನಮ್ಮ ಒಕ್ಕೊರಲ ಬೇಡಿಕೆ ಎಂದರು.



ಕ್ಷೇತ್ರದಲ್ಲಿ 4 ಬಾರಿ ಆಯ್ಕೆಯಾದ ಹಾಲಿ ಶಾಸಕ ಎಸ್.ಎ.ರಾಮದಾಸ್ ಜನ ಸಾಮಾನ್ಯರ ಸಂಕಷ್ಟಗಳಿಗೆ ಸರಿಯಾದ ರೀತಿಯಲ್ಲಿ ಸ್ಪಂದನೆ ನೀಡದೇ ಸುಳ್ಳು ಭರವಸೆ ನೀಡುತ್ತಾ ಕಾಲ ದೂಡಿದ್ದಾರೆ. ತಮ್ಮದೇ ಸಮುದಾಯದವರಿಗೂ ಸ್ಪಂದಿಸದ ಆರೋಪ ಕೇಳಿ ಬಂದಿದೆ. ಶಾಸಕರ ಸಮುದಾಯದವರೇ ಈ ಬಾರಿ ಅವರಿಗೆ ಬಿಜೆಪಿ ಟಿಕೆಟ್ ನೀಡಬಾರದು. ಸಮುದಾಯದ ಬೇರೆ ಸೂಕ್ತ ಅಭ್ಯರ್ಥಿಗೆ ಟಿಕೆಟ್ ನೀಡಬೇಕೆಂದು ಮಾಧ್ಯಮಗಳ ಮೂಲಕ ಒತ್ತಾಯಿಸಿದ್ದಾರೆ ಎಂದು ಹೇಳಿದರು.

ಕಳೆದ ಚುನಾವಣೆಗಳಲ್ಲಿ ನಮ್ಮ ಸಮುದಾಯವು ವಿಪ್ರ ಅಭ್ಯರ್ಥಿಗೆ ಬೆಂಬಲ ನೀಡಿದ್ದು, ಅಂತೆಯೇ ಈ ಬಾರಿ ವಿಪ್ರ ಸಮುದಾಯವರು ವೀರಶೈವ ಲಿಂಗಾಯತ ಸಮಾಜದ ಅಭ್ಯರ್ಥಿಗೆ ಬಿಜೆಪಿ ಟಿಕೆಟ್ ಕೊಡಿಸಲು ಸಹಕಾರ ನೀಡಬೇಕು. ನಮ್ಮ ಸಮಾಜದಲ್ಲಿ ನೂರಾರು ಆಕಾಂಕ್ಷಿಗಳಿದ್ದು, ಸಮುದಾಯದವರಿಗೆ ಟಿಕೆಟ್ ನೀಡುವುದನ್ನು ಬಿಜೆಪಿ ವರಿಷ್ಠರು ಖಚಿತಪಡಿಸಿದರೆ ನಾವು ಸರ್ವಸಮ್ಮತ ಅಭ್ಯರ್ಥಿ ಆಯ್ಕೆ ಮಾಡಿ ಸೂಚಿಸುತ್ತೇವೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಕಾಂಗ್ರೆಸ್‌ನಲ್ಲಿ ನಿಮ್ಮದೇ ಸಮುದಾಯದ ಒಬ್ಬರು ಆಕಾಂಕ್ಷಿಯಾಗಿದ್ದರೆ, ಜೆಡಿಎಸ್‌ನಲ್ಲಿ ಈಗಾಗಲೇ ನಿಮ್ಮದೇ ಸಮಾಜದವರು ಅಭ್ಯರ್ಥಿ ಎಂದು ಘೋಷಣೆ ಮಾಡಲಾಗಿದೆ. ಹೀಗಿದ್ದರೂ ಸಮಾಜದವರಿಗೆ ಬಿಜೆಪಿ ಟಿಕೆಟ್ ಕೇಳುತ್ತಿರುವುದೇಕೆ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿ, ಈ ಬಾರಿ ವಿಪ್ರ ಸಮುದಾಯದ ಬೆಂಬಲ ಪಡೆದು ನಮ್ಮ ಸಮುದಾಯದ ಅಭ್ಯರ್ಥಿ ಗೆಲ್ಲಿಸಿಕೊಳ್ಳಲು ಅವಕಾಶವಾಗುತ್ತದೆ ಎಂಬ ನಿರೀಕ್ಷೆ ನಮ್ಮದು ಎಂದು ತಿಳಿಸಿದರು.

ಮೂರು ಪ್ರಮುಖ ಪಕ್ಷಗಳಲ್ಲೂ ವೀರಶೈವ ಲಿಂಗಾಯತ ಸಮಾಜದವರೇ ಅಭ್ಯರ್ಥಿಗಳಾದರೆ ನಿಮ್ಮ ನಿಲುವೇನು ಎಂಬುದಕ್ಕೆ ಪ್ರತಿಕ್ರಿಯಿಸಿ, ಇಂತಹ ಸನ್ನಿವೇಶ ಬಂದಲ್ಲಿ ಸಮುದಾಯದೊಂದಿಗೆ ಚರ್ಚಿಸಿ ಸೂಕ್ತವಾದ ಒಬ್ಬರನ್ನು ಬೆಂಬಲಿಸಲು ತೀರ್ಮಾನಿಸುತ್ತೇವೆ ಎಂದು ಉತ್ತರಿಸಿದರು. ಪಕ್ಷವೊಂದರಿಂದ ಘೋಷಣೆಯಾಗಿರುವ ನಿಮ್ಮದೇ ಸಮಾಜದ ಅಭ್ಯರ್ಥಿ ಬೆಂಬಲಿಸಬಹುದಲ್ಲವೇ ಎಂಬುದಕ್ಕೆ ಉತ್ತರಿಸಿ, ಅಂತಹ ಅನಿವಾರ್ಯ ಪರಿಸ್ಥಿತಿ ಉದ್ಭವವಾದರೆ ಅವರನ್ನೇ ಬೆಂಬಲಿಸುತ್ತೇವೆ ಎಂದರು.

ಸಮಾಜಕ್ಕೆ ನೋವಾಗಿದೆ: ಎಸ್.ಎ. ರಾಮದಾಸ್ ಅವರನ್ನು ವಿರೋಧಿಸಲು ಕಾರಣವೇನು ಎಂಬುದಕ್ಕೆ ಪ್ರತಿಕ್ರಿಯಿಸಿ, ನಮ್ಮ ಸಮುದಾಯವರು ಸಮಸ್ಯೆಗಳ ಪರಿಹಾರಕ್ಕಾಗಿ ಅವರನ್ನು ಭೇಟಿಯಾಗಲು ಅವಕಾಶ ಸಿಕ್ಕಿಲ್ಲ. ಒಮ್ಮೊಮ್ಮೆ ಸಿಕ್ಕರೂ ಹುಸಿ ಭರವಸೆ ನೀಡಿ ಕಳುಹಿಸಿದ್ದಾರೆ. ನಮ್ಮ ಸಮುದಾಯದ ಅಧಿಕಾರಿಗಳು ಕ್ಷೇತ್ರಕ್ಕೆ ವರ್ಗವಾದಾಗ ಅವರನ್ನು ಕರ್ತವ್ಯಕ್ಕೆ ವರದಿ ಮಾಡಿಕೊಳ್ಳಲು ಅವಕಾಶ ನೀಡದೇ ವಾಪಸ್ಸು ಕಳುಹಿಸಿದ ಘಟನೆಗಳಿದ್ದು, ಇದು ನಮ್ಮ ಸಮುದಾಯಕ್ಕೆ ನೋವುಂಟು ಮಾಡಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಸಮುದಾಯ ಅವರನ್ನು ಬೆಂಬಲಿಸುವುದು ಬೇಡವೆಂದು ತೀರ್ಮಾನಿಸಿದ್ದೇವೆ ಎಂದು ತಿಳಿಸಿದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ನಗರ ಉಪಾಧ್ಯಕ್ಷೆ ಜಯಗೌಡ, ಸಿದ್ಧಾರ್ಥನಗರ ಬಸವ ಬಳಗದ ಪದಾಧಿಕಾರಿ ಮಲ್ಲಣ್ಣ, ಒಕ್ಕೂಟದ ಮತ್ತೊಬ್ಬ ಸಂಚಾಲಕ ಗಿರೀಶ್, ಸಮುದಾಯದ ಮುಖಂಡ ಆಲನಹಳ್ಳಿ ಮಹದೇವಸ್ವಾಮಿ ಗೋಷ್ಠಿಯಲ್ಲಿದ್ದರು.

ಅವಿಶ್ವಾಸ ನಿಲುವಳಿಗೆ ಸೋಲು

ಎಂಆರ್‌ಸಿ ಅಧ್ಯಕ್ಷರಾಗಿ ವೈ.ಬಿ.ಗಣೇಶ್ ಮುಂದುವರಿಕೆ

ಮೈಸೂರು, ಮಾ.2–ಮೈಸೂರು ರೇಸ್ ಕ್ಲಬ್(ಎಂಆರ್‌ಸಿ) ಅಧ್ಯಕ್ಷರಾದ ವೈ.ಬಿ.ಗಣೇಶ್ ಅವರ ವಿರುದ್ಧ ಮಂಡಿಸಲಾಗಿದ್ದ ಅವಿಶ್ವಾಸ ನಿಲುವಳಿಗೆ ಸೋಲುಂಟಾಗಿದೆ ಹಾಗಾಗಿ ಗಣೇಶ್ ಅವರೇ ಅಧ್ಯಕ್ಷರಾಗಿ ಮುಂದುವರೆದಿದ್ದಾರೆ.


ವೈ.ಬಿ.ಗಣೇಶ್

ಗಣೇಶ್ ಅವರ ಕಾರ್ಯವೈಖರಿಯನ್ನು ವಿರೋಧಿಸಿ ಎಂಆರ್‌ಸಿ ಕಮಿಟಿಯ ಹೆಚ್.ಕೆ.ರಮೇಶ್, ಬಿ.ಯು.ಚಂಗಪ್ಪ, ಜಿ.ಕೆ.ಬಾಲಕೃಷ್ಣ, ಕೆ.ಜಿ.ಅನಂತರಾಜೇ ಅರಸ್, ನಾಗಪ್ಪನ್, ಕೆ.ಎಂ.ಚಂದ್ರೇಗೌಡ, ಪರೀಕ್ಷಿತ್ ಅವರು ಅವಿಶ್ವಾಸ ನಿಲುವಳಿ ಮಂಡನೆಗೆ ಪ್ರಸ್ತಾಪಿಸಿದ್ದರು. ಈ ಹಿನ್ನೆಲೆಯಲ್ಲಿ ಇಂದು ನಡೆದ ವಿಶೇಷ ಸಭೆಯಲ್ಲಿ ಅವಿಶ್ವಾಸ ನಿಲುವಳಿಯ ಮೇಲಿನ ಚರ್ಚೆ ಹಾಗೂ ನಂತರ ನಡೆದ ಮತದಾನದಲ್ಲಿ 6–6 ಸಮಾನ ಮತಗಳು ಬಂದಿವೆ. ಎಂಆರ್‌ಸಿಯ ಆಡಳಿತ ನಿಯಮಾವಳಿ ಪ್ರಕಾರ ಸಮಾನ ಮತಗಳು ಬಂದರೆ ನಿಲುವಳಿಗೆ ಸೋಲುಂಟಾದಂತೆಯೇ ಎಂದು ನಿರ್ಧರಿಸಲಾಗಿದೆ. ಈ ಹಿನ್ನೆಲೆಯಲ್ಲಿ ಎಂಆರ್‌ಸಿ ಕಮಿಟಿ ಸದಸ್ಯರೂ ಆದ ಪೊಲೀಸ್ ಆಯುಕ್ತ ರಮೇಶ್ ಅವರು ವೈ.ಬಿ. ಗಣೇಶ್ ಅವರೇ ಅಧ್ಯಕ್ಷರಾಗಿ ಮುಂದುವರೆಯಲಿದ್ದಾರೆ ಎಂಬ ನಿರ್ಣಯ ನೀಡಿದ್ದಾರೆ.


ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಹಿಂದುಳಿದ ವರ್ಗಗಳ ವಿಭಾಗದ ಮೈಸೂರು ನಗರ ಅಧ್ಯಕ್ಷ ಎನ್.ಆರ್.ನಾಗೇಶ್ ನೇತೃತ್ವದಲ್ಲಿ ಹಿಂದುಳಿದ ವರ್ಗಗಳ ಘಟಕದ ರಾಜ್ಯಾಧ್ಯಕ್ಷ ಮಧು ಬಂಗಾರಪ್ಪನವರ ಹುಟ್ಟುಹಬ್ಬದ ಅಂಗವಾಗಿ ಮೈಸೂರು ಚೆಲುವಾಂಬ ಆಸ್ಪತ್ರೆಯ ಸೆಕ್ಯೂರಿಟಿ ಸಿಬ್ಬಂದಿಯನ್ನು ಸನ್ಮಾನಿಸಲಾಯಿತು. ಈ ಸಂದರ್ಭದಲ್ಲಿ ಕುರುಬ ಸಮಾಜದ ರಾಮಪ್ಪ ರಮೇಶ್, ನೇಕಾರ ಸಮಾಜದ ದಿವಾಕರ್, ಗಾಣಿಗ ಸಮಾಜದ ಆರ್.ರಮೇಶ್, ಸವಿತ ಸಮಾಜದ ಹೆಚ್.ಎಸ್.ಸತೀಶ್, ದಿನೇಶ್, ವಿಶ್ವಕರ್ಮ ಸಮಾಜದ ಕಿರಣ್ ಕುಮಾರ್, ಶಾಂತರಾಜ್ ಇತರರು ಉಪಸ್ಥಿತರಿದ್ದಾರೆ.

ಮಂಡ್ಯ ಜಿಲ್ಲಾ ಸುದ್ದಿಗಳು..

ಜೆಡಿಎಸ್ ವರಿಷ್ಠರಿಂದ ಮಲತಾಯಿ ಧೋರಣೆ

ಹಿರಿಯ ಮುಖಂಡ ಬಿ.ಎಲ್.ದೇವರಾಜು ಅಸಮಾಧಾನ



ಕೆ.ಆರ್.ಪೇಟೆ, ಮಾ.2– ನಾನು ಕಳೆದ 35 ವರ್ಷಗಳಿಂದ ಜೆಡಿಎಸ್ ಪಕ್ಷ ಸಂಘಟನೆಯಲ್ಲಿ ತೊಡಗಿದ್ದರೂ, ವರಿಷ್ಠರು ನನ್ನ ಬಗ್ಗೆ ಮಲತಾಯಿ ಧೋರಣೆ ಹೊಂದಿದ್ದಾರೆ. 2018ರಲ್ಲಿ ನಾರಾಯಣಗೌಡರಿಗೆ ಟಿಕೆಟ್ ತಪ್ಪಿದಾಗ ದೇವೇಗೌಡರ ಫೋಟೋ ಸುಟ್ಟು ಹಾಕಿದ ಹೆಚ್.ಡಿ.ಮಂಜುಗೆ ಟಿಕೆಟ್ ಘೋಷಣೆ ಮಾಡಿದ್ದಾರೆ ಎಂದು ಜೆಡಿಎಸ್ ಮುಖಂಡ ಬಿ.ಎಲ್.ದೇವರಾಜು ಅಸಮಾಧಾನ ವ್ಯಕ್ತಪಡಿಸಿದರು.

ಪಟ್ಟಣದ ಟಿಎಪಿಸಿಎಂಎಸ್ ಸಮುದಾಯ ಭವನದಲ್ಲಿ ನಡೆದ ಬಿ.ಎಲ್.ದೇವರಾಜು ಅಭಿಮಾನಿಗಳ ಸಭೆಯಲ್ಲಿ ಮಾತನಾಡಿದ ಅವರು, ಮಾಜಿ ಸಿಎಂ ಕುಮಾರಸ್ವಾಮಿ ಅವರು ಹೆಚ್.ಡಿ.ಮಂಜು ಅವರನ್ನು ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ಘೋಷಿಸಿದ್ದಾರೆ. ಕ್ಷೇತ್ರದ ಅಭ್ಯರ್ಥಿ ಬದಲಿಸುವಂತೆ ಜ.18ರಂದು ನನ್ನ ಬೆಂಬಲಿಗರು ಸಭೆ ನಡೆಸಿದ್ದರು. ಆ ನಂತರವೂ ಜೆಡಿಎಸ್ ವರಿಷ್ಠರಾಗಲೀ, ಜಿಲ್ಲಾ ಹಾಗೂ ತಾಲೂಕು ಅಧ್ಯಕ್ಷರಾಗಲೀ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಮಾಜಿ ಪ್ರಧಾನಿ ದೇವೇಗೌಡ ಹಾಗೂ ಮಾಜಿ ಸಿಎಂ ಕುಮಾರಸ್ವಾಮಿ ಅವರು ಸೌಜನ್ಯಕ್ಕಾದರೂ ನನ್ನನ್ನು ಕರೆದು ಮಾತನಾಡಿಸಿಲ್ಲ. ಬದಲಿಗೆ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ತೊಡಗಿರುವವರನ್ನು ಪಕ್ಷದಿಂದ ಉಚ್ಚಾಟಿಸಲಾಗುವುದು ಎಂದು ಮಾಧ್ಯಮಗಳಿಗೆ ತಿಳಿಸಿದ್ದು, ಜೆಡಿಎಸ್‌ನಲ್ಲಿ ನಿಷ್ಠಾವಂತರಿಗೆ ಬೆಲೆ ಇಲ್ಲದಂತಾಗಿದೆ. ಆದ್ದರಿಂದ ನಾನು ರಾಜಕೀಯದಲ್ಲಿ ಇರಲಿ, ಇಲ್ಲದಿರಲಿ ರೈತಪರ ಕೆಲಸ ಮಾಡಲು ತಯಾರಿದ್ದೇನೆ. ನನ್ನ ಕೆಲವು ಬೆಂಬಲಿಗರು ಕಾಂಗ್ರೆಸ್‌ಗೆ ಸೇರ್ಪಡೆಯಾಗುವಂತೆ ಸಲಹೆ ನೀಡುತ್ತಿದ್ದಾರೆ. ಇನ್ನೂ ಕೆಲವರು ಯೋಚಿಸಿ ತೀರ್ಮಾನ ಕೈಗೊಳ್ಳುವಂತೆ ತಿಳಿಸಿದ್ದಾರೆ. ಮಾಜಿ ಸ್ಪೀಕರ್ ಕೃಷ್ಣ ಹಾಗೂ ಮಾಜಿ ಶಾಸಕ ಬಿ.ಪ್ರಕಾಶ್, ಸಚಿವ ನಾರಾಯಣಗೌಡ ಪಕ್ಷ ಬಿಡುವಾಗ ಯಾರಿಗೂ ತಿಳಿಸದಂತೆ ಪಕ್ಷ ತ್ಯಜಿಸಿದರು. ನಾನು ಅಂತಹ ಕೆಲಸ ಮಾಡುವುದಿಲ್ಲ. ನನ್ನ ಬೆಂಬಲಿಗರು, ಹಿತೈಷಿಗಳು ಹಾಗೂ ಸ್ನೇಹಿತರ ಸಭೆ ಕರೆದಿದ್ದೇನೆ. ಮುಂದಿನ ತೀರ್ಮಾನವನ್ನು ಶೀಘ್ರ ತೆಗೆದುಕೊಳ್ಳುತ್ತೇನೆ. ಅದಕ್ಕೆ ನಿಮ್ಮೆಲ್ಲರ ಸಹಕಾರ ಅಗತ್ಯ ಎಂದರು.

ಜೆಡಿಎಸ್ ಹಿರಿಯ ಮುಖಂಡ ಬಸ್ ಕೃಷ್ಣೇಗೌಡ ಮಾತನಾಡಿ, ವರಿಷ್ಠರು ಸ್ಥಳೀಯ ಮುಖಂಡರನ್ನು ಕಡೆಗಣಿಸಿ ಜೆಡಿಎಸ್ ಅಭ್ಯರ್ಥಿ ಘೋಷಿಸಿದ್ದಾರೆ. ಮಾಜಿ ಸಿಎಂ ಕುಮಾರಸ್ವಾಮಿ ಒಳ್ಳೆಯ ವ್ಯಕ್ತಿ. ಆದರೆ ಅವರ ಸುತ್ತಮುತ್ತ ಇರುವ ಜನರು ಚಾಡಿ ಹೇಳುವುದನ್ನೇ ಕಾಯಕ ಮಾಡಿಕೊಂಡಿದ್ದಾರೆ. ಅದನ್ನು ಕುಮಾರಸ್ವಾಮಿ ಅವರು ನಂಬಿ ನಮ್ಮನ್ನು ಕಡೆಗಣಿಸಿದ್ದಾರೆ. ಈಗಲೂ ಕಾಲ ಮಿಂಚಿಲ್ಲ ಕುಮಾರಣ್ಣ ಯೋಚನೆ ಮಾಡಬೇಕು. ನಮ್ಮ ನಾಯಕ ಬಿ.ಎಲ್.ದೇವರಾಜು 2 ಬಾರಿ ಸೋತಿದ್ದಾರೆ. ಈ ಬಾರಿ ಅವರಿಗೆ ಟಿಕೆಟ್ ನೀಡುವಂತೆ ವರಿಷ್ಠರಲ್ಲಿ ಮನವಿ ಮಾಡಿದ್ದೆ. ದೇವರಾಜು ಬೇಡ ಎಂದರೆ ನನಗೆ ಅವಕಾಶ ಮಾಡಿಕೊಡಿ ಎಂದು ಕೇಳಿದ್ದೆ. ಆದರೆ ಅದನ್ನು ವರಿಷ್ಠರು ಪರಿಗಣಿಸಲಿಲ್ಲ. ದೇವರಾಜು ಪಕ್ಷದಲ್ಲಿದ್ದರೆ ನಾವು ಅವರ ಜೊತೆ ಇರುತ್ತೇವೆ. ಬೇರೆ ಪಕ್ಷಕ್ಕೆ ಹೋದರೆ ನಾವು ಅವರನ್ನು ಹಿಂಬಾಲಿಸುತ್ತೇವೆ ಎಂದರು.

ಈ ವೇಳೆ ಜಿಪಂ ಮಾಜಿ ಸದಸ್ಯರಾದ ರಾಮದಾಸ್, ಎಲ್.ಕೆ ಮಂಜುನಾಥ್, ಎಪಿಎಂಸಿ ಮಾಜಿ ಅಧ್ಯಕ್ಷ ಲೋಕೇಶ್, ಟಿಎಪಿಸಿಎಂಎಸ್ ನಿರ್ದೇಶಕ ಶಶಿಧರ್, ಅಶೋಕ್, ಸುಬ್ಬೇಗೌಡ, ಡಾ.ಶ್ರೀನಿವಾಸ್ ಶೆಟ್ಟಿ, ತಾಪಂ ಮಾಜಿ ಸದಸ್ಯ ಧನಂಜಯ, ವಕೀಲರಾದ ರವಿಶಂಕರ್, ಯೋಗೇಶ್, ಗಣೇಶ್, ಪುರಸಭಾ ಮಾಜಿ ಸದಸ್ಯ ಕಿರಣ್, ತಾಪಂ ಮಾಜಿ ಸದಸ್ಯ ಸಂಜೀವಪ್ಪ, ವಿಶ್ವನಾಥ್, ಯಶೋಧರ, ರಂಗರಾಜು, ಲೋಕೇಶ್, ಎ.ರಾಜು, ಕೆ.ಟಿ.ಹರೀಶ್ ಸೇರಿದಂತೆ ಇತರರಿದ್ದರು.

ನಾಗಾಲ್ಯಾಂಡ್, ತ್ರಿಪುರಾದಲ್ಲಿ ಬಿಜೆಪಿ ಮತ್ತೆ ಅಧಿಕಾರಕ್ಕೆ

ಮೇಘಾಲಯದಲ್ಲಿ ಎನ್‌ಪಿಪಿ ಬೆಂಬಲಿಸಲು ಬಿಜೆಪಿ ನಿರ್ಧಾರ

ಮೈಸೂರು, ಮಾ.2–ಮೂರು ಈಶಾನ್ಯ ರಾಜ್ಯಗಳ ವಿಧಾನಸಭೆ ಚುನಾವಣೆ ಫಲಿತಾಂಶ ಪ್ರಕಟವಾಗಿದ್ದು, ನಾಗಾಲ್ಯಾಂಡ್ ಮತ್ತು ತ್ರಿಪುರದಲ್ಲಿ ಅಧಿಕಾರ ಉಳಿಸಿಕೊಳ್ಳುವಲ್ಲಿ ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳು ಯಶಸ್ವಿಯಾಗಿದ್ದು, ಮೇಘಾಲಯದಲ್ಲಿ ಅತ್ಯಧಿಕ ಸ್ಥಾನ ಪಡೆದಿರುವ ಎನ್‌ಪಿಪಿಯನ್ನು ಬಿಜೆಪಿ ಬೆಂಬಲಿಸುವಂತೆ ಆ ಪಕ್ಷದ ರಾಷ್ಟ್ರಾಧ್ಯಕ್ಷ ಜೆ.ಪಿ.ನಡ್ಡಾ ಸಲಹೆ ನೀಡಿದ್ದಾರೆ ಎನ್ನಲಾಗಿದೆ.

60 ಸದಸ್ಯ ಬಲವಿರುವ ನಾಗಾಲ್ಯಾಂಡ್ ವಿಧಾನಸಭೆಯಲ್ಲಿ ಆಡಳಿತಾರೂಢ ಎನ್‌ಡಿಪಿಪಿ ಮತ್ತು ಬಿಜೆಪಿ ಮೈತ್ರಿಕೂಟ 37 ಸ್ಥಾನಗಳನ್ನು ಪಡೆದು ಮತ್ತೆ ಅಧಿಕಾರಕ್ಕೇರಿದರೆ, ಎನ್‌ಪಿಪಿ–5, ಎನ್‌ಪಿಎಫ್–2 ಹಾಗೂ 16 ಮಂದಿ ಪಕ್ಷೇತರರು ಗೆಲುವು ಸಾಧಿಸಿದ್ದರೆ, ಈ ರಾಜ್ಯದಲ್ಲಿ ಕಾಂಗ್ರೆಸ್ ಶೂನ್ಯ ಸಂಪಾದನೆ ಮಾಡಿದೆ. 60 ಸದಸ್ಯ ಬಲವಿರುವ ತ್ರಿಪುರದಲ್ಲಿ ಬಿಜೆಪಿ ಮಿತ್ರ ಪಕ್ಷಗಳು 33 ಸ್ಥಾನ ಪಡೆದು ಮತ್ತೆ ಅಧಿಕಾರಕ್ಕೇರಿದರೆ, ಎಲ್‌ಇಎಫ್‌ಟಿ ಮತ್ತು ಕಾಂಗ್ರೆಸ್ ಮೈತ್ರಿ ಪಕ್ಷ–14, ಟಿಎಂಪಿ–13 ಸ್ಥಾನ ಪಡೆದಿದೆ.

60 ಸದಸ್ಯ ಬಲವಿರುವ ಮೇಘಾಲಯದಲ್ಲಿ 59 ಸ್ಥಾನಕ್ಕೆ ಚುನಾವಣೆ ನಡೆದಿದ್ದು, ಎನ್‌ಪಿಪಿ 26 ಸ್ಥಾನಗಳನ್ನು ಪಡೆದು ಅತೀ ದೊಡ್ಡ ಪಕ್ಷವಾಗಿ ಹೊರಹೊಮ್ಮಿದೆ. ಈ ಪಕ್ಷಕ್ಕೆ 2 ಸ್ಥಾನಗಳಲ್ಲಿ ಗೆದ್ದಿರುವ ಬಿಜೆಪಿ ಬೆಂಬಲಿಸುವಂತೆ ಆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಮೇಘಾಲಯ ರಾಜ್ಯ ಬಿಜೆಪಿ ಮುಖಂಡರಿಗೆ ಸೂಚನೆ ನೀಡಿದ್ದಾರೆ.


ಬುಧವಾರ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು ಮಹಾನಗರ ಪಾಲಿಕೆಯ ಕಾರ್ಪೋರೇಟರ್ ಪೈಲ್ವಾನ್ ಶ್ರೀನಿವಾಸ್ ಅವರನ್ನು ಅವರ ಅಭಿಮಾನಿಗಳು, ಹಿತೈಷಿಗಳು ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರಿದರು. ಈ ವೇಳೆ ಕಾಂಗ್ರೆಸ್ ಮುಖಂಡರಾದ ಕೆ.ಹರೀಶ್‌ಗೌಡ, ಕಾರ್ಪೋರೇಟರ್ ದೇವರಾಜ್, ಮಾಜಿ ಕಾರ್ಪೋರೇಟರ್ ಶಿವಣ್ಣ, ಮುಖಂಡರಾದ ದೀಪಕ್ ಗೌಡ ಇತರರಿದ್ದಾರೆ.

ಗ್ಯಾಸ್ ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ಪ್ರತಿಭಟನೆ



ನಾಗಮಂಗಲ, ಮಾ.2– ಗ್ಯಾಸ್ ಬೆಲೆ ಏರಿಕೆ ಖಂಡಿಸಿ ಕಾಂಗ್ರೆಸ್ ಕಾರ್ಯಕರ್ತರು ಪಟ್ಟಣದಲ್ಲಿ ಪ್ರತಿಭಟನೆ ನಡೆಸಿದರು.

ಪಟ್ಟಣದ ಟಿ.ಬಿ.ಬಡಾವಣೆಯಲ್ಲಿ ಜಮಾಯಿಸಿದ ನೂರಾರು ಕಾರ್ಯಕರ್ತರು ಅಲ್ಲಿಂದ ಮೆರವಣಿಗೆಯಲ್ಲಿ ಮರಿಯಪ್ಪ ವೃತ್ತಕ್ಕೆ ತೆರಳಿ ಮಾನವ ಸರಪಳಿ ನಿರ್ಮಿಸಿ, ರಸ್ತೆ ತಡೆ ನಡೆಸಿದರು. ಬಳಿಕ ಗ್ಯಾಸ್ ಬೆಲೆ 50 ರೂ. ಏರಿಕೆ ಮಾಡಿದ ಬಿಜೆಪಿ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿ ಆಕ್ರೋಶ ವ್ಯಕ್ತಪಡಿಸಿ ಪಟ್ಟಣದ ಮಿನಿ ವಿಧಾನಸೌಧಕ್ಕೆ ತೆರಳಿ ಧರಣಿ ನಡೆಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜೇಶ್ ಮಾತನಾಡಿ, ದಿನದಿಂದ ದಿನಕ್ಕೆ ಗ್ಯಾಸ್ ಸೇರಿದಂತೆ ದಿನಬಳಕೆಯ ವಸ್ತುಗಳ ಬೆಲೆ ಏರಿಕೆಯಾಗುತ್ತಿದ್ದು, ಬಡವರು ಹಾಗೂ ಮಧ್ಯಮ ವರ್ಗದವರ ಬದುಕು ದುಸ್ತರವಾಗಿದೆ ಅಚ್ಛೇದಿನ್ ಬರುವುದೆಂದು ಹೇಳುವ ಮೂಲಕ ದೇಶದ ಜನರನ್ನು ವಂಚಿಸುತ್ತಿರುವ ಪ್ರಧಾನಿ ಮೋದಿ ಓರ್ವ ಸುಳ್ಳುಗಾರ. ಗ್ಯಾಸ್ ಬೆಲೆ ಏರಿಕೆ ಮಾಡಿ ಬಡವರ ಹೊಟ್ಟೆ ಮೇಲೆ ಒಡೆಯುತ್ತಿರುವ ಬಿಜೆಪಿಗೆ ಮುಂದಿನ ದಿನಗಳಲ್ಲಿ ಜನತೆ ತಕ್ಕಪಾಠ ಕಲಿಸಲಿದ್ದಾರೆ ಎಂದರು. ಬಳಿಕ ಪ್ರಭಾರ ದಂಡಾಧಿಕಾರಿ ಪ್ರಕಾಶ್ ಅವರಿಗೆ ಮನವಿ ಸಲ್ಲಿಸಿದರು.

ಪ್ರತಿಭಟನೆಯಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರಾಜೇಶ್, ಮಾಜಿ ತಾಪಂ ಹನುಮಂತು, ಸುನೀಲ್, ಲಕ್ಷ್ಮಿಕಾಂತ್, ಕೃಷ್ಣೇಗೌಡ, ನರಸಿಂಹಮೂರ್ತಿ, ಗೀತಾ, ಸುರೇಶ್‌ಗೌಡ, ಚಿಕ್ಕಮ್ಮ, ರಾಜೇಗೌಡ, ರಮೇಶ್ ಇತರರಿದ್ದರು.

ಸಮಾಜ, ಜನಸೇವೆಗೆ ಸದಾ ಸನ್ನದ್ಧ: ರಾಧಾಕೃಷ್ಣ

ಮಂಡ್ಯ, ಮಾ.2– ಸಮಾಜ ಹಾಗೂ ಜನಸೇವೆಗೆ ನಾನು ಸದಾ ಸಿದ್ಧನಿದ್ದು, ಮಂಡ್ಯ ಜನತೆ ತಮ್ಮ ಕಷ್ಟಗಳನ್ನು ನನ್ನೊಂದಿಗೆ ಹಂಚಿಕೊಳ್ಳಬಹುದು ಎಂದು ಕಾಂಗ್ರೆಸ್ ಮುಖಂಡ ರಾಧಾಕೃಷ್ಣ ಭರವಸೆ ನೀಡಿದರು.



ಗುರುವಾರ ನಗರದ ಕರ್ನಾಟಕ ಸಂಘದ ಆವರಣದಲ್ಲಿ ಕೆ.ಕೆ. ರಾಧಾಕೃಷ್ಣ ಅವರ ಅಭಿಮಾನಿ ಬಳಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ 25 ಮಂದಿ ವಿಶೇಷಚೇತನರಿಗೆ ವೀಲ್‌ಚೇರ್ ವಿತರಿಸಿ ಮಾತನಾಡಿದ ಅವರು, ಮಂಡ್ಯ ಜನರ ಸೇವೆಗೆ ನಾನು ಸದಾ ಸಿದ್ಧನಿದ್ದೇನೆ. ಇಂದು ನೀಡಿರುವ ವ್ಹೀಲ್‌ಚೇರ್ ಜೊತೆಗೆ ಗ್ರಾಮಾಂತರ ಪ್ರದೇಶದಲ್ಲಿ ಅವಶ್ಯಕತೆ ಇರುವವರನ್ನು ಗುರುತಿಸಿ ವ್ಹೀಲ್‌ಚೇರ್ ವಿತರಿಸಲಾಗುವುದು ಎಂದರು. ಕಾರ್ಯಕ್ರಮದಲ್ಲಿ ವಿಕಸನ ಗ್ರಾಮೀಣ ಮತ್ತು ನಗರಾಭಿವೃದ್ಧಿ ಸಂಸ್ಥೆ ನಿರ್ದೇಶಕ ಮಹೇಶ್ ಚಂದ್ರಗುರು, ರೋಟರಿ ಸಂಸ್ಥೆ ಅಧ್ಯಕ್ಷ ಎಸ್.ನಾರಾಯಣ್, ಕಾರ್ಯದರ್ಶಿ ಅನುಪಮ, ನಿರ್ದೇಶಕ ವಿಜಯಕುಮಾರ್, ನಗರಸಭಾ ಮಾಜಿ ಉಪಾಧ್ಯಕ್ಷೆ ನಸ್ರಿನ್ ತಾಜ್, ನಗರಸಭಾ ಸದಸ್ಯೆ ಸೌಭಾಗ್ಯ, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಕೃಷ್ಣೇಗೌಡ ಉಪಸ್ಥಿತರಿದ್ದರು.

ಮಾ.5ರಂದು ಜಯರಾಮೋತ್ಸವ

ಮಂಡ್ಯ, ಮಾ.2– ದಿ.ಎಸ್.ಡಿ.ಜಯರಾಂ ಅವರ 25ನೇ ಸಂಸ್ಮರಣೆ ಅಂಗವಾಗಿ ಎಸ್.ಡಿ.ಜಯರಾಂ ಅಭಿಮಾನಿಗಳ ಬಳಗ, ಎಸ್.ಡಿ.ಜಯರಾಂ ಗ್ರಾಮೀಣಾಭಿವೃದ್ಧಿ ಸಂಸ್ಥೆ ಹಾಗೂ ಎಸ್.ಡಿ. ಜಯರಾಂ ಯುವಜನ ಸಮುದಾಯ ಅಭಿವೃದ್ಧಿ ಸಂಸ್ಥೆ ಆಶ್ರಯದಲ್ಲಿ ಮಾ.5ರಂದು ನಗರದ ಮಂಡ್ಯ ವಿವಿ ಆವರಣದಲ್ಲಿ ಎಸ್.ಡಿ.ಜಯರಾಂ–25 ಸಂಸ್ಮರಣಾ ಕಾರ್ಯಕ್ರಮ 'ಜಯರಾಮೋತ್ಸವ' ಹಮ್ಮಿಕೊಳ್ಳಲಾಗಿದೆ ಎಂದು ಎಸ್.ಡಿ. ಜಯರಾಂ ಸಮಗ್ರ ಗ್ರಾಮೀಣಾಭಿವೃದ್ಧಿ ಸಂಸ್ಥೆ ಅಧ್ಯಕ್ಷ ಅಶೋಕ್ ಜಯರಾಂ ತಿಳಿಸಿದರು.

ಅಂದು ಎಸ್.ಡಿ.ಜಯರಾಂ ಯುವ ಪ್ರಶಸ್ತಿ, ಸಮುದಾಯ ಸೇವಾ ಪ್ರಶಸ್ತಿ ಹಾಗೂ ಜೀವಮಾನ ಸಾಧನಾ ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಮಧ್ಯಾಹ್ನ 1 ಗಂಟೆಗೆ ನಗರದ ಹೊಸಹಳ್ಳಿ ಎಸ್.ಡಿ.ಜಯರಾಂ ಆಟೋ ನಿಲ್ದಾಣದಿಂದ ಬೆಳ್ಳಿ ರಥದಲ್ಲಿ ಜಯರಾಂ ಭಾವಚಿತ್ರ ಸೇರಿದಂತೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಭಾವಚಿತ್ರದ ಮೆರವಣಿಗೆ ನಡೆಸಲಾಗುವುದು ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮಧ್ಯಾಹ್ನ 3ಕ್ಕೆ ಜಾನಪದ ಕಲಾವಿದರಿಂದ ಜಾನಪದ ಝೇಂಕಾರ ಹಾಗೂ ರಂಗಭೂಮಿ ಕಲಾವಿದರಿಂದ ರಂಗ ಸಂಭ್ರಮ ನಡೆಯಲಿದೆ. ನಂತರ ಸಂಗೀತ ನಿರ್ದೇಶಕ ವಿಜಯ ಪ್ರಕಾಶ್, ಅರ್ಜುನ್ ಜನ್ಯ ತಂಡದಿಂದ ವಿಜಯಾರ್ಜುನ ಗಾನ ವೈಭವ ಸಂಗೀತ, ಗಾಯನ, ನೃತ್ಯ ಕಿರುನಾಟಕ ನಡೆಯಲಿದೆ ಎಂದರು.

ಗ್ರಾಹಕರು ಪಾವತಿಸಿದ ಸಾಲದ ಹಣ ದುರುಪಯೋಗ: ಪ್ರಕರಣ ದಾಖಲು

ಚಾಮರಾಜನಗರ, ಮಾ.2–ಖಾಸಗಿ ಮೈಕ್ರೋ ಫೈನಾನ್ಸ್ ಬ್ಯಾಂಕ್‌ಗೆ ಗ್ರಾಹಕರು ಪಾವತಿಸಿದ ಸಾಲದ ಹಣವನ್ನು ಜಮೆ ಮಾಡದೆ 15.62 ಲಕ್ಷ ರೂ. ವಂಚಿಸಿರುವ ಆರೋಪದ ಮೇರೆಗೆ ಬ್ಯಾಂಕ್‌ನ ರಿಕವರಿ ಆಫೀಸರ್ ವಿರುದ್ಧ ನ್ಯಾಯಾಲಯದ ಆದೇಶದ ಮೇರೆಗೆ ಪ್ರಕರಣ ದಾಖಲಾಗಿದೆ.

ಫಿನ್ ಕೇರ್ ಸ್ಮಾಲ್ ಫೈನಾನ್ಸ್ ಬ್ಯಾಂಕ್‌ನ ಚಾಮರಾಜನಗರ ಶಾಖೆಯ ರಿಕವರಿ ಆಫೀಸರ್, ಚಾಮರಾಜನಗರ ತಾಲೂಕು ಬೇಡರಪುರ ಗ್ರಾಮದ ಎಂ.ರಾಜು (24) ಆರೋಪಕ್ಕೆ ಗುರಿಯಾದವನಾಗಿದ್ದು, 2021ರ ಡಿ.6ರಂದು ನಡೆದ ಬ್ಯಾಂಕ್ ಆಡಿಟಿಂಗ್ ವೇಳೆ ರಾಜು 110 ಗ್ರಾಹಕರಿಗೆ ಸಾಲ ಕೊಡಿಸಿ, ನಂತರ ಅವರ ಕ್ರೆಡಿಟ್ ಕಾರ್ಡ್‌ಗಳನ್ನು ಪಡೆದುಕೊಂಡು ಸಾಲ ಮರುಪಾವತಿಯ ಹಣವನ್ನು ಅವರಿಂದ ಪಡೆದು ಗ್ರಾಹಕರ ಖಾತೆಗೆ ಸಾಲದ ಕಂತಿನ ಹಣವನ್ನು ಪಾವತಿ ಮಾಡದೆ 15,62,453 ರೂ. ವಂಚಿಸಿದ್ದಾನೆ ಎಂದು ಬ್ಯಾಂಕ್‌ನ ಯೂನಿಟ್ ಮ್ಯಾನೇಜರ್ ಆರ್. ನಾಗರಾಜು ನೀಡಿದ ದೂರನ್ನು ನ್ಯಾಯಾಲಯದ ಆದೇಶದ ಮೇರೆಗೆ ತನಿಖೆ ನಡೆಸಲಾಗುತ್ತಿದೆ.

ಮೈಸೂರು ಮಿತ್ರ

ಒಂದನೇ ಪುಟದಿಂದ

ಭವಿಷ್ಯ ನಿರ್ಧರಿಸುತ್ತದೆ...

ಆರಂಭವಾದಾಗ ಕ್ಯಾಬಿನೆಟ್ ಸಚಿವ ಸ್ಥಾನ, ಇಲಾಖೆ ಹಂಚಿಕೆಗೆ ತಕರಾರು ಶುರು ಮಾಡಿದರು. ಅವರು ಅಂದ್ಕೆ ಮಾಡಿ ಉಳಿದ ಇಲಾಖೆಗಳನ್ನು ನಮ್ಮ ಪಕ್ಷದವರಿಗೆ ನೀಡಿದ್ದಾಯಿತು. ಹಣಕಾಸು ಖಾತೆ ಕಾಂಗ್ರೆಸ್‌ನವರಿಗೆ ನೀಡಿದರೆ ರೈತರ ಸಾಲ ಮನ್ನಾ ಮಾಡಲು ತೊಂದರೆಯಾಗಬಹುದು ಎಂದು ನಾನು ಖಚಿತವಾಗಿ ಹೇಳಿದ್ದೆ. ಇಂಧನ ಇಲಾಖೆಯನ್ನೂ ಕಾಂಗ್ರೆಸ್ ಪಡೆಯಿತು. ಹಿರಿಯ ಐಎಎಸ್ ಅಧಿಕಾರಿಗಳ ವರ್ಗಾವಣೆ ಮುಖ್ಯಮಂತ್ರಿ ನಡೆಸುವುದು ಶಿಷ್ಟಾಚಾರ. ಆದರೆ ಅವರಿಗೆ ಬೇಕಾದ ಅಧಿಕಾರಿ ವರ್ಗಾವಣೆಗೆ ಪಟ್ಟು ಹಿಡಿದು, ಅವರು ನೀಡಿದ ಪಟ್ಟಿಗೆ ನಾನು ಸಹಿ ಹಾಕಬೇಕಿತ್ತು. ನಾನು ಯಾವುದೇ ತೀರ್ಮಾನ ಮಾಡುವ ಹಾಗೆ ಇರಲಿಲ್ಲ. ಇದನ್ನು ತಾಯಿ ಚಾಮುಂಡೇಶ್ವರಿ ನೆಲೆಸಿರುವ ಪುಣ್ಯಕ್ಷೇತ್ರದಲ್ಲಿ ಹೇಳುತ್ತಿದ್ದೇನೆ. ಮುಂದಿನ ಚುನಾವಣೆಯಲ್ಲಿ ತಾಯಿಯೇ ತೀರ್ಮಾನ ಮಾಡ್ತಾಳೆ ಎಂದು ನುಡಿದರು.

ಸೌಜನ್ಯಕ್ಕೂ ಎರಡು ಪಕ್ಷಗಳ ಜಂಟಿ ಶಾಸಕಾಂಗ ಪಕ್ಷ ಸಭೆ ಕರೆಯಲಿಲ್ಲ. ಒಮ್ಮೆ ಜಾರ್ಜ್ ಅವರ ಹೋಟೆಲ್‌ಗೆ ಆಹ್ವಾನಿಸಿದ್ದರು. ಅಲ್ಲಿ ಕಾಂಗ್ರೆಸ್ ಪಕ್ಷದ ನಾಯಕರು ಕುಳಿತಿದ್ದರು. ಶಾಸಕಾಂಗ ಪಕ್ಷದ ಸಭೆಯನ್ನೂ ಕರೆದಿದ್ದರು. ಆದರೆ ಮುಖ್ಯಮಂತ್ರಿಯಾಗಿ ಹೋಗಿದ್ದ ನನ್ನನ್ನು ಒಳಗಡೆ ಬನ್ನಿ ಎನ್ನಲಿಲ್ಲ ಅಲ್ಲಿಗೆ ಕರೆದಿದ್ದೇಕೆ ಎನ್ನುವುದೂ ಗೊತ್ತಾಗಲಿಲ್ಲ 15-20 ನಿಮಿಷ ಹೋಟೆಲ್ ಆವರಣದಲ್ಲಿ ಓಡಾಡಿ ನಂತರ ವಾಪಸ್ಸಾದೆ. ನಾನು ರಾಹುಲ್ ಗಾಂಧಿ, ಸೋನಿಯಾ ಗಾಂಧಿ ಅವರನ್ನು ದೂಷಿಸುವುದಿಲ್ಲ. ಪ್ರಾರಂಭಿಕ ಹಂತದಿಂದ ನನ್ನನ್ನು ಯಾವ ರೀತಿ ನಡೆಸಿಕೊಂಡಿದ್ದಾರೆ ಎನ್ನುವುದಕ್ಕೆ ಇದು ಉದಾಹರಣೆ. 'ಬಿ' ಟೀಂ ಎಂದು ಅಪಪ್ರಚಾರ ಮಾಡಿ ಕುತ್ತಿಗೆ ಕುಯ್ದು, ಅವನಂಚಿಕೆ ಪಕ್ಷಕ್ಕೆ ಜಾತ್ಯಾತೀತ ಉಳಿಸುವ ಉದ್ದೇಶದಿಂದ ತಲೆ ಕೊಟ್ಟಿದಕ್ಕೆ ಇದನ್ನೆಲ್ಲ ಅನುಭವಿಸುವಂತಾಯ್ತು ಎಂದರು. ಕುಮಾರಸ್ವಾಮಿ ಅಧಿಕಾರವನ್ನು ಸರಿಯಾಗಿ ನಡೆಸಲಿಲ್ಲ. ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ಕಾಲ ಕಳೆಯುತ್ತಿದ್ದರು. ಅದಕ್ಕಾಗಿ ಶಾಸಕರು ಅಸಮಾಧಾನದಿಂದ ಪಕ್ಷ ಬಿಟ್ಟರು ಎಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕರು ಪದೇ ಪದೇ ಹೇಳುತ್ತಿದ್ದಾರೆ. ನಾನು ಬೆಂಗಳೂರಿನಲ್ಲಿ ಇದ್ದ ದಿನಗಳಲ್ಲಿ ಬೆಳಗ್ಗೆ 8-9 ಗಂಟೆಗೆ ಕೃಷ್ಣಾ ಕಚೇರಿ, ವಿಧಾನಸೌಧ ಇಲ್ಲವೇ ಶಕ್ತಿಭವನದಲ್ಲಿ ನಿತ್ಯ 8-9 ಇಲಾಖೆಗಳ ಸಭೆ ನಡೆಸುತ್ತಿದ್ದೆ. ರೈತರ ಸಾಲಮನ್ನಾ ಮಾಡುವುದು ನನಗೆ ಪ್ರಮುಖವಾಗಿತ್ತು. ಯೋಜನೆಗಳಿಗೆ ಜಾರಿಗೆಂದು ವೀರಪ್ಪ ಮೊಯ್ಲಿ, ದೇಶಪಾಂಡೆ, ಡಿ.ಕೆ.ಶಿವಕುಮಾರ್, ರೇವಣ್ಣ ಮತ್ತಿತರರಿದ್ದ ಸಮಿತಿ ಮಾಡಿದ್ದರು. ಕಾಂಗ್ರೆಸ್ ಪ್ರಣಾಳಿಕೆ ಕಾರ್ಯಕ್ರಮ ಕಡಿಮೆ ಮಾಡುವಂತಿಲ್ಲ ಹಾಗೂ ಚುನಾವಣಾ ಪೂರ್ವ ಬಜೆಟ್‌ನಲ್ಲಿ ಘೋಷಿಸಿದ್ದರಲ್ಲಿ ವ್ಯತ್ಯಯವಾಗುವಂತಿಲ್ಲ ಎಂದು ನಿರ್ಬಂಧಿಸಿದ್ದರು. ನಮಗೆ ಸಂಪೂರ್ಣ ಬಹುಮತ ಬಂದಿಲ್ಲ ಎಂದು ಸಾಲಮನ್ನಾ ವಿಚಾರದಿಂದ ಹಿಂದೆ ಸರಿಯಿರಿ ಎಂದು ಹೇಳಿದ್ದರು.

ಸಿದ್ದರಾಮಯ್ಯನವರು ವಿಶ್ರಾಂತಿ ಸಂದರ್ಭದಲ್ಲಿ ಧರ್ಮಸ್ಥಳದ ಸಿದ್ಧವನದಲ್ಲಿ ಕುಳಿತು ಡಿಷ್ಟ್ರು ಅರೆದರು. ಸಂಸತ್ ಚುನಾವಣೆ ನಂತರ ಸರ್ಕಾರ ಬೀಳಿಸೋದು ಗೊತ್ತು ಎಂದರು. 14 ಬಜೆಟ್ ಮಂಡಿಸಿದ ಸಿದ್ದರಾಮಯ್ಯ ಸಾಲಮನ್ನಾ ವಿಚಾರವಾಗಿ ಒಂದೇ ಒಂದು ಸಲಹೆ ನೀಡಲಿಲ್ಲ. ಬದಲಾಗಿ ಬಜೆಟ್ ಮಂಡಿಸದಂತೆ ತಡೆಯುವ ಪ್ರಯತ್ನ ನಡೆಸಿದರು. ಮೊದಲ ಬಜೆಟ್ ಮಂಡನೆ ಸಂದರ್ಭ ಸ್ಪೀಕರ್ ಹಾಗೂ ಮಾಧುಸ್ವಾಮಿ ಇದಕ್ಕೆ ಅವಕಾಶವೇ ಇಲ್ಲ ಎಂದು ಅಡ್ಡಿ ಮಾಡಿದರು. ಅತ್ತು ಕರೆದು ನಿಯಮಾನುಸಾರ ಅವಕಾಶ ಇದೆ ಎಂದು ಸಾಬೀತುಪಡಿಸಿ ಹೊಸ ಬಜೆಟ್ ಮಂಡಿಸ ಬೇಕಾಯ್ತು. ಇದು ಜೆಡಿಎಸ್ ಅನ್ನು ಬಿ ಟೀಂ ಎನ್ನುವವರ ಅಂತರಿಕ ಹೊಂದಾಣಿಕೆ. ಹಿಂದಿನ ಬಜೆಟ್‌ನಲ್ಲಿ ಸಿದ್ದರಾಮಯ್ಯನವರ ಸಾಲಮನ್ನಾ ಘೋಷಿಸಿದ್ದಾಗ ಆ ಹಣವನ್ನು ಆದಾಯ ವೆಚ್ಚಕ್ಕೆ ಸೇರಿಸದೆ, ಬಂಡವಾಳ ವೆಚ್ಚಕ್ಕೆ ಸೇರಿಸಿದ್ದರು. ಹಾಗಾಗಿ ನಾನು 4 ಸಾವಿರ ಕೋಟಿ ರೂ. ಹೊಂದಿಸಬೇಕಾಯ್ತು ಎಂದು ತಿಳಿಸಿದರು.

30 ಸಾವಿರಕ್ಕೂ ಅಧಿಕ ಮತಗಳಿಂದ ಜಯ

ಸುಳ್ಳು ಮಾಡಲಿದ್ದಾರೆ. ಕಳೆದ ಬಾರಿ 3 ಸಾವಿರ ಅಂತರದಲ್ಲಿ ಸೋಲು ಕಂಡಿದ್ದ ಹನೂರು ಹಾಗೂ ಚಾಮರಾಜನಗರದಲ್ಲಿ ಬಿಜೆಪಿ ವಿಜಯ ಪತಾಕೆ ಹಾರಿಸಲಿದೆ. ಉಳಿದಂತೆ ಬಿಜೆಪಿ ಶಾಸಕರಿರುವ ಕ್ಷೇತ್ರಗಳಲ್ಲೂ ಬಿಜೆಪಿ ಜಯಭೇರಿ ಬಾರಿಸಲಿದೆ. ಹಾಗಾಗಿ ಹಳೇ ಮೈಸೂರು ಪ್ರಾಂತ್ಯದಲ್ಲಿ ಬಿಜೆಪಿ ತನ್ನ ಅಲೆ ಸೃಷ್ಟಿಸಲಿದೆ ಎಂದರು.

ಶಾಸಕ ಬಿ.ಹರ್ಷವರ್ಧನ್ ಮಾತನಾಡಿ, ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪನವರ ಆಶೀರ್ವಾದದಿಂದ 35 ವರ್ಷಗಳಿಂದ ನನೆಗುದಿಗೆ ಬಿದ್ದಿದ್ದ ನುಗು ಏತ ನಿರಾವರಿ ಯೋಜನೆ ಸಾಕಾರಗೊಂಡಿದೆ. ಅಲ್ಲದೆ ಯಡಿಯೂರಪ್ಪ, ಬೊಮ್ಮಾಯಿ ಅವರು ಉತ್ತಮವಾಗಿ ಸ್ಪಂದಿಸಿದ್ದ ಕಾರಣ 750 ಕೋಟಿಗೂ ಹೆಚ್ಚು ಅನುದಾನ ತಂದು ಅಭಿವೃದ್ಧಿ ನಡೆಸಲಾಗಿದೆ. 2 ಬಾರಿ ಬಸವರಾಜ ಬೊಮ್ಮಾಯಿ ಅವರು ಬಂದು ಅಭಿವೃದ್ಧಿ ಕಾರ್ಯಗಳಿಗೆ ಚಾಲನೆ ನೀಡಿದ್ದಾರೆ. ಅಲ್ಲದೇ ಸಮಾನತೆ ಸಂಕೀರ್ಣ ನಿರ್ಮಾಣಕ್ಕೆ ದೇವಾಲಯದ ಹಣ ಬಳಕೆಗೆ ಅಡ್ಡಿಯಾಗಿದ್ದ ಕಾನೂನು ತೊಡಕನ್ನು ನಿವಾರಿಸಲಾಗಿದ್ದು, ಇನ್ನು 2 ವಾರದಲ್ಲಿ ಈ ಕಾಮಗಾರಿಗೆ ಚಾಲನೆ ನೀಡಲಾಗುವುದು ಎಂದರು. ಈ ವೇಳೆ ಶಾಸಕರಾದ ಎನ್.ಮಹೇಶ್, ನಿರಂಜನ್‌ಕುಮಾರ್, ಕಾಂಪೋಸ್ಟ್ ಅಭಿವೃದ್ಧಿ ನಿಗಮ ಅಧ್ಯಕ್ಷ ಎಸ್.ಮಹದೇವಯ್ಯ, ಪ್ರವಾಸೋದ್ಯಮ ನಿಗಮ ಅಧ್ಯಕ್ಷ ಕಾಪು ಸಿದ್ದಲಿಂಗಸ್ವಾಮಿ, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ, ಸುರೇಶ್‌ಬಾಬು, ಸುಬ್ಬಣ್ಣ, ನಗರಸಭಾಧ್ಯಕ್ಷ ಎಸ್.ಮಹದೇವಸ್ವಾಮಿ, ಬಿಜೆಪಿ ಜಿಲ್ಲಾಧ್ಯಕ್ಷೆ ಮಂಗಳ ಸೋಮಶೇಖರ್, ತಾಲೂಕು ಬಿಜೆಪಿ ಅಧ್ಯಕ್ಷ ಪಿ.ಮಹೇಶ್, ನಗರಾಧ್ಯಕ್ಷ ಶ್ರೀನಿವಾಸರೆಡ್ಡಿ, ಜಿಪಂ ಮಾಜಿ ಸದಸ್ಯರಾದ ಸಿ.ಚಿಕ್ಕರಂಗನಾಯಕ, ಎಸ್.ಎಂ.ಕೆಂಪಣ್ಣ, ಹುಲ್ಲಹಳ್ಳಿ ಶಕ್ತಿ ಕೇಂದ್ರದ ಅಧ್ಯಕ್ಷ ಪರಶಿವ ಮೂರ್ತಿ, ಮುಖಂಡರಾದ ಕೆಂಡಗಣ್ಣಪ್ಪ, ತಾಪಂ ಮಾಜಿ ಸದಸ್ಯರಾದ ಬಿ.ಎಸ್.ರಾಮು, ಶಿವಣ್ಣ, ಶ್ಯಾಮ್ ಪಟೇಲ್, ಪುಟ್ಟಸ್ವಾಮಿ, ಬಾಲಚಂದ್ರು, ಸಂಜಯ್ ಶರ್ಮಾ, ಮಧುರಾಜ್, ಅನಂತ್, ನಗರಸಭಾ ಸದಸ್ಯರಾದ ಮಹದೇವಮ್ಮ, ವಿಜಯಲಕ್ಷ್ಮಿ, ಬಾಲಚಂದ್ರ, ಮೀನಾಕ್ಷಿ, ಕಪಿಲೇಶ್, ಮಹದೇವ ಪ್ರಸಾದ್ ಸೇರಿದಂತೆ ಇತರರಿದ್ದರು.

ಅದ್ಧೂರಿ ಸ್ವಾಗತ: ಗುಂಡ್ಲುಪೇಟೆ ಮಾರ್ಗವಾಗಿ ನಂಜನಗೂಡಿಗೆ ಆಗಮಿಸಿದ ವಿಜಯ ಸಂಕಲ್ಪ ಯಾತ್ರೆಯಲ್ಲಿ ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ, ಸಂಸದ ಡಿ.ವಿ.ಸದಾನಂದಗೌಡ, ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ, ಬಿಜೆಪಿ ರಾಜ್ಯ ಉಪಾಧ್ಯಕ್ಷ ರಾಜೇಂದ್ರ, ನಿರ್ಮಲ್ ಕುಮಾರ್ ಸುರಾನಾ ಸೇರಿದಂತೆ ಅನೇಕ ಗಣ್ಯರಿಗೆ ನಗರದ ದೇವಿರಮ್ಮನಹಳ್ಳಿ ಬಸವ ವೃತ್ತದ ಬಳಿ ಶಾಸಕ ಬಿ.ಹರ್ಷವರ್ಧನ್ ನೇತೃತ್ವದಲ್ಲಿ ಪೂರ್ಣ ಕುಂಭ ಸ್ವಾಗತ ಕೋರಲಾಯಿತು. ರಾಷ್ಟ್ರಪತಿ ರಸ್ತೆ ಮೂಲಕ ಸಾಗಿದ ಮೆರವಣಿಗೆ ಶ್ರೀಕಂಠೇಶ್ವರಸ್ವಾಮಿ ದೇಗುಲದ ಬಳಿ ಸಾಗುತ್ತಿದ್ದಂತೆ ಗಣ್ಯರು ದೇವರ ದರ್ಶನ ಪಡೆದರು. ನಂತರ ಅಂಗಡಿ ಬೀದಿ, ಬಜಾರ್ ರಸ್ತೆ ಮೂಲಕ ಸಾಗಿ ಅಂಬೇಡ್ಕರ್ ಪ್ರತಿಮೆ ಮುಂಭಾಗ ಅಂತ್ಯಗೊಂಡಿತು.

ಹತ್ತೇ ನಿಮಿಷದಲ್ಲಿ ಆಸ್ತಿ ನೋಂದಣಿ

ನಂತರ ನಾಗರಿಕರು ತಮ್ಮ ಅನುಕೂಲಕ್ಕೆ ಅನುಗುಣವಾಗಿ ನೋಂದಣಿ ಪ್ರಕ್ರಿಯೆಗೆ ಸಮಯ ನಿಗಧಿಪಡಿಸಲಾಗಿದೆ. ನೋಂದಣಿ ಪ್ರಕ್ರಿಯೆಯು ಹತ್ತು ನಿಮಿಷಗಳ ವ್ಯವಹಾರವಾಗಿರುತ್ತದೆ. ನಾಗರಿಕರು ತಮ್ಮ ಭಾವಚಿತ್ರ ಹಾಗೂ ಹೆಬ್ಬೆರಳಿನ ಗುರುತನ್ನು ಸೆರೆ ಹಿಡಿಯುವ ಸಂಬಂಧ ದಿನಾಂಕ ಹಾಗೂ ಸಮಯ ನಿಗಧಿಪಡಿಸಿ ನೋಂದಣಿ ಮಾಡಿಕೊಂಡು ಐದರಿಂದ ಹತ್ತು ನಿಮಿಷದಲ್ಲಿ ಕಚೇರಿಯಿಂದ ಹೊರ ಬರಬಹುದಾಗಿದೆ ಎಂದರು. ಆಸ್ತಿ ನೋಂದಣಿಗಾಗಿ ಜನರು ದಿನಗಟ್ಟಲೆ ಅಲೆದಾಡುವ ಪರಿಸ್ಥಿತಿ ಇತ್ತು. ಆದರೆ ಕಾವೇರಿ-2 ಯೋಜನೆಯ ಮೂಲಕ ಇನ್ನು ಮುಂದೇ ಹತ್ತೇ ನಿಮಿಷಗಳಲ್ಲಿ ಆಸ್ತಿ ನೋಂದಣಿ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದರು. ಆಸ್ತಿ ನೋಂದಣಿ ವ್ಯವಹಾರ ಇನ್ನು ಮುಂದೆ ಪಾರದರ್ಶಕವಾಗಿ ನಡೆಯಲಿದ್ದು, ಮೋಸದಿಂದ ಒಂದು ಆಸ್ತಿಯನ್ನು ಹಲವರಿಗೆ ಮಾರಾಟ ಮಾಡುವ ಜಾಲಕ್ಕೆ ಕಡಿವಾಣ ಬೀಳಲಿದೆ ಎಂದು ಸಚಿವ ಅಶೋಕ್ ವಿವರ ನೀಡಿದರು. ಇನ್ನು ಮುಂದೆ ಯಾವುದೇ ಆಸ್ತಿ ನೋಂದಣಿ ಮಾಡಿಸಬೇಕೆಂದರೆ ಜನರು ತಮಗೆ ಬೇಕಾದ ಉಪನೋಂದಣಾಧಿ ಕಾರಿಗಳ ಕಚೇರಿಯನ್ನು ಗುರುತಿಸಿ ಆನ್‌ಲೈನ್‌ನಲ್ಲಿ ಅರ್ಜಿಯನ್ನು ರವಾನಿಸಬೇಕು. ನೋಂದಣಿಯಾಗಬೇಕಾದ ಆಸ್ತಿಗೆ ಸಂಬಂಧಿಸಿದ ವಿವರವನ್ನು ಅರ್ಜಿಯಲ್ಲಿ ನಮೂದಿಸಿ ಕಳಿಸಿದರೆ ಉಪನೋಂದಣಾಧಿ ಕಾರಿಗಳು ಅದನ್ನು ಪರಿಶೀಲಿಸಿ ಯಾವ ತೊಡಕೂ ಇಲ್ಲವೆಂದರೆ ನೋಂದಣಿ ಕಾರ್ಯಕ್ಕೆ ಅಗತ್ಯವಾದ ಮಾಹಿತಿಯನ್ನು ನೀಡುತ್ತಾರೆ. ಒಂದು ವೇಳೆ ಸದರಿ ಆಸ್ತಿಯಲ್ಲಿ ಏನಾದರೂ ತೊಡಕುಗಳು ಇದ್ದರೂ ಆ ಕುರಿತು ವಿವರ ನೀಡುತ್ತಾರೆ ಎಂದರು.

ಯೋಜನೆಗೆ ಇಂದು ಚಾಲನೆ

ಎಂಬ ಅವರ ಬೆಂಬಲಿ ಗರ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿ.ಎಸ್.ಪುಟ್ಟರಾಜು, ನಾನು ಕೆ.ಎಸ್.ಪುಟ್ಟಣ್ಣಯ್ಯ ಹಲವು ವರ್ಷ ಗಳಿಂದ ವಿರುದ್ಧವಾಗಿ ರಾಜಕಾರಣ ಮಾಡಿಕೊಂಡು ಬಂದಿದ್ದು, ಅವರ ಬಗ್ಗೆ ನನಗೆ ಅಭಿಮಾನ ವಿದೆ. ಆದರೆ ಅವರ ಬೆಂಬಲಿಗರು ಸಣ್ಣತನದ ರಾಜಕಾರಣ ಮಾಡುವುದನ್ನು ನಾನು ಒಪ್ಪುವುದಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಯೋಜನೆ ಆರಂಭವಾದ ದಿನಾಂಕ ಹಾಗೂ ಕ್ಯಾಬಿನೆಟ್‌ನಲ್ಲಿ ಯೋಜನೆಗೆ ಅನುಮತಿ ಸಿಕ್ಕ ದಿನಾಂಕ ಹಾಗೂ ಟೆಂಡರ್ ಆಗಿರುವ ದಿನಾಂಕವನ್ನು ದಾಖಲೆ ಸಹಿತ ತೋರಿಸಿದ ಶಾಸಕರು, ಇಷ್ಟೊಂದು ದಾಖಲೆಗಳಿದ್ದರೂ ಇಲ್ಲಸಲ್ಲದ ಅಪಪ್ರಚಾರ ಮಾಡುತ್ತಿರುವ ಅವರುಗಳು ಅದರಿಂದಲೇ ದೊಡ್ಡ ನಾಯಕರಾಗಬಹುದು ಎಂದುಕೊಂಡಿದ್ದರೆ ನಾನು ಏನು ಮಾಡಲು ಆಗುವುದಿಲ್ಲ. ನಾನು ಮಾಡಿರುವ ಕೆಲಸದ ಬಗ್ಗೆ ಕ್ಷೇತ್ರದ ಜನರಿಗೆ ಗೊತ್ತಿದೆ ಹಾಗೂ ದೇವರಿಗೆ ಗೊತ್ತಿದೆ ಎಂದರು.

ನಾಳೆ ಕಾರ್ಯಕ್ರಮಕ್ಕೆ ಸಚಿವ ಮಾಧುಸ್ವಾಮಿ ಬಂದ ಸಂದರ್ಭ ಯೋಜನೆ ಹೇಗೆ ಆರಂಭವಾಯಿತು. ಯಾವಾಗ ಹಣ ಬಿಡುಗಡೆಯಾಯಿತು ಎಂಬ ಮಾಹಿತಿಯನ್ನು ದಿನಾಂಕದ ಸಹಿತ ನಾಳೆ ತಿಳಿಸಲಿದ್ದಾರೆ. ಅದರಂತೆ ನಮ್ಮ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ಗೊಂದಲಗೊಳ್ಳುವುದು ಬೇಡ. ನೂರಕ್ಕೆ ಸಾವಿರ ಭಾಗ ಯೋಜನೆಯನ್ನು ನಾನೇ ಮಂಜೂರು ಮಾಡಿಸಿದ್ದು, ಹೆಚ್.ಡಿ.ಕುಮಾರಸ್ವಾಮಿ ಅವರೇ ಒಪ್ಪಿಗೆ ಸೂಚಿಸಿ, ಬಜೆಟ್‌ನಲ್ಲಿ ಹಣ ಬಿಡುಗಡೆ ಮಾಡಿದ್ದಾರೆ. ಯಾರು ಗೊಂದಲಕ್ಕೀಡಾಗದೇ ಕಾರ್ಯಕ್ರಮ ಯಶಸ್ವಿಗೊಳಿಸಿ ಎಂದರು. ಬಳಿಕ ಶಾಸಕ ಸಿಎಸ್.ಪುಟ್ಟರಾಜು ಯೋಜನೆಗೆ ಚಾಲನೆ ಸಿಗುವ ಕಾಳೇನಹಳ್ಳಿ ಹಾಗೂ ಭುಗ ಗ್ರಾಮಕ್ಕೆ ಭೇಟಿ ನೀಡಿ, ಭರ್ತಿಯಾದ ಕೆರೆ, ವೇದಿಕೆ ಕಾರ್ಯಕ್ರಮ ನಡೆಯುವ ಜಾಗ ಹಾಗೂ ಯೋಜನೆಗೆ ಚಾಲನೆ ಸಿಗುವ ಯಂತ್ರಾಗಾರಗಳನ್ನು ಪರಿಶೀಲನೆ ನಡೆಸಿದರು.

ದೇವರಾಜ ಮಾರುಕಟ್ಟೆ, ಲ್ಯಾನ್ಸ್‌ಡೌನ್ ಕಟ್ಟಡ ಸಂರಕ್ಷಣೆಗೆ ಆಗ್ರಹಿಸಿ

ಮೈಗ್ರಾಪ ನೇತೃತ್ವದಲ್ಲಿ ಮೌನ ಪ್ರತಿಭಟನೆ

● ವ್ಯಾಪಾರಿಗಳು, ಪಾರಂಪರಿಕ ಸಮಿತಿ ಕಾರ್ಯಕರ್ತರು ಭಾಗಿ ● ಶೀಘ್ರ ಈ ಎರಡೂ ಪಾರಂಪರಿಕ ಕಟ್ಟಡಗಳ ದುರಸ್ತಿ, ಸಂರಕ್ಷಣೆಗೆ ಆಗ್ರಹಿಸಿ ಡಿಸಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಕೆ

ಮೈಸೂರು,ಮಾ.2(ಎಂಟಿವೈ)- ಮೈಸೂರು ಪಾರಂಪರಿಕ ಕಟ್ಟಡಗಳಾದ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕಟ್ಟಡಗಳ ಸಂರಕ್ಷಣೆಗಾಗಿ ಅಗತ್ಯ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಮೈಸೂರು ಗ್ರಾಹಕರ ಪರಿಷತ್ ಸದಸ್ಯರು ಮೌನ ಪ್ರತಿಭಟನೆ ನಡೆಸಿದರು.

ಮೈಸೂರಿನ ಜಿಲ್ಲಾಧಿಕಾರಿ ಕಚೇರಿ ಬಳಿಯ ಪಾರ್ಕ್‌ನಲ್ಲಿ ಗ್ರಾಹಕ ಪರಿಷತ್ ಸದಸ್ಯರು, ವ್ಯಾಪಾರಿಗಳು ಹಾಗೂ ಪಾರಂಪರಿಕ ಸಮಿತಿಯ ಕಾರ್ಯಕರ್ತರು ತೋಳಿಗೆ ಹಸಿರು ಪಟ್ಟಿ ಕಟ್ಟಿಕೊಂಡು ಪ್ರತಿಭಟನೆ ನಡೆಸಿದರು. ಭಿತ್ತಿ ಫಲಕಗಳನ್ನು ಪ್ರದರ್ಶಿಸಿ, ಪಾರಂಪರಿಕ ಕಟ್ಟಡಗಳನ್ನು ರಕ್ಷಣೆ ಮಾಡಬೇಕಾದ ಸರ್ಕಾರ ಬೇಕಂತಲೇ ದುರಸ್ತಿಗೆ ಕ್ರಮ ಕೈಗೊಳ್ಳದೇ ನಿರ್ಲಕ್ಷಿಸುತ್ತಿದೆ. ಪಾರಂಪರಿಕ ನಗರ ಮೈಸೂರಿನ ಹೆಗ್ಗುರುತಂತೆ ಇರುವ ಕಟ್ಟಡಗಳು ನಾಶವಾಗುವಂತಹ ಹಂತಕ್ಕೆ ತಲುಪುತ್ತಿವೆ. ಸಾಕಷ್ಟು ಬಾರಿ ಮನವಿ ಮಾಡಿದರೂ ಪಾರಂಪರಿಕ ಕಟ್ಟಡ ಸಂರಕ್ಷಣೆಗೆ ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ಕಿಡಿಕಾರಿದರು.

ದೇವರಾಜ ಮಾರುಕಟ್ಟೆ ದುಸ್ಥಿತಿಗೆ ತಲುಪಿದೆ ಎಂದು ಸರ್ಕಾರವೇ ಬಿಂಬಿಸಲು ಹೊರಟಿದೆ. ಕಟ್ಟಡದ ಒಂದು ಭಾಗವನ್ನು ಬೇಕಂತಲೇ ಕೆಡವಲು ಸಂಚು ನಡೆಸಿತು. ದೇವರಾಜ ಮಾರುಕಟ್ಟೆ ಕಟ್ಟಡವನ್ನು ರಕ್ಷಣೆ ಮಾಡಲು ಕ್ರಮ ಕೈಗೊಳ್ಳಲಿಲ್ಲ. ಸರ್ಕಾರ ಅನುಮತಿ ನೀಡಿದರೆ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಫೌಂಡೇಷನ್‌ನಿಂದ ದೇವರಾಜ ಮಾರುಕಟ್ಟೆ ಹಾಗೂ ಲ್ಯಾನ್ಸ್‌ಡೌನ್ ಕಟ್ಟಡವನ್ನು ದುರಸ್ತಿ ಮಾಡಿಸುವುದಾಗಿ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಹೇಳಿದ್ದಾರೆ. ಆದರೆ, ಸರ್ಕಾರ ಇದಕ್ಕೆ ಅನುಮತಿ ನೀಡದೆ,



ಪಾರಂಪರಿಕ ಕಟ್ಟಡಗಳ ನೆಲಸಮ ಮಾಡಲು ಮುಂದಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಇದೇ ವೇಳೆ ಪಾರಂಪರಿಕ ತಜ್ಞರ ಸಮಿತಿ ಸದಸ್ಯ ಪ್ರೊ.ಎನ್.ರಂಗರಾಜು ಮಾತನಾಡಿ, ಮೈಸೂರು ನಗರದ ಎಲ್ಲ ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಆಗಬೇಕು. ರಾಜ್ಯ ಸರ್ಕಾರ ಮೈಸೂರು ಮತ್ತು ಹಂಪಿಯನ್ನು ಅತ್ಯುನ್ನತವಾದ ಪಾರಂಪರಿಕ ಮತ್ತು ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಪ್ರದೇಶಗಳು ಎಂದು ಘೋಷಣೆ ಮಾಡಿದೆ. ಆದರೆ, ಈ ಪ್ರದೇಶಗಳ ಪರಂಪರೆಗೆ ಎಷ್ಟು ಹಣ ಮೀಸಲಿಡಲಾಗಿದೆ, ಎಷ್ಟು ವೆಚ್ಚ ಮಾಡಲಾಗುವುದು, ಏನನ್ನು ಸಂರಕ್ಷಣೆ ಮಾಡಬೇಕು ಎಂದು ಸ್ಪಷ್ಟವಾಗಿ ಹೇಳಿಲ್ಲ. ಆದರೂ, ಇನ್ನರ್ ರೂಟ್ ಆಫ್ ಹೆರಿಟೇಜ್‌ನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಯ ಜೊತೆಗೆ ಪಾರಂಪರಿಕ ಕಟ್ಟಡಗಳನ್ನು ಉಳಿಸಬಹುದು ಎಂದು ಅಭಿಪ್ರಾಯಪಟ್ಟರು.

135 ವರ್ಷ ಹಳೆಯ ದೇವರಾಜ ಮಾರುಕಟ್ಟೆ ಮತ್ತು ಇದಕ್ಕಿಂತಲೂ ಹಳೆಯದಾದ ಲ್ಯಾನ್ಸ್‌ಡೌನ್ ಕಟ್ಟಡ, ಇಂದು ದುಸ್ಥಿತಿ ತಲುಪಿವೆ. ಇನ್ನು ನಿರ್ಲಕ್ಷ್ಯ ಮಾಡಿದರೆ ಮೈಸೂರು ಪಾರಂಪರಿಕ ನಗರ ಎಂಬ ಹೆಸರು ಕಳೆದುಕೊಳ್ಳಲಿದೆ. ಈಗಾಗಲೇ 110 ಪಾರಂಪರಿಕ ಕಟ್ಟಡಗಳ ಸರ್ವೆ ಮಾಡಲಾಗಿದೆ. ಇವುಗಳ ಸಂರಕ್ಷಣೆಗೆ ಸರ್ಕಾರ ಹಣ ನೀಡಬೇಕು. ಸರ್ಕಾರಕ್ಕೆ ಇಚ್ಛೆ ಇಲ್ಲದಿದ್ದಲ್ಲಿ ಇವುಗಳ ಸಂರಕ್ಷಣೆ ಮತ್ತು ನಿರ್ವಹಣೆ ಮಾಡಲು ಆಸಕ್ತಿ ಇರುವವರಿಗೆ ಈ ಕೆಲಸ ಮಾಡಲು ಅವಕಾಶ ನೀಡಬಹುದು. ಒಟ್ಟಾರೆ ಹೇಗಾದರೂ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕಟ್ಟಡ ಸೇರಿದಂತೆ ಪಾರಂಪರಿಕ ಕಟ್ಟಡಗಳನ್ನು ಸಂರಕ್ಷಣೆ ಮಾಡಬೇಕು ಎಂದು ಆಗ್ರಹಿಸಿದರು.

> "ಸುಮಾರು 135 ವರ್ಷದ ಸುಭದ್ರವಾದ ದೇವರಾಜ ಮಾರುಕಟ್ಟೆ ಕಟ್ಟಡವನ್ನು ಪಾಲಿಕೆಯವರು ದುಸ್ಥಿತಿಯಲ್ಲಿದೆ ಎಂದು ಅಪಪ್ರಚಾರ ಮಾಡುತ್ತಿದ್ದಾರೆ. 2016ರಲ್ಲಿ ಮಾರುಕಟ್ಟೆಯ ದಕ್ಷಿಣ ಭಾಗ ಕುಸಿಯಿತು ಎಂದು ಹಬ್ಬಿಸಿದರು. ಅದು ಕುಸಿಯಲಿಲ್ಲ. ಅವರೇ ಕುಸಿಯುವಂತೆ ಮಾಡಿದರು. ಕಟ್ಟಡವನ್ನು ಇರುವಂತೆಯೇ ದುರಸ್ತಿಗೊಳಿಸಿ.
>
> - ಪೈಲ್ವಾನ್ ಎಸ್.ಮಹದೇವ, ದೇವರಾಜ ಮಾರುಕಟ್ಟೆ ಬಾಡಿಗೆದಾರರ ಸಂಘದ ಅಧ್ಯಕ್ಷ

ಬಳಿಕ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಅವರ ಮೂಲಕ ದೇವರಾಜ ಮಾರುಕಟ್ಟೆ ಮತ್ತು ಲ್ಯಾನ್ಸ್‌ಡೌನ್ ಕಟ್ಟಡಗಳ ಸಂರಕ್ಷಣೆ ಮತ್ತು ಉಳಿವಿಗಾಗಿ ರಾಜ್ಯ ಸರ್ಕಾರ ಶೀಘ್ರ ಕ್ರಮ ಜರುಗಿಸಬೇಕು ಎಂದು ಒತ್ತಾಯಿಸಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಮೈಸೂರು ಗ್ರಾಹಕರ ಪರಿಷತ್ ಕಾರ್ಯಾಧ್ಯಕ್ಷರಾದ ಎಸ್.ಶೋಭನ, ಮೈಗ್ರಾಪ ಪಾರಂಪರಿಕ ಸಮಿತಿ ಮೇಜರ್ ಜನರಲ್ ಸುಧೀರ್ ಒಂಬತ್ಕೆರೆ, ಸದಸ್ಯರಾದ ಶ್ರೀರಾಮ್, ಪ್ರೊ.ಅರುಣ್ ಮೆನನ್, ಮೈಗ್ರಾಪ ಮುಖಂಡರಾದ ಜಿ.ಶ್ರೀಧರ್, ವೆಂಕಟೇಶ್ವರ್ ರಾವ್, ಕೆ.ಪ್ರೇಮಕುಮಾರ್, ಅಮರನಾಥ್, ಮನೀಷ್ ಕುವಾರ್, ಓಂ ಪ್ರಕಾಶ್, ಅಲೀ ಬ್ರದರ್ಸ್, ಶಿವಕುಮಾರ್, ಪಿ.ವಿ.ಅಶೋಕ್, ಯಮುನಾ ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

ಅಪಘಾತ, ಅಪರಾಧ ಪ್ರಕರಣಗಳ ನಿಯಂತ್ರಣಕ್ಕೆ

ಮೈಸೂರು ರಿಂಗ್ ರಸ್ತೆಯಲ್ಲಿ ಪೊಲೀಸ್ ಕಾರ್ಯಾಚರಣೆ

ಶೀಘ್ರ ಮೈಸೂರಿಗೆ ಬರಲಿವೆ 4 ಪೆಟ್ರೋಲಿಂಗ್ ವಾಹನಗಳು

ಮೈಸೂರು, ಮಾ.2(ಆರ್‌ಕೆ)-ವಾಹನಗಳ ಅತಿವೇಗ, ಅಪಘಾತ, ಅಪರಾಧ ಪ್ರಕರಣಗಳಿಗೆ ಬ್ರೇಕ್ ಹಾಕಲು ಮುಂದಾಗಿರುವ ಪೊಲೀಸರು, ಮೈಸೂರಿನ ಹೊರ ವರ್ತುಲ ರಸ್ತೆಯಲ್ಲಿ ಪೆಟ್ರೋಲಿಂಗ್ ಕಾರ್ಯಾಚರಣೆ ತೀವ್ರ ಗೊಳಿಸಲು ಸಿದ್ಧತೆ ಮಾಡುತ್ತಿದ್ದಾರೆ.


42 ಕಿಮೀ ಉದ್ದದ ರಿಂಗ್ ರಸ್ತೆಯಲ್ಲಿ ದಿನದ 24 ಗಂಟೆ ಗಸ್ತು ನಡೆಸಲು 4 ಪ್ರತ್ಯೇಕ ಹೈವೇ ಪೆಟ್ರೋಲಿಂಗ್ ವಾಹನಗಳನ್ನು ಸರ್ಕಾರ ಮೈಸೂರಿಗೆ ಹಂಚಿಕೆ ಮಾಡಿದ್ದು, ಒಂದು ವಾರದೊಳಗೆ ಅವು ಮೈಸೂರು ತಲುಪಲಿವೆ. ಸಾರ್ವಜನಿಕರ ವಾಹನಗಳ ಸಂಚಾರದ ಮೇಲೆ ನಿಗಾ ಇರಿಸಲು ಪೊಲೀಸರು ತಯಾರಿ ನಡೆಸುತ್ತಿದ್ದಾರೆ. ಪ್ರತೀ 10 ಕಿಮೀ ಗೊಂದರಂತೆ ಈ ವಾಹನಗಳಲ್ಲಿ ಸಂಚರಿಸಿ ಸಿಬ್ಬಂದಿ (ಸಿವಿಲ್ ಮತ್ತು ಸಂಚಾರ ಠಾಣೆ) ಗಸ್ತು ತಿರುಗಿ ರಿಂಗ್ ರಸ್ತೆಯ ವಾಹನಗಳ ಚಲನ ವಲನಗಳ ಮೇಲೆ ನಿಗಾ ಇರಿಸುವರು ಎಂದು ಮೈಸೂರು ನಗರ ಪೊಲೀಸ್ ಆಯುಕ್ತ ಬಿ. ರಮೇಶ್ ತಿಳಿಸಿದ್ದಾರೆ.



ರಿಂಗ್ ರಸ್ತೆ ಹಾಗೂ ಸರ್ವೀಸ್ ರಸ್ತೆಗೆ ಡಾಂಬರೀಕರಣ ಮಾಡಿ ಎಲ್‌ಇಡಿ ಬಲ್ಬ್‌ಗಳನ್ನು ಅಳವಡಿಸಿರುವುದರಿಂದ ಹಗಲಿನಂತೆ ರಾತ್ರಿ ವೇಳೆಯೂ ಅತೀ ವೇಗದಿಂದ ಸಾಗುತ್ತಿದ್ದು, ಇದರಿಂದ ಅಪಘಾತ ಪ್ರಕರಣಗಳು ಜಾಸ್ತಿಯಾಗುತ್ತಿರುವುದನ್ನು ಸಿಬ್ಬಂದಿ ಗಮನಿಸಿ, ಕ್ಯಾಮರಾಗಳ ಸಹಾಯದಿಂದ ವೇಗಮಿತಿ ಮೀರದಂತೆ ತಡೆಗಟ್ಟಬೇಕಾಗಿದೆ. ಅದೇ ರೀತಿ ಅಪಘಾತವಾದಲ್ಲಿ ತಕ್ಷಣ ಸ್ಥಳಕ್ಕೆ ತೆರಳಿ ನೆರವಾಗುವುದು, ಕಳ್ಳತನ, ದರೋಡೆ, ಸುಲಿಗೆ, ರಸ್ತೆಯಲ್ಲೇ ಮದ್ಯಪಾನ ಮಾಡಿ, ಬಾಟಲಿಗಳನ್ನು ಬಿಸಾಡುವುದು, ನಾನಾ ರೀತಿಯ ತ್ಯಾಜ್ಯ ಸುರಿಯುವುದನ್ನು ತಪ್ಪಿಸುವುದು ಪೆಟ್ರೋಲಿಂಗ್ ವಾಹನ ಸಿಬ್ಬಂದಿಗಳ ಜವಾಬ್ದಾರಿ ಎಂದು ಅವರು ತಿಳಿಸಿದರು. ಸಾರ್ವಜನಿಕರ ವಾಹನಗಳ ಸ್ಪೀಡ್ ಕಂಟ್ರೋಲ್ ಮೀರಿದರೆ ಸಿಸಿ ಕ್ಯಾಮರಾಗಳಿಂದ ಫೋಟೋ ಕ್ಲಿಕ್ಕಿಸಿ, ಟ್ರಾಫಿಕ್ ಆಟೋಮೇಷನ್ ಸೆಂಟರ್‌ನಲ್ಲಿ ನೋಟೀಸ್ ಸೃಜಿಸಿ ವಾಹನಗಳ ಆರ್‌ಸಿ ಮಾಲೀಕರಿಗೆ ರವಾನಿಸುವ ವ್ಯವಸ್ಥೆ ಮಾಡಲಾಗುವುದು ಎಂದ ಅವರು, ಪೆಟ್ರೋಲಿಂಗ್ ವಾಹನಗಳ ಕಾರ್ಯಾಚರಣೆ ಆರಂಭವಾಗುತ್ತಿದ್ದಂತೆಯೇ ರಿಂಗ್ ರಸ್ತೆಯಲ್ಲಿನ ಅನೈತಿಕ ಚಟುವಟಿಕೆ, ಅಪರಾಧ ಪ್ರಕರಣಗಳಿಗೆ ಬ್ರೇಕ್ ಹಾಕಿದಂತಾಗುತ್ತದೆ ಎಂದರು.

ಮಾರ್ಬಳ್ಳಿಯಲ್ಲಿ ಬೋನಿಗೆ ಬಿದ್ದ ಹೆಣ್ಣು ಚಿರತೆ

ಮೈಸೂರು,ಮಾ.2(ಎಂಟಿವೈ)- ಮೈಸೂರು ತಾಲೂಕಿನ ಜಯಪುರ ಹೋಬಳಿಯ ಮಾರ್ಬಳ್ಳಿ ಗ್ರಾಮದ ಜಮೀನೊಂದರಲ್ಲಿ ಅರಣ್ಯ ಇಲಾಖೆ ಇಟ್ಟಿದ್ದ ಬೋನ್‌ಗೆ 3 ವರ್ಷದ ಹೆಣ್ಣು ಚಿರತೆ ಸೆರೆ ಸಿಕ್ಕಿದೆ.



ಈ ಗ್ರಾಮದ ಜಮೀನುಗಳಲ್ಲಿ 15 ದಿನದಿಂದ ಚಿರತೆ ಓಡಾಡುತ್ತಿದ್ದದನ್ನು ಗ್ರಾಮಸ್ಥರು ಗಮನಿಸಿದ್ದರು. ಗ್ರಾಮಸ್ಥರ ದೂರಿನ ಮೇರೆಗೆ ಅರಣ್ಯ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿತ್ತು. ಈ ವೇಳೆ ಚಿರತೆಯ ಹೆಜ್ಜೆ ಗುರುತುಗಳು ಪತ್ತೆಯಾಗಿದ್ದವು. ಇದನ್ನು ಖಚಿತಪಡಿಸಿಕೊಂಡು, ಕಳೆದ ವಾರ ಜಮೀನೊಂದರಲ್ಲಿ ಬೋನ್ ಇಟ್ಟಿದ್ದರು.

ಆದರೆ ಚಿರತೆ ಸೆರೆ ಸಿಕ್ಕಿರಲಿಲ್ಲ. ಎರಡು ದಿನದ ಹಿಂದಷ್ಟೇ ರೈತರೊಬ್ಬರಿಗೆ ಸೇರಿದ ಮೇಕೆಯೊಂದನ್ನು ಬಲಿ ಪಡೆದಿತ್ತು. ಇದರಿಂದ ಗ್ರಾಮಸ್ಥರಲ್ಲಿ ಆತಂಕ ಮನೆ ಮಾಡಿತ್ತು ಎರಡು ದಿನದ ಬಳಿಕ ಬೋನ್‌ನಲ್ಲಿದ್ದ ಕೋಳಿ ತಿನ್ನಲು ಬಂದು ಸೆರೆ ಸಿಕ್ಕಿದೆ. ಅದಕ್ಕೆ ಮೈಕ್ರೋ ಚಿಪ್ ಅಳವಡಿಸಿ ಅರಣ್ಯ ಪ್ರದೇಶಕ್ಕೆ ಬಿಡಲಾಗಿದೆ.

ಇತ್ತೀಚಿನ ದಿನಗಳಲ್ಲಿ ಮೈಸೂರು ಭಾಗದಲ್ಲಿ ಚಿರತೆಗಳ ಉಪಟಳ ಹೆಚ್ಚಾಗಿದ್ದು, ಸೆರೆ ಸಿಕ್ಕಿದ ಚಿರತೆಗಳ ಚಲನವಲನವನ್ನು ಗಮನಿಸಲು ಮೈಕ್ರೋಚಿಪ್ ಅಳವಡಿಸಲಾಗುತ್ತಿದೆ. ಇಂತಹ ಚಿರತೆಗಳ ಕಿವಿಯನ್ನು 'ವಿ' ಆಕಾರದಲ್ಲಿ ಕತ್ತರಿಸಲಾಗುತ್ತಿದೆ. ಇದರಿಂದ ಗ್ರಾಮಗಳಲ್ಲಿ ಉಪಟಳ ನೀಡುತ್ತಿರುವ ಚಿರತೆಗಳ ಪತ್ತೆಗೆ ಸಹಕಾರಿಯಾಗಲಿದೆ.

ಮದುವೆ ಯೋಗ ಕೂಡಿಬರದೆ ಬೇಸತ್ತು ನೇಣು ಬಿಗಿದುಕೊಂಡು ಟೆಕ್ಕಿ ಆತ್ಮಹತ್ಯೆ

ಮೈಸೂರು, ಮಾ.2(ಆರ್‌ಕೆ)-ಜೀವನದಲ್ಲಿ ಜಿಗುಪ್ಸೆಗೊಂಡು, ಸಾಫ್ಟ್‌ವೇರ್ ಇಂಜಿನಿಯರ್ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಮೈಸೂರು ಹೊರ ವಲಯದ ರೂಪಾನಗರದಲ್ಲಿ ಬುಧವಾರ ರಾತ್ರಿ ಸಂಭವಿಸಿದೆ.

ರೂಪಾನಗರದ 16ನೇ ಕ್ರಾಸ್ ನಿವಾಸಿ ರಾಜಶೇಖರಮೂರ್ತಿ ಅವರ ಮಗ ಪ್ರತಾಪ್(39) ನೇಣಿಗೆ ಶರಣಾದವರು. ಮೂಲತಃ ಕೊಳ್ಳೇಗಾಲದವರಾದ ಪ್ರತಾಪ್ ತಂದೆ ನಿವೃತ್ತ ಬ್ಯಾಂಕ್ ಉದ್ಯೋಗಿ. ಅಕ್ಕ ಅಮೇರಿಕಾದಲ್ಲಿ ನೆಲೆಸಿದ್ದು, ಇಂಜಿನಿಯರಿಂಗ್ ಪದವೀಧರನಾದ ಆತ, ಬೆಂಗಳೂರಿನ ಖಾಸಗಿ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು.

ಕೊರೊನಾ ಬಂದಾಗಿನಿಂದಲೂ ವರ್ಕ್ ಫ್ರಮ್ ಹೋಂನಲ್ಲಿ ತೊಡಗಿದ್ದ ಪ್ರತಾಪ್, ತನಗೆ 38 ವರ್ಷವಾದರೂ ಮದುವೆಯಾಗುವ ಯೋಗ ಕೂಡಿಬರದ ಹಿನ್ನೆಲೆಯಲ್ಲಿ ಖಿನ್ನತೆಗೊಳಗಾಗಿದ್ದರು ಎಂದು ಹೇಳಲಾಗಿದೆ ತಂದೆ-ತಾಯಿ ಸಂಬಂಧಿಗಳ ಮದುವೆಗೆ ತೆರಳಿದ್ದಾಗ ಬುಧವಾರ ರಾತ್ರಿ ಮನೆಯಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ವಿಷಯ ತಿಳಿಯುತ್ತಿದ್ದಂತೆಯೇ ಸ್ಥಳಕ್ಕೆ ಧಾವಿಸಿದ ಜಯಪುರ ಠಾಣೆ ಪೊಲೀಸರು, ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡು ಮೃತದೇಹವನ್ನು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರಕ್ಕೆ ಸಾಗಿಸಿ, ಮರಣೋತ್ತರ ಪರೀಕ್ಷೆ ನಂತರ ಇಂದು ವಾರಸುದಾರರಿಗೆ ದೇಹ ಒಪ್ಪಿಸಿದರು.

ಆಟೋ ಚಾಲಕರಿಗೆ ಡಿಸಿಪಿ ನೀತಿ ಪಾಠ

ಮೈಸೂರು, ಮಾ.2(ಆರ್‌ಕೆ)-ಸಮವಸ್ತ್ರ ಧರಿಸುವುದು, ವಾಹನವನ್ನು ಸುಸ್ಥಿತಿಯಲ್ಲಿರಿಸಿ ದಾಖಲಾತಿಗಳನ್ನು ಹೊಂದಿರುವುದು, ಪ್ರಯಾಣಿಕರೊಂದಿಗೆ ಸರಿಯಾಗಿ ವರ್ತಿಸುವುದೂ ಸೇರಿದಂತೆ ಹಲವು ವಿಷಯಗಳ ಬಗ್ಗೆ ಆಟೋರಿಕ್ಷಾ ಚಾಲಕರಿಗೆ ಮೈಸೂರು ನಗರ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್. ಜಾಹ್ನವಿ ನೀತಿ ಪಾಠ ಹೇಳಿದ್ದಾರೆ.



ಮೈಸೂರಿನ ನಜರ್‌ಬಾದ್‌ನಲ್ಲಿರುವ ಪೊಲೀಸ್ ಕಮೀಷ್ನರ್ ಕಚೇರಿ ಸಭಾಂಗಣದಲ್ಲಿ ಇಂದು ಆಟೋ ಡ್ರೈವರ್‌ಗಳ ಸಭೆ ನಡೆಸಿದ ಅವರು, ಪ್ರವಾಸಿಗರು ಹೆಚ್ಚಿನ ಸಂಖ್ಯೆಯಲ್ಲಿ ಮೈಸೂರಿಗೆ ಬರುತ್ತಾರೆ. ಹೊರಗಿನಿಂದ ಬಂದವರೊಂದಿಗೆ ಸನ್ನಡತೆಯಿಂದ ನಡೆದುಕೊಂಡು ಅವರು ಬಯಸುವ ಸ್ಥಳಕ್ಕೆ ಕರೆದೊಯ್ದು ಸುರಕ್ಷಿತ ವಾಗಿ ಬಿಡಬೇಕು. ಯಾವುದೇ ಪ್ರಯಾಣಿ ಕರು ಕೇಳಿದಾಗ ನಿರಾಕರಿಸಬಾರದು ಎಂದು ಸಲಹೆ ನೀಡಿದರು.


ಪ್ರತಿಯೊಬ್ಬರೂ ಸಮವಸ್ತ್ರ ಧರಿಸಿ ಶಿಸ್ತಿನಿಂದ ಸಂಚಾರ ನಿಯಮ ಪಾಲಿಸಿ ವಾಹನ ಚಾಲನೆ ಮಾಡುವ ಜೊತೆಗೆ ದಾಖಲಾತಿ ಇರಿಸಿಕೊಂಡಿರಬೇಕು. ಪ್ರಯಾಣಿಕರಿಂದ ನಿಗದಿತ ದರಕ್ಕಿಂತ ಹೆಚ್ಚಿಗೆ ಹಣಕ್ಕೆ ಒತ್ತಾಯಿಸದೇ ಸೌಜನ್ಯದಿಂದ ವರ್ತಿಸಿ ಅವರ ವಿಶ್ವಾಸ ಗಳಿಸಿದಲ್ಲಿ ನಿಮಗೂ ಒಳ್ಳೆಯದಾಗುತ್ತದೆ ಎಂದು ಜಾಹ್ನವಿ ತಿಳಿಸಿದರು. ಬಸ್, ರೈಲು ನಿಲ್ದಾಣ, ಅರಮನೆ, ಮೃಗಾಲಯ ಸೇರಿದಂತೆ ಪ್ರವಾಸಿ ತಾಣಗಳ ಬಳಿ ಸಾಲಾಗಿ ನಿಂತು ಪ್ರಯಾಣಿಕರನ್ನು ಕರೆದೊಯ್ಯಬೇಕೇ ಹೊರತು, ಒಟ್ಟಿಗೆ ತೆರಳಿ ತಮ್ಮ ಆಟೋಗೆ ಬರುವಂತೆ ಒತ್ತಾಯಿಸಿ ಗೊಂದಲ ಸೃಷ್ಟಿಸುವುದರಿಂದ ನಿಮಗೇ ತೊಂದರೆಯಾಗುತ್ತದೆ. ಪ್ರೀ ಪೇಯ್ಡ್ ಆಟೋ ಸೆಂಟರ್‌ನಲ್ಲಿ ಪಡೆದ ಟಿಕೆಟ್ ದರ ಪಡೆದು ಆ ಸ್ಥಳಕ್ಕೆ ಪ್ರಯಾಣಿಕರನ್ನು ಬಿಡಬೇಕು. ಒಂದು ವೇಳೆ ದೂರುಗಳು ಬಂದಲ್ಲಿ ಕ್ರಮ ಅನಿವಾರ್ಯವಾಗುತ್ತದೆ ಎಂದು ಅವರು ಇದೇ ಸಂದರ್ಭ ಎಚ್ಚರಿಕೆ ನೀಡಿದರು.

ಇಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಮಾ.2- ನಾಳೆ (ಮಾ.3) ಬೆಳಗ್ಗೆ 10 ರಿಂದ ಸಂಜೆ 5.30 ರವರೆಗೆ 4ನೇ ತ್ರೈಮಾಸಿಕ ಅವಧಿಯ ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಚಿಕ್ಕೇಗೌಡನಹುಂಡಿ, ದೇವಲಾಪುರ, ರಾಯನಹುಂಡಿ, ಆಯರಹಳ್ಳಿ, ಮರಿಗೌಡನಹುಂಡಿ, ಕುಂಬ್ರಹಳ್ಳಿ, ಕುಂಬ್ರಹಳ್ಳಿ ಮಠ, ಸೋಮೇಶ್ವರಪುರ, ಬಸಹಳ್ಳಿಹುಂಡಿ, ಕಿರಾಳು, ಹದಿನಾರು, ಹದಿನಾರುಮೋಳೆ, ಮೂಡಳ್ಳಿ, ಮಲ್ಲರಾಜನಹುಂಡಿ, ಭರಣಿ ಕುಡಿಯುವ ನೀರಿನ ಸ್ಥಾವರ ಹಾಗೂ ಸುತ್ತ-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಮಾ.5ರಂದು ವಿದ್ವಾಂಸ ಡಾ.ಕೆ.ಎಸ್.ನಾರಾಯಣಾಚಾರ್ಯರ ಕೃತಿಗಳ ವಿಚಾರ ಸಂಕಿರಣ

'ಸ್ವಾಧ್ಯಾಯ ಪ್ರವಚನ' ಕುರಿತು ಒಂದು ಅವಲೋಕನ





ಮೈಸೂರು,ಮಾ.2(ಪಿಎಂ)- ಮೈಸೂರಿನ ಸಾಹಿತ್ಯಕ, ಸಾಂಸ್ಕೃತಿಕ ಮತ್ತು ಧಾರ್ಮಿಕ ಚಟುವಟಿಕೆಗಳ ಸಂಸ್ಥೆಯಾದ ಸನಾತನ ಸಭಾದ ವತಿಯಿಂದ ಮಾ.5ರಂದು ಡಾ.ಕೆ.ಎಸ್.ನಾರಾಯಣಾಚಾರ್ಯರ ಕೃತಿಗಳ ವಿಚಾರ ಸಂಕಿರಣ ಮತ್ತು ಅವರ ಸ್ವಾಧ್ಯಾಯ ಪ್ರವಚನ ಕುರಿತು ಒಂದು ಅವಲೋಕನ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಸಭಾದ ಕಾರ್ಯದರ್ಶಿ ವಿದ್ವಾನ್ ಗ.ನಾ.ಭಟ್ಟ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ವಿದ್ವಾಂಸ ಡಾ.ಕೆ.ಎಸ್.ನಾರಾಯಣಾಚಾರ್ಯ ಅವರು ಒಂದು ವಿಶ್ವವಿದ್ಯಾನಿಲಯ ಮಾಡುವಷ್ಟು ಕೆಲಸ ಮಾಡಿದ್ದಾರೆ. ಅವರು ನಮ್ಮ ನಾಡಿನ ಹೆಮ್ಮೆ, ವಾಲ್ಮೀಕಿ-ವ್ಯಾಸ ಹೃದಯಜ್ಞ ಎಂದೇ ಖ್ಯಾತರಾಗಿದ್ದ ಅವರು ನಮ್ಮನ್ನು ಅಗಲಿ ಒಂದು ವರ್ಷ ಕಳೆದಿದೆ. ಈ ಸಂದರ್ಭದಲ್ಲಿ ಅವರ ನೆನಪಿಗಾಗಿ ಅಂದು ಬೆಳಗ್ಗೆಯಿಂದ ಸಂಜೆವರೆಗೆ ಅವರ ಕೃತಿಗಳ ಕುರಿತು ವಿಚಾರ ಸಂಕಿರಣ ಏರ್ಪಡಿಸಲಾಗಿದೆ ಎಂದರು.

ಡಾ.ಕೆ.ಎಸ್.ನಾರಾಯಣಾಚಾರ್ಯರು ಅಂಕಣಕಾರರು, ಪ್ರವಚನಕಾರರು, ಪ್ರಖರ ಚಿಂತಕರು, ವಿಮರ್ಶಕರು, ಪೌರಾಣಿಕ ಕಾದಂಬರಿಕಾರರಾಗಿ ಮನೆ ಮಾತಾದವರು. ಅವರ ಸ್ಮರಣಾರ್ಥ ಈ ವಿಚಾರ ಸಂಕಿರಣ ಆಯೋಜಿಸಿದ್ದು, ಅಂದು ರಾಮಕೃಷ್ಣನಗರದ ರಮಾಗೋವಿಂದ ರಂಗಮಂದಿರದಲ್ಲಿ ಬೆಳಗ್ಗೆ 9.30ಕ್ಕೆ ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರ ಸಾನ್ನಿಧ್ಯದಲ್ಲಿ ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ಟ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಹಿರಿಯ ಸಂಶೋಧಕ ಡಾ.ಟಿ.ವಿ.ವೆಂಕಟಾಚಲ ಶಾಸ್ತ್ರಿ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಡಾ.ಎಸ್.ಎಲ್.ಬೈರಪ್ಪ ಸಾಹಿತ್ಯ ಪ್ರತಿಷ್ಠಾನದ ಕಾರ್ಯದರ್ಶಿ ಡಾ.ಜಿ.ಎಲ್.ಶೇಖರ್, ಮಂಗಳೂರು ಗಣೇಶ ಬೀಡಿ ವರ್ಕ್ಸ್‌ನ ವ್ಯವಸ್ಥಾಪಕ ಪಾಲುದಾರ ಡಾ.ಎಂ.ಜಗನ್ನಾಥ ಶೆಣೈ ಭಾಗವಹಿಸಲಿದ್ದು, ಸನಾತನ ಸಭಾದ ಅಧ್ಯಕ್ಷ ಎನ್.ಎಸ್.ದ್ವಾರಕನಾಥ, ಉಪಾಧ್ಯಕ್ಷ ಪ್ರೊ.ಎಸ್.ರಾಮಪ್ರಸಾದ್ ಉಪಸ್ಥಿತರಿರಲಿದ್ದಾರೆ. ಇದಾದ ಬಳಿಕ ವಿಧಾನಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ್ ಅಧ್ಯಕ್ಷತೆಯಲ್ಲಿ ಮೊದಲ ಗೋಷ್ಠಿ ನಡೆಯಲಿದ್ದು, 'ಆಚಾರ್ಯರ ರಾಮಾಯಣ ಕೃತಿಗಳ ಒಂದು ಕಿರು ಸಮೀಕ್ಷೆ' ಕುರಿತು ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್, 'ಆಚಾರ್ಯರ ಭಾಗವತ ಕೃತಿಗಳ ಒಂದು ಪ್ರದಕ್ಷಿಣೆ' ಕುರಿತು ಡಾ.ಜಯಂತಿ ಮನೋಹರ್ ವಿಚಾರ ಮಂಡಿಸಲಿದ್ದಾರೆ ಎಂದರು.

ನಂತರ ವಿಧಾನಪರಿಷತ್ ಮಾಜಿ ಸದಸ್ಯೆ ಡಾ.ಎಸ್.ಆರ್.ಲೀಲಾ ಅಧ್ಯಕ್ಷತೆಯಲ್ಲಿ ಎರಡನೇ ಗೋಷ್ಠಿ ನಡೆಯಲಿದ್ದು, 'ಆಚಾರ್ಯರ ಮಹಾಭಾರತ ಕೃತಿಗಳ ಒಂದು ಸ್ಥೂಲಾವಲೋಕನ' ಕುರಿತು ವಿದ್ವಾನ್ ಗ.ನಾ.ಭಟ್ಟ, 'ಆಚಾರ್ಯರ ರಾಷ್ಟ್ರಭಕ್ತಿ ಮತ್ತು ಪತ್ರಿಕಾ ಬರಹಗಳು ಒಳನೋಟ' ಕುರಿತು ಟಿ.ದೇವಿದಾಸ್ ಮಾತನಾಡಲಿದ್ದಾರೆ. ಸಂಜೆ 4.30ಕ್ಕೆ ಸಮಾರೋಪ ಸಮಾರಂಭ ನಡೆಯಲಿದ್ದು, ಚಿಂತಕ ಪೊಲ್ಯ ಉಮೇಶ್ ಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಹಿರಿಯ ನ್ಯಾಯವಾದಿ ಓ.ಶಾಮ ಭಟ್ಟ, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್'ನ ಸಂಸ್ಥಾಪಕ ಸಂಪಾದಕರಾದ ಕೆ.ಬಿ.ಗಣಪತಿ (ಕೆಬಿಜಿ) ಭಾಗವಹಿಸಲಿದ್ದಾರೆ ಎಂದು ತಿಳಿಸಿದರು. ಸನಾತನ ಸಭಾದ ಅಧ್ಯಕ್ಷ ಎನ್.ಎಸ್.ದ್ವಾರಕನಾಥ, ಉಪಾಧ್ಯಕ್ಷ ಪ್ರೊ.ಎಸ್.ರಾಮಪ್ರಸಾದ್, ಸದಸ್ಯ ಎಂ.ಎನ್.ಕೃಷ್ಣ ಗೋಷ್ಠಿಯಲ್ಲಿದ್ದರು.

ಮೈಸೂರು ಮಿತ್ರ

ನಾಳೆ ತಿ.ನರಸೀಪುರದಲ್ಲಿ ವಿಜಯ ಸಂಕಲ್ಪ ಯಾತ್ರೆ

● 10 ಸಾವಿರ ಮಂದಿಯಿಂದ ಬೃಹತ್ ರೋಡ್ ಶೋ ● ಕಾರ್ಯಕ್ರಮ ಯಶಸ್ಸಿಗೆ ಕ್ಷೇತ್ರದ ಚುನಾವಣಾ ಉಸ್ತುವಾರಿ ಹೇಮಂತ್ ಕುಮಾರ್ ಗೌಡ ಮನವಿ



ತಿ.ನರಸೀಪುರ, ಮಾ.2– ಪ್ರಸಿದ್ಧ ಯಾತ್ರಾಸ್ಥಳ ಶ್ರೀಮಲೆ ಮಹದೇಶ್ವರ ಬೆಟ್ಟದಲ್ಲಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರು ಚಾಲನೆ ನೀಡಿರುವ ವಿಜಯ ಸಂಕಲ್ಪ ಯಾತ್ರೆ ಮಾ.4ರಂದು ತಿ.ನರಸೀಪುರ ಕ್ಷೇತ್ರ ಪ್ರವೇಶಿಸಲಿದ್ದು, ಪಕ್ಷದ ಕಾರ್ಯಕರ್ತರು ಪಟ್ಟಣದಲ್ಲಿ ಬೃಹತ್ ರೋಡ್ ಶೋ ನಡೆಸಲಿದ್ದಾರೆ ಎಂದು ಕ್ಷೇತ್ರದ ಚುನಾವಣಾ ಉಸ್ತುವಾರಿ ಹೇಮಂತ್ ಕುಮಾರ್ ಗೌಡ ತಿಳಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಗುರುವಾರ ಸಂಜೆ ಸುದ್ದಿಗೋಷ್ಠಿಯಲ್ಲಿ ವಿಜಯ ಸಂಕಲ್ಪ ಯಾತ್ರೆ ಹಿನ್ನೆಲೆಯಲ್ಲಿ ಕ್ಷೇತ್ರದಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿ ನೀಡಿ ಮಾತನಾಡಿದ ಅವರು, ಅಂದು ಪಟ್ಟಣ ಪ್ರವೇಶಿಸಲಿರುವ ವಿಜಯ ಸಂಕಲ್ಪ ಯಾತ್ರೆಯನ್ನು ರಾಷ್ಟ್ರೀಯ ಹೆದ್ದಾರಿ ಬಳಿಯ ಬಿಂದಿಗೆ ಫ್ಯಾಕ್ಟರಿ ಬಳಿ ಅದ್ದೂರಿಯಾಗಿ ಸ್ವಾಗತಿಸಲಿದ್ದು, 10 ಸಾವಿರ ಮಂದಿ ರೋಡ್ ಶೋನಲ್ಲಿ ಭಾಗವಹಿಸಲಿದ್ದಾರೆ ಎಂದರು.

ರೋಡ್ ಶೋಗೆ ಬೇಕಾದ ಎಲ್ಲಾ ಅಗತ್ಯ ತಯಾರಿ ಮಾಡಲಾಗುತ್ತಿದ್ದು, ಪಟ್ಟಣದಲ್ಲಿ ಹಿಂದೆಂದೂ ನಡೆದಿರದಂತಹ ಕಾರ್ಯಕ್ರಮ ಇದಾಗಲಿದೆ. ಕ್ಷೇತ್ರದಲ್ಲಿ ಬಿಜೆಪಿ ಬಲಿಷ್ಠವಾಗಿದ್ದು, ಚುನಾವಣೆಯಲ್ಲಿ ಪಕ್ಷ ಗೆಲ್ಲಲಿದೆ ಎಂಬ ಸಂದೇಶ ಕಾಂಗ್ರೆಸ್ ಹಾಗೂ ಜೆಡಿಎಸ್‌ಗೆ ರವಾನೆಯಾಗಲಿದೆ ಎಂದರು.

ಅಂದು ಬೆಳಗ್ಗೆ 9 ಗಂಟೆಗೆ ಸಂಕಲ್ಪ ಯಾತ್ರೆ ಪಟ್ಟಣ ಪ್ರವೇಶಿಸಲಿದ್ದು, ಬೃಹತ್ ರೋಡ್ ಶೋ ಮೂಲಕ ಮೆರವಣಿಗೆಯಲ್ಲಿ ಪಕ್ಷದ ಮುಖಂಡರನ್ನು ಕರೆತಂದು ತಾಲೂಕು ಕಚೇರಿ ಮುಂಭಾಗದ ಡಾ.ಬಿ.ಆರ್.ಅಂಬೇಡ್ಕರ್ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುವುದು. ನಂತರ ಶ್ರೀರಾಮಪುರ ಬೀದಿ ಪೈಕುಮಾರ್ ಎಂಬುವರ ಮನೆಯಲ್ಲಿ ಉಪಹಾರ ಸೇವಿಸಿ ಪತ್ರಿಕಾಗೋಷ್ಠಿ ನಡೆಸಲಿದ್ದು, ನಂತರ ರೋಡ್ ಶೋ ಮೂಲಕವೇ ಗುಂಜಾ ನರಸಿಂಹಸ್ವಾಮಿ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಲಾಗುತ್ತದೆ. ದೇವಸ್ಥಾನದಿಂದ ತೇರಿನ ಬೀದಿ, ಲಿಂಕ್ ರಸ್ತೆ ಮೂಲಕ ಮೆರವಣಿಗೆಯಲ್ಲಿ ತೆರಳಲಿರುವ ಪಕ್ಷದ ಮುಖಂಡರು ಖಾಸಗಿ ಬಸ್ ನಿಲ್ದಾಣದಲ್ಲಿ ಸಾರ್ವಜನಿಕರನ್ನುದ್ದೇಶಿಸಿ ಮಾತನಾಡಿದ ನಂತರ ವಿದ್ಯೋದಯ ಕಾಲೇಜು ವೃತ್ತದಲ್ಲಿ ಸಂಕಲ್ಪಯಾತ್ರೆ ಅಂತ್ಯಗೊಂಡು ವರುಣಾ ಕ್ಷೇತ್ರಕ್ಕೆ ತೆರಳಲಿದೆ. ಕಾರ್ಯಕರ್ತರು, ಅಭಿಮಾನಿಗಳು, ಶಕ್ತಿ ಕೇಂದ್ರದ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಾತ್ರೆ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಕ್ಷೇತ್ರಾಧ್ಯಕ್ಷ ಕೆ.ಸಿ.ಲೋಕೇಶ್ ನಾಯಕ್ ಮಾತನಾಡಿ, ವಿಜಯ ಸಂಕಲ್ಪ ಯಾತ್ರೆಯಲ್ಲಿ ಹಲವು ಸಚಿವರು ಭಾಗವಹಿಸುತ್ತಿದ್ದು, ಹೋಬಳಿ ಮಟ್ಟದಲ್ಲಿ ಯಾತ್ರೆ ಬಗ್ಗೆ ಪ್ರಚಾರ ಮಾಡಲಾಗಿದೆ. ಮಹಾಶಕ್ತಿ ಕೇಂದ್ರದಲ್ಲಿ ಸಹ ಅಧ್ಯಕ್ಷರ ಸಭೆ ಮಾಡಿ ಹೆಚ್ಚಿನ ಕಾರ್ಯಕರ್ತರನ್ನು ಯಾತ್ರೆಗೆ ಕರೆತರುವ ಜವಾಬ್ದಾರಿ ಬೂತ್ ಅಧ್ಯಕ್ಷರಿಗೆ ವಹಿಸಲಾಗಿದೆ. ಯಾತ್ರೆಯಲ್ಲಿ ಕಲಾ ತಂಡದ ಮೆರುಗು ಸಹ ಇರಲಿದೆ. ಬೃಹತ್ ಬೈಕ್ ರ್‍ಯಾಲಿ, ಸುಮಂಗಲಿಯರಿಂದ ಪೂರ್ಣಕುಂಭ ಸ್ವಾಗತ ನೀಡಲಾಗುತ್ತಿದ್ದು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿದರು.

> **6** ವಿಜಯ ಸಂಕಲ್ಪ ಯಾತ್ರೆ ಎಲ್ಲಾ ಕ್ಷೇತ್ರಗಳಲ್ಲೂ ಅಭೂತಪೂರ್ವ ಯಶಸ್ಸು ಕಂಡಿದೆ. ನಮ್ಮ ಕ್ಷೇತ್ರದಲ್ಲೂ ಯಶಸ್ಸು ಗಳಿಸಿ ಮುಂದಿನ ಚುನಾವಣೆಯಲ್ಲಿ ಪಕ್ಷ ಗೆಲ್ಲುತ್ತದೆ ಎಂಬ ವಾತಾವರಣ ಸೃಷ್ಟಿಯಾಗಬೇಕು. ಹಾಗಾಗಿ ಶನಿವಾರ ಪಟ್ಟಣ ಪ್ರವೇಶಿಸಲಿರುವ ಸಂಕಲ್ಪಯಾತ್ರೆಗೆ ಸ್ವಯಂಪ್ರೇರಿತರಾಗಿ ಕಾರ್ಯಕರ್ತರು ಆಗಮಿಸಿ ಬೆಂಬಲಿಸಿ.
> **– ಮಡವಾಡಿ ಮಹೇಶ್, ಜಿಲ್ಲಾ ಸಹ ಸಂಚಾಲಕ.**

ಎಸ್.ಸಿ.ಮೋರ್ಚಾ ಉಪಾಧ್ಯಕ್ಷ ಸಾಮ್ರಾಟ್ ಮಾತನಾಡಿ, ಈಗಾಗಲೇ ನಾಗಾಲ್ಯಾಂಡ್, ಮೇಘಾಲಯ, ತ್ರಿಪುರ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಧೂಳೀಪಟವಾಗಿದೆ. ಬಿಜೆಪಿ ಪಕ್ಷ ವಿಜಯ ಸಂಕಲ್ಪ ಯಾತ್ರೆ ಮೂಲಕ ಮತ್ತೆ ಅಧಿಕಾರ ಹಿಡಿಯಲಿದ್ದು, ಕ್ಷೇತ್ರದಲ್ಲಿ ಮತ್ತೆ ಬಿಜೆಪಿ ಬಾವುಟ ಹಾರುವುದು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಜಿಲ್ಲಾ ಕಾರ್ಯಕಾರಿಣಿ ಸದಸ್ಯ ಕರೋಹಟ್ಟಿ ಮಹದೇವಯ್ಯ, ಪುರಸಭಾ ಸದಸ್ಯ ಎಸ್.ಕೆ ಕಿರಣ್, ಯುವ ಘಟಕದ ಅಧ್ಯಕ್ಷ ಕುರುಬೂರು ಶಿವಶಂಕರ್, ಲೋಕೇಶ್, ಎಸ್ಸಿ ಮೋರ್ಚಾ ಕಾರ್ಯದರ್ಶಿ ಅನಿಲ್ ಕುಮಾರ್, ಕರೋಹಟ್ಟಿ ಬಸವರಾಜು ಪತ್ರಿಕಾಗೋಷ್ಠಿಯಲ್ಲಿದ್ದರು.

ಕಪ್ಪಡಿ ಜಾತ್ರೆಗೆ ಆಗಮಿಸುವ ಭಕ್ತರಿಗೆ ಮೂಲಸೌಲಭ್ಯ ಕಲ್ಪಿಸಿ

ಅಧಿಕಾರಿಗಳಿಗೆ ಶಾಸಕ ಸಾ.ರಾ.ಮಹೇಶ್ ಸೂಚನೆ



ಕೆ.ಆರ್.ನಗರ, ಮಾ.2– ಇತಿಹಾಸ ಪ್ರಸಿದ್ಧ ಕಪ್ಪಡಿ ಜಾತ್ರೆಗೆ ಆಗಮಿಸುವ ಭಕ್ತರಿಗೆ ಮೂಲ ಸೌಕರ್ಯ ಕಲ್ಪಿಸುವಂತೆ ತಾಲೂಕು ಆಡಳಿತ ಮತ್ತು ಸ್ಥಳೀಯ ಗ್ರಾಪಂ ಅಧಿಕಾರಿಗಳಿಗೆ ಶಾಸಕ ಸಾ.ರಾ.ಮಹೇಶ್ ಸೂಚಿಸಿದರು.

ತಾಲೂಕಿನ ಕಪ್ಪಡಿಯಲ್ಲಿ ಗುರುವಾರ ನಡೆದ ತಾಲೂಕು ಮಟ್ಟದ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿದ ಅವರು, ಈಗಾಗಲೇ ಜಾತ್ರೆ ಆರಂಭವಾಗಿದ್ದು, ನಿರಂತರವಾಗಿ 1 ತಿಂಗಳು ನಡೆಯುವ ಜಾತ್ರಾ ಮಹೋತ್ಸವಕ್ಕೆ ರಾಜ್ಯದ ವಿವಿಧ ಭಾಗಗಳಿಂದ ನಿತ್ಯ ಭಕ್ತರು ಆಗಮಿಸುವ ಜತೆಗೆ ಕೆಲವರು ಇಲ್ಲೇ ವಾರಗಟ್ಟಲೇ ಉಳಿದುಕೊಂಡು ಹರಕೆ, ಪೂಜಾ ಕೈಂಕರ್ಯ ನೆರವೇರಿಸುವುದರಿಂದ ಅವರಿಗೆ ಯಾವುದೇ ತೊಂದರೆಯಾಗಬಾರದು ಎಂದರು.

ಕುಡಿಯುವ ನೀರು, ವಿದ್ಯುತ್, ವಾಹನ ಪಾರ್ಕಿಂಗ್, ಬಸ್ ಸಂಚಾರ, ಶೌಚಾಲಯ ಸೇರಿದಂತೆ ಮೂಲಸೌಕರ್ಯ ಕಲ್ಪಿಸಬೇಕು. ಯಾವುದೇ ಅಹಿತಕರ ಘಟನೆ ನಡೆಯದಂತೆ ಸೂಕ್ತ ಬಂದೋಬಸ್ತ್ ಕೈಗೊಳ್ಳಬೇಕು. ಅಂಗಡಿ ಮುಂಗಟ್ಟಿನವರು ನಿಗದಿ ಪಡಿಸಲಾಗಿರುವ ಸ್ಥಳಗಳಲ್ಲೇ ತಮ್ಮ ವ್ಯಾಪಾರ ಮಾಡುವ ಮೂಲಕ ದೇವಾಲಯದ ಆಡಳಿತ ಹಾಗೂ ಅಧಿಕಾರಿಗಳಿಗೆ ಸಹಕರಿಸಿ ಎಂದರು.

ನ್ಯಾಯಾಲಯದ ಆದೇಶದಂತೆ ದೇವಸ್ಥಾನ ವ್ಯಾಪ್ತಿ ಬಿಟ್ಟು ಬೇರೆ ಕಡೆ ಭಕ್ತರು ತಮ್ಮ ಇಷ್ಟದ ಆಹಾರ ಪದ್ಧತಿಯಂತೆ ಅಡುಗೆ ತಯಾರಿಸಿಕೊಂಡು ಊಟ ಮಾಡಲು ಅವಕಾಶ ಇದ್ದು ಇದಕ್ಕೆ ಯಾವುದೇ ಅಡ್ಡಿ ಇಲ್ಲ. ಭಕ್ತರು ಮಠದ ಸ್ವಾಮೀಜಿಗಳ ನಿರ್ದೇಶನದಂತೆ, ನಿಯಮಗಳನ್ನು ಅನುಸರಿಸಿ ಇತರರಿಗೆ ಅನಾನುಕೂಲವಾಗದಂತೆ, ಸ್ವಚ್ಛತೆಗೆ ಆದ್ಯತೆ ನೀಡಿ ಶಾಂತಿಯುತವಾಗಿ ವರ್ತಿಸಿ ದೇವರ ದರ್ಶನ ಪಡೆಯಿರಿ ಎಂದರು.

ಈ ವೇಳೆ ಬೊಪ್ಪೆಗೌಡನಪುರ ಮಠಾಧಿಪತಿ ಶ್ರೀಜ್ಞಾನಾನಂದ ಚನ್ನರಾಜೇ ಅರಸ್, ತಹಸೀಲ್ದಾರ್ ಬಾಲಸುಬ್ರಹ್ಮಣ್ಯ, ತಾಪಂ ಇಓ ಹೆಚ್.ಕೆ.ಸತೀಶ್, ಸಿಪಿಐ ರೇವಣ್ಣ, ಎಸ್‌ಐ ಸುಷ್ಮಾ, ಎಸ್.ಎಂ.ಅಶೋಕ್‌ಕುಮಾರ್, ಟಿಹೆಚ್‌ಓ ಡಾ.ಕೆ.ಆರ್.ಮಹೇಂದ್ರಪ್ಪ, ತಾಲೂಕು ಆರೋಗ್ಯ ನಿರೀಕ್ಷಕ ಕೆ.ವಿ.ರಮೇಶ್, ಪುರಸಭಾ ಸದಸ್ಯ ಕೆ.ಪಿ.ಪ್ರಭುಶಂಕರ್, ಗ್ರಾಪಂ ಅಧ್ಯಕ್ಷೆ ಮಂಜುಳಾ, ಸದಸ್ಯರಾದ ಮನುಗೌಡ, ಹೆಚ್.ಎಲ್.ಕಾಂತರಾಜು, ಭವ್ಯ, ಮಾಜಿ ಸದಸ್ಯ ಹೆಚ್.ಎಂ.ಮಂಜು, ಜೆಡಿಎಸ್ ಮುಖಂಡರಾದ ಸುಜಯ್, ರಾಜು, ಭರತ್, ರಾಜಣ್ಣ, ಮಧು, ಆರಾಧ್ಯ, ಪಿಡಿಓ ನೇತ್ರಾವತಿ ಸೇರಿದಂತೆ ಇನ್ನಿತರರಿದ್ದರು.

ಇಂದು ಪಿ.ಪಟ್ಟಣಕ್ಕೆ ವಿಜಯ ಸಂಕಲ್ಪ ಯಾತ್ರೆ



ಪಿರಿಯಾಪಟ್ಟಣ, ಮಾ.2– ತಾಲೂಕಿಗೆ ಮಾ.3 ರಂದು ಬಿಜೆಪಿ ವಿಜಯ ಸಂಕಲ್ಪ ಯಾತ್ರೆ ಆಗಮಿಸಲಿದೆ ಎಂದು ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್ ತಿಳಿಸಿದರು.

ಪಟ್ಟಣದ ಬಿಜೆಪಿ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ವಿಜಯ ಸಂಕಲ್ಪ ರಥಯಾತ್ರೆ ಕೆ.ಆರ್.ನಗರದಿಂದ ತಾಲೂಕಿನ ಕಿತ್ತೂರು, ಬೆಟ್ಟದಪುರ ಮಾರ್ಗವಾಗಿ ಪಿರಿಯಾಪಟ್ಟಣಕ್ಕೆ ಮಧ್ಯಾಹ್ನ 12.30ಕ್ಕೆ ಆಗಮಿಸಲಿದೆ. ಯಾತ್ರೆಯಲ್ಲಿ ಸಚಿವರಾದ ಆರ್.ಅಶೋಕ್, ಕೋಟಾ ಶ್ರೀನಿವಾಸ ಪೂಜಾರಿ, ವಿ.ಸುನೀಲ್ ಕುಮಾರ್, ಎಸ್.ಅಂಗಾರ, ಎಸ್.ಟಿ.ಸೋಮಶೇಖರ್, ಸಂಸದರಾದ ವಿ.ಶ್ರೀನಿವಾಸ್ ಪ್ರಸಾದ್, ಪ್ರತಾಪ್ ಸಿಂಹ, ಶಾಸಕ ಎನ್.ಮಹೇಶ್, ನಿರ್ಮಲ್ ಕುಮಾರ್ ಸುರಾನ, ರಾಜೇಂದ್ರ ಭಾಗವಹಿಸಲಿದ್ದಾರೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಮನವಿ ಮಾಡಿದರು.

ಬಿಜೆಪಿ ಯೋಜನೆಗಳ ಬಗ್ಗೆ ಮನವರಿಕೆ: ವಿಜಯ ಸಂಕಲ್ಪ ಯಾತ್ರೆ ಮೂಲಕ ಜನರಿಗೆ ಬಿಜೆಪಿ ಸರ್ಕಾರದ ಯೋಜನೆಗಳ ಬಗ್ಗೆ ಮನವರಿಕೆ ಮಾಡಿಕೊಡಲಾಗುವುದು ಎಂದು ಮಾಜಿ ಸಚಿವ ಸಿ.ಹೆಚ್.ವಿಜಯಶಂಕರ್ ತಿಳಿಸಿದರು. ಕೇಂದ್ರ ಮತ್ತು ರಾಜ್ಯ ಬಿಜೆಪಿ ಸರ್ಕಾರದ ಜನಪರ ಯೋಜನೆಗಳನ್ನು ರಾಜ್ಯದ ಜನರಿಗೆ ಮನವರಿಕೆ ಮಾಡಿಕೊಡಲು ವಿಜಯ ಸಂಕಲ್ಪ ಯಾತ್ರೆ, ಫಲಾನುಭವಿಗಳ ಸಮಾವೇಶ, ಪ್ರಗತಿ ರಥ, ಪ್ರಣಾಳಿಕೆ ಸಮಿತಿ ಎಂಬ 4 ರಥಗಳು ರಾಜ್ಯಾದ್ಯಂತ ಸಂಚರಿಸುತ್ತಿದೆ. ದೇಶದ ಆಂತರಿಕ ಮತ್ತು ಬಾಹ್ಯ ಭದ್ರತೆ ಬಗ್ಗೆ ಮತ್ತು ಸದೃಢ ಸಮಾಜ ನಿರ್ಮಾಣಕ್ಕೆ ಬಿಜೆಪಿ ಅನಿವಾರ್ಯತೆ ಬಗ್ಗೆ ಅರಿವು ಮೂಡಿಸಬೇಕಾಗಿದೆ. ಇಂದು ಮುಂದುವರೆದ ರಾಷ್ಟ್ರಗಳಲ್ಲಿ ಆರ್ಥಿಕ ಅಭದ್ರತೆ ಕಾಣುತ್ತಿದೆ. ಆದರೆ ಭಾರತದಲ್ಲಿ ಉತ್ತಮ ಆರ್ಥಿಕತೆ, ಸ್ವಾವಲಂಬಿ ಮತ್ತು ಸ್ವರಾಜ್ ಪರಿಕಲ್ಪನೆಗಳ ಮೂಲಕ ನಾಯಕತ್ವ ಗುಣಗಳು ಹೆಚ್ಚಾಗಿದೆ. ಇದರಿಂದಾಗಿ ಇತರೆ ರಾಷ್ಟ್ರಗಳಿಗೆ ನಾವು ಮಾದರಿಯಾಗಿದ್ದೇವೆ ಎಂದರು.

ಗೋಷ್ಠಿಯಲ್ಲಿ ಮಾಜಿ ಶಾಸಕ ಹೆಚ್.ಸಿ.ಬಸವರಾಜು, ಬಿಜೆಪಿ ಪಕ್ಷದ ತಾಲೂಕು ಅಧ್ಯಕ್ಷ ಎಂ.ಎಂ.ರಾಜೇಗೌಡ, ಒಳಚರಂಡಿ ಮತ್ತು ನೀರು ಸರಬರಾಜು ನಿಗಮದ ರಾಜ್ಯ ನಿರ್ದೇಶಕ ಆರ್.ಟಿ.ಸತೀಶ್, ಮುಖಂಡರಾದ ಚಂದ್ರು, ಸೋಮಶೇಖರ್, ಪಿ.ಜೆ.ರವಿ, ಪುರಸಭೆ ಸದಸ್ಯೆ ನಳಿನಿಗೌಡ, ಕೆಡಿಪಿ ಸದಸ್ಯ ಜವರಪ್ಪ, ಟಿ.ರಮೇಶ್ ಹಾಜರಿದ್ದರು.

ಚಂದಗಾಲು ಗ್ರಾಪಂಗೆ ರಾಜಮ್ಮ ಅಧ್ಯಕ್ಷೆ



ಹೆಬ್ಬಾಳು, ಮಾ.2– ಇಲ್ಲಿನ ಚಂದಗಾಲು ಗ್ರಾಪಂ ಅಧ್ಯಕ್ಷರಾಗಿ ರಾಜಮ್ಮ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಅಧ್ಯಕ್ಷ ಸುರೇಶ್ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ರಾಜಮ್ಮ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಲೋಕೋಪಯೋಗಿ ಇಲಾಖೆ ಎಇಇ ವಿಜಯಕುಮಾರ್ ಪ್ರಕಟಿಸಿದರು. ಚುನಾವಣಾ ಸಭೆಯಲ್ಲಿ ಉಪಾಧ್ಯಕ್ಷೆ ಮೀನಾಕ್ಷಿ, ಸದಸ್ಯರಾದ ನೇತ್ರಾವತಿ, ಮಹದೇವ್, ಹೆಚ್.ಎಸ್.ಮಲ್ಲೇಶ್, ಕೆ.ಎಸ್.ನಿಶಾಂತ್, ಸೌಮ್ಯ, ಎಸ್.ರವಿ, ಮಣಿಯಮ್ಮ, ರಾಘವೇಂದ್ರ, ಭಾಗ್ಯ ಹಾಜರಿದ್ದರು.

ನೂತನ ಅಧ್ಯಕ್ಷರನ್ನು ಮುಖಂಡರಾದ ಶಿವಣ್ಣ, ಉಮೇಶ್, ಶ್ರೀನಿವಾಸ್, ಮಂಜುನಾಥ್, ಕೃಷ್ಣೇಗೌಡ, ಸತೀಶ್, ದ್ವಾರಕೀಶ್, ನರಸಿಂಹರಾಜು, ಶಿವಕುಮಾರ್, ಅಮೃತ್, ಹರೀಶ್, ಹೇಮಂತ್, ಪ್ರಕಾಶ್, ಯೋಗೀಶ್, ಅಭಿಷೇಕ್ ಮತ್ತಿತರರು ಅಭಿನಂದಿಸಿದರು.



ಮೈಸೂರಿನ ಮಂಚೇಗೌಡನ ಕೊಪ್ಪಲಿನಲ್ಲಿರುವ ಕರ್ನಾಟಕ ಪಬ್ಲಿಕ್ ಶಾಲೆ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಬೆಂಗಳೂರಿನ ಯಸ್ಕಾವ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಶಾಲೆಗೆ ಅಗತ್ಯವಿರುವ ಸ್ಮಾರ್ಟ್ ಬೋರ್ಡ್, ಎರಡು ಅಲ್ಮೆರಾ ಮತ್ತು ಬೆಂಚುಗಳನ್ನು ಕೊಡುಗೆ ನೀಡಿತು. ಈ ವೇಳೆ ಯಸ್ಕಾವ ಸಂಸ್ಥೆ ಪ್ರಧಾನ ವ್ಯವಸ್ಥಾಪಕ ಭವಾನಿ ಶಂಕರ್, ಮ್ಯಾನೇಜರ್‌ಗಳಾದ ರಾಜೇಶ್, ಗುರುಪ್ರಸಾದ್, ರಾಜೇಂದ್ರ, ಮುಖ್ಯಶಿಕ್ಷಕಿ ಭಾಗ್ಯಲಕ್ಷ್ಮಿ ಹಾಗೂ ಶಿಕ್ಷಕರಾದ ವೆಂಕಟರಾಮಯ್ಯ, ಅನಿಲ್ ಸೇರಿದಂತೆ ಶಾಲೆಯ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

ಈ ಬಾರಿ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವಿಗೆ ಶ್ರಮಿಸುತ್ತೇವೆ



ತಿ.ನರಸೀಪುರ, ಮಾ.2– ಮುಂಬರುವ ಚುನಾವಣೆಯಲ್ಲಿ ತಿ.ನರಸೀಪುರ ಕ್ಷೇತ್ರದಿಂದ ಮಾಜಿ ಸಚಿವ ಹೆಚ್.ಸಿ.ಮಹದೇವಪ್ಪ ಹಾಗೂ ಅವರ ಪುತ್ರ ಸುನೀಲ್ ಬೋಸ್ ಇಬ್ಬರಲ್ಲಿ ಯಾರೇ ಸ್ಪರ್ಧಿಸಿದರೂ, ಅವರ ಗೆಲುವಿಗೆ ಶ್ರಮಿಸಲಾಗುವುದು ಎಂದು ತಾಲೂಕಿನ ಮೂಗೂರು ಹೋಬಳಿ ಮುಖಂಡರು ಹಾಗೂ ಕಾರ್ಯಕರ್ತರು ತಿಳಿಸಿದರು.

ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಬ್ಲಾಕ್ ಅಧ್ಯಕ್ಷ ಎಂ.ಡಿ.ಬಸವರಾಜು ಅಧ್ಯಕ್ಷತೆಯಲ್ಲಿ ಸಭೆ ನಡೆಸಿದ ಮೂಗೂರು ಹೋಬಳಿ ಕಾರ್ಯಕರ್ತರು ಹಾಗೂ ಮುಖಂಡರು ಕಳೆದ ಚುನಾವಣೆ ಸೋಲಿನಿಂದ ಕಂಗೆಟ್ಟು, ಮನೆಯಲ್ಲಿ ಕೂತಿದ್ದು ಸಾಕು. ಮಾರ್ಚ್‌ನಲ್ಲಿ ಚುನಾವಣೆ ಘೋಷಣೆ ಸಾಧ್ಯತೆ ಇರುವುದರಿಂದ ಈಗಿನಿಂದಲೇ ಮತದಾರರ ಮನವೊಲಿಕೆಗೆ ಕಸರತ್ತು ನಡೆಸುವ ನಿರ್ಧಾರ ತೆಗೆದುಕೊಂಡರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ಮಾತನಾಡಿ, ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬರುವುದರಿಂದ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿ ಗೆಲ್ಲಿಸಲು ಕಾರ್ಯತಂತ್ರ ರೂಪಿಸಲು ಹಾಗೂ ಸಂಘಟನೆ ಮತ್ತಷ್ಟು ಚುರುಕುಗೊಳಿಸಲು, ನಿಮ್ಮೆಲ್ಲರ ಸಲಹೆ ಸಹಕಾರ ಪಡೆಯಲು ಸಭೆ ಕರೆಯಲಾಗಿದೆ. ನಾನು ಸೇರಿದಂತೆ ಕಾರ್ಯಕರ್ತರು ಮತ್ತು ಮುಖಂಡರು ವೈಯಕ್ತಿಕ ಪ್ರತಿಷ್ಠೆ ಹಾಗೂ ಯಾವುದೇ ಭಿನ್ನಾಭಿಪ್ರಾಯವಿದ್ದರೂ ಎಲ್ಲವನ್ನು ಬದಿಗಿಟ್ಟು ಪಕ್ಷದ ಗೆಲುವಿಗೆ ಕೈ ಜೋಡಿಸಬೇಕು ಎಂದು ಮನವಿ ಮಾಡಿದರು.

ತಾಪಂ ಮಾಜಿ ಅಧ್ಯಕ್ಷ ಹೆಚ್.ಎನ್.ಉಮೇಶ್ ಮಾತನಾಡಿ, ಪ್ರಸಕ್ತ ಚುನಾವಣೆಯಲ್ಲಿ ಪಕ್ಷದ ಗೆಲುವೇ ಮುಖ್ಯ. ಯುವ ಮುಖಂಡ ಸುನೀಲ್ ಬೋಸ್ ಅಭ್ಯರ್ಥಿಯಾದರೆ ಮಾಜಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮಾರ್ಗದರ್ಶನದಲ್ಲಿ ಕ್ಷೇತ್ರದ ಅಭಿವೃದ್ಧಿಗೆ ದುಡಿಯಲಿದ್ದಾರೆ. ಎಲ್ಲಾ ವಿಧದಲ್ಲೂ ಸ್ಪಂದಿಸುವ ಹೃದಯವಂತಿಕೆ ಅವರಲ್ಲಿ ಇರುವುದರಿಂದ ಅಪ್ಪ ಅಥವಾ ಮಗ ಎಂಬ ತಾತ್ಸಾರ ಮಾಡದೆ ಪಕ್ಷದ ಗೆಲುವಿಗೆ ಶ್ರಮಿಸಬೇಕು. ಮೂಗೂರು ಹೋಬಳಿಯಲ್ಲಿ ಕಳೆದ ಚುನಾವಣೆಗಿಂತಲೂ ಹೆಚ್ಚಿನ ಮತಗಳನ್ನು ಕೊಡಿಸಲು ಈಗಿಂದಲೇ ಕಾರ್ಯೋನ್ಮುಖರಾಗೋಣ ಎಂದು ಕರೆ ನೀಡಿದರು.

ಎಪಿಎಂಸಿ ಮಾಜಿ ಅಧ್ಯಕ್ಷ ಚೌಹಳ್ಳಿ ಮಹದೇವಪ್ಪ ಹಾಗೂ ಕಾಡಾ ಮಾಜಿ ನಿರ್ದೇಶಕ ಹಿರಿಯೂರು ವೀರೇಂದ್ರ ಮಾತನಾಡಿದರು. ಕೆಲವು ಕಾರ್ಯಕರ್ತರು ಪಕ್ಷದ ಸಂಘಟನೆಯಲ್ಲಿ ಜವಾಬ್ದಾರಿ ನೀಡದಿರುವ ಬಗ್ಗೆಯೂ ಅಸಮಾಧಾನ ವ್ಯಕ್ತಪಡಿಸಿದರು.

ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಎಂ.ಎಸ್.ಶಿವಮೂರ್ತಿ, ಡೈರಿ ಅಧ್ಯಕ್ಷ ಎಂ.ಎಂ.ಬಸವಣ್ಣ, ಪಿಎಸಿಎಸ್ ಮಾಜಿ ಅಧ್ಯಕ್ಷರಾದ ಎ.ಬಿ.ಮಂಜುನಾಥ್, ಎಂ.ನಾಗರಾಜು, ಡೈರಿ ಕಾರ್ಯದರ್ಶಿ ಎಂ.ನಾಗೇಂದ್ರ, ಕುರುಬರ ಸಂಘದ ಪ್ರಧಾನ ಕಾರ್ಯದರ್ಶಿ ಕೊತ್ತೇಗಾಲ ಬಸವರಾಜು, ತಾಪಂ ಮಾಜಿ ಸದಸ್ಯ ಮಹದೇವಯ್ಯ, ಗ್ರಾಪಂ ಮಾಜಿ ಅಧ್ಯಕ್ಷ ವಾಟಾಳು ನಾಗೇಶ, ಮಾಜಿ ಉಪಾಧ್ಯಕ್ಷ ಕಿರಣ್, ಮಾಜಿ ಸದಸ್ಯ ಎಂ.ಬಿ.ಸಾಗರ್, ಮುಖಂಡರಾದ ಮಾರ್ಕೆಟ್ ನಾಗರಾಜ, ದೇವಾನಂದ, ಸಿದ್ದು, ದಿಲೀಪ, ಮೊಬೈಲ್ ರಘು, ನಾಗಶೆಟ್ಟಿ, ಎಂ.ರಂಗರಾಮು, ಮಾಡ್ರಳ್ಳಿ ಮರಿಸ್ವಾಮಿ ಇನ್ನಿತರರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

ಸ್ಕ್ರೀನ್ 1	ಕಾಸಿನ ಸರ (ಕ): ಬೆ.10.25ಕ್ಕೆ, ಭಗೀರ (ತ): ಮ.1.25ಕ್ಕೆ, ಆಂಟ್ ಮ್ಯಾನ್ ಅಂಡ್ ದಿ ವಾಸ್ಪ್ (3ಡಿ)(ಇಂ): ಸಂ.4.20ಕ್ಕೆ, 19 20 21 (ಕ): ರಾ.7ಕ್ಕೆ, ರಾ.9.55ಕ್ಕೆ.
ಸ್ಕ್ರೀನ್ 2	ಪ್ರಜಾರಾಜ್ಯ (ಕ): ಬೆ.10.20ಕ್ಕೆ, ಹೊಂದಿಸಿ ಬರೆಯಿರಿ (ಕ): ಮ.1.10ಕ್ಕೆ, ದೂರದರ್ಶನ (ಕ): ಸಂ.4.10ಕ್ಕೆ, ಲವ್‌ಬರ್ಡ್ಸ್ (ಕ): ರಾ.7.10ಕ್ಕೆ, ಕಡಲ ತೀರದ ಭಾರ್ಗವ (ಕ): ರಾ.9.55ಕ್ಕೆ.
ಸ್ಕ್ರೀನ್ 3	ರೋಮಾಂಚಂ (ಮ): ಬೆ.10.50ಕ್ಕೆ, ವಾತಿ (ತ): ಮ.1.25ಕ್ಕೆ, ಅಂಬಾಸಿಡರ್ (ಕ): ಸಂ.4.10ಕ್ಕೆ, ಓ ಮೈ ಡಾರ್ಲಿಂಗ್ (ಮ): ರಾ.7ಕ್ಕೆ, ಪಾಕಲ ಪಾತಿರವುಮ್ (ಮ): ರಾ.9.50ಕ್ಕೆ.
ಸ್ಕ್ರೀನ್ 4	ಕ್ರಿಡ್ 3 (ಇಂ): ಬೆ.11ಕ್ಕೆ, ರಾ.7.10ಕ್ಕೆ, ರಾ.9.45ಕ್ಕೆ, ಕಿಡುಗು (ತ): ಮ.1.45ಕ್ಕೆ, ಪಠಾಣ್ (ಹಿಂ): ಸಂ.4.15ಕ್ಕೆ.

ಐನಾಕ್ಸ್ ಮೂವೀಸ್

INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಆಂಟ್ ಮ್ಯಾನ್ ಅಂಡ್ ದಿ ವಾಸ್ಪ್ (3ಡಿ)(ಇಂ): ಮ.12.35ಕ್ಕೆ, ಸಂ.6.20ಕ್ಕೆ, ರಾ.9.10ಕ್ಕೆ, ಲವ್ ಬರ್ಡ್ಸ್ (ಕ): ಮ.3.15ಕ್ಕೆ.
ಸ್ಕ್ರೀನ್ 2	ಕ್ರಿಡ್ 3 (ಇಂ): ಬೆ.11ಕ್ಕೆ, ಸಂ.4.20ಕ್ಕೆ, ಸಂ.6.55ಕ್ಕೆ, ರಾ.9.30ಕ್ಕೆ, ಲವ್ ಬರ್ಡ್ಸ್ (ಕ): ಮ.1.35ಕ್ಕೆ.
ಸ್ಕ್ರೀನ್ 3	ಸೆಲ್ಫಿ (ಹಿಂ): ಮ.12.05ಕ್ಕೆ, ದೂರದರ್ಶನ (ಕ): ಮ.3.05ಕ್ಕೆ, ಲವ್ ಬರ್ಡ್ಸ್ (ಕ): ಸಂ.6ಕ್ಕೆ, ರಾ.8.50ಕ್ಕೆ.
ಸ್ಕ್ರೀನ್ 4	ಪಠಾಣ್ (ಹಿಂ): ಮ.12.25ಕ್ಕೆ, ರಾ.9.20ಕ್ಕೆ, ಕಾಸಿನ ಸರ (ಕ): ಮ.3.25ಕ್ಕೆ, ಪ್ರಣಯ ವಿಲಾಸಂ (ಮ): ಸಂ.6.55ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

ಸ್ಕ್ರೀನ್ 1	ಕ್ರಾಂತಿ (ಕ): ಬೆ.7.30ಕ್ಕೆ, ಮ.1.45ಕ್ಕೆ, ರಾ.9ಕ್ಕೆ.
ಸ್ಕ್ರೀನ್ 2	ಕ್ರಾಂತಿ (ಕ): ಬೆ.6.45ಕ್ಕೆ, ಬೆ.9.55ಕ್ಕೆ, ಮ.1ಕ್ಕೆ, ಸಂ.4.05ಕ್ಕೆ, ರಾ.7.10ಕ್ಕೆ, ರಾ.10.15ಕ್ಕೆ.
ಸ್ಕ್ರೀನ್ 3	ಕ್ರಾಂತಿ (ಕ): ಬೆ.7ಕ್ಕೆ, ಬೆ.10.05ಕ್ಕೆ, ಮ.1.10ಕ್ಕೆ, ಸಂ.4.15ಕ್ಕೆ, ರಾ.10.15ಕ್ಕೆ, ಪಠಾಣ್ (ಹಿಂ): ರಾ.7.20ಕ್ಕೆ.
ಸ್ಕ್ರೀನ್ 4	ಕ್ರಾಂತಿ (ಕ): ಬೆ.7.10ಕ್ಕೆ, ಸಂ.6.50ಕ್ಕೆ, ಪಠಾಣ್ (ಹಿಂ): ಬೆ.10.15ಕ್ಕೆ, ಮ.1.15ಕ್ಕೆ, ರಾ.9.55ಕ್ಕೆ, ಗಾಂಧಿ ಗೋಡ್ಸೆ ಏಕ್ ಯುದ್ಧ್ (ಹಿಂ): ಸಂ.4ಕ್ಕೆ.

ಪಿವಿಆರ್ ಸಿನಿಮಾಸ್

PVR CINEMAS

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಕ್ರಾಂತಿ (ಕ): ಬೆ.11.45ಕ್ಕೆ, ಮ.3.10ಕ್ಕೆ, ಸಂ.6.35ಕ್ಕೆ, ರಾ.10ಕ್ಕೆ, ಪಠಾಣ್ (ಹಿಂ): ಬೆ.9.30ಕ್ಕೆ, ಬೆ.11.05ಕ್ಕೆ, ಮ.12.45ಕ್ಕೆ, ಮ.2.20ಕ್ಕೆ, ಸಂ.4ಕ್ಕೆ, ರಾ.7.15ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಧಮನ್ (ಹಿಂ): ಸಂ.4.10ಕ್ಕೆ, ಅವತಾರ್: ದಿ ವೇ ಆಫ್ ವಾಟರ್ (3ಡಿ)(ಇಂ): ಸಂ.5.35ಕ್ಕೆ, ಬಿಟಿಎಸ್ (ಕೊ): ಮ.1.45ಕ್ಕೆ, ಸಂ.6.50ಕ್ಕೆ, ದಿ ವುಮನ್ ಕಿಂಗ್ (ಇಂ): ಬೆ.10ಕ್ಕೆ, ಮ.3.55ಕ್ಕೆ, ರಾ.9.50ಕ್ಕೆ, ನಾಕ್ ಅಟ್ ದಿ ಕ್ಯಾಬಿನ್ (ಇಂ): ಮ.2.10ಕ್ಕೆ, ರಾ.7.50ಕ್ಕೆ, ರನ್ ಬೇಬಿ ರನ್ (ತ): ಮ.1ಕ್ಕೆ, ಸಂ.6.55ಕ್ಕೆ, ಮೈಕೆಲ್ (ತ): ಸಂ.4.35ಕ್ಕೆ, ರೈಟರ್ ಪದ್ಮಭೂಷಣ್ (ತೆ): ರಾ.9.15ಕ್ಕೆ, ಮೈಕೆಲ್ (ತೆ): ರಾ.10.55ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ತುನಿವು (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಹೊಟ್ಟೆಪಾಡು (ಕ) 2 ಪ್ರದರ್ಶನಗಳು, ಹೊಂದಿಸಿ ಬರೆಯಿರಿ (ಕ)	2 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಡೇ ಅಂಡ್ ಸಮ್ಮರ್ (ತೆ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸೆಲ್ಫೀ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ವರಿಸು (ತ)	4 ಪ್ರದರ್ಶನಗಳು
ಗಾಯಿತ್ರಿ	
ಸೌತ್ ಇಂಡಿಯನ್ ಹೀರೋ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ಭಗೀರ (ತ)	4 ಪ್ರದರ್ಶನಗಳು
ಸಂಗಂ	
ಪ್ರಜಾರಾಜ್ಯ (ಕ)	4 ಪ್ರದರ್ಶನಗಳು
ಲಿಡೋ	
ಕ್ರಾಂತಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಅಮಿಗೋಶ್ (ತೆ)	4 ಪ್ರದರ್ಶನಗಳು
ಪ್ರಭಾ	
ಅಂಬಾಸಡರ್ (ಕ)	4 ಪ್ರದರ್ಶನಗಳು

ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ದೇವಾಲಯದ ಗೋಲಕದಲ್ಲಿ 3.98 ಲಕ್ಷ ರೂ. ಸಂಗ್ರಹ

ಪಿರಿಯಾಪಟ್ಟಣ, ಮಾ.2– ತಾಲೂಕಿನ ಬೆಟ್ಟದಪುರದಲ್ಲಿ ಎರಡು ದಿನಗಳ ಕಾಲ ನಡೆದ ಇತಿಹಾಸ ಪ್ರಸಿದ್ಧ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಜಾತ್ರಾ ಮಹೋತ್ಸವದ ಗೋಲಕದಲ್ಲಿ 3.98 ಲಕ್ಷ ರೂ. ಸಂಗ್ರಹವಾಗಿದೆ.

ದೇವಸ್ಥಾನದಲ್ಲಿ ಇಡಲಾಗಿದ್ದ ಗೋಲಕವನ್ನು ತೆರೆದು ಎಣಿಕೆ ಮಾಡಲಾಗಿ ಸುಮಾರು 3 ಲಕ್ಷ 98 ಸಾವಿರ ರೂ.ಗಳು ಸಂಗ್ರಹವಾಗಿದ್ದು, ಇದೇ ಪ್ರಥಮ ಬಾರಿಗೆ ಇಷ್ಟು ಹಣ ಸಂಗ್ರಹವಾಗಿದೆ ಎಂದು ಉಪ ತಹಸೀಲ್ದಾರ್ ಶಶಿಧರ್ ತಿಳಿಸಿದ್ದಾರೆ.

ಎಣಿಕೆ ಕಾರ್ಯದಲ್ಲಿ ಬೆಟ್ಟದಪುರ ವ್ಯಾಪ್ತಿಯ ಗ್ರಾಮ ಲೆಕ್ಕಿಗರ ಸಹಾಯಕರ ತಂಡ ಭಾಗವಹಿಸಿತ್ತು. ಈ ಸಂದರ್ಭದಲ್ಲಿ ಪ್ರಧಾನ ಅರ್ಚಕ ಸತೀಶ್ ಕಶ್ಯಪ್, ಮುಖಂಡರಾದ ಪಟೇಲ್, ನಟೇಶ್ ಹಾಗೂ ಇತರರು ಹಾಜರಿದ್ದರು.

ಕೋಟೆಯಲ್ಲಿ ಮಾಜಿ ಶಾಸಕ ಚಿಕ್ಕಣ್ಣ ಹುಟ್ಟುಹಬ್ಬ ಅದ್ದೂರಿ ಆಚರಣೆ

● ಚಿಕ್ಕದೇವಮ್ಮನ ಬೆಟ್ಟದಲ್ಲಿ ವಿಶೇಷ ಪೂಜೆ ● ಸೇಬು, ಕಿತ್ತಳೆ, ಮೊಸಂಬಿ ಹಾರ ಹಾಕಿ ಕಾರ್ಯಕರ್ತರ ಅಭಿನಂದನೆ



ಹೆಚ್.ಡಿ.ಕೋಟೆ, ಮಾ.2– ಪಟ್ಟಣದ ಕೃಷ್ಣಾಪುರ ಸರ್ಕಲ್ ಬಳಿ ಚಿಕ್ಕಣ್ಣ ಅಭಿಮಾನಿ ಬಳಗ, ತಾಲೂಕು ಜೆಡಿಎಸ್ ಮುಖಂಡರು ಹಾಗೂ ಕಾರ್ಯಕರ್ತರು ಮಾಜಿ ಶಾಸಕ ಚಿಕ್ಕಣ್ಣ ಅವರ 79ನೇ ಹುಟ್ಟುಹಬ್ಬವನ್ನು ಗುರುವಾರ ಅದ್ದೂರಿಯಾಗಿ ಆಚರಿಸಿದರು.

ಮುಂಜಾನೆಯೇ ತಾಲೂಕಿನ ಶಕ್ತಿದೇವತೆ ಚಿಕ್ಕದೇವಮ್ಮ ಬೆಟ್ಟಕ್ಕೆ ಪತ್ನಿ ಮಾದೇವಮ್ಮ, ಪುತ್ರ ಜಯಪ್ರಕಾಶ್ ಚಿಕ್ಕಣ್ಣ ಸೇರಿದಂತೆ ಕುಟುಂಬದ ಸದಸ್ಯರೊಂದಿಗೆ ತೆರಳಿದ ಮಾಜಿ ಶಾಸಕ ಚಿಕ್ಕಣ್ಣ, ಚಿಕ್ಕದೇವಮ್ಮನಿಗೆ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಮಹದೇವ್ ಹಾಗೂ ಅಶ್ವಿನ್ ಕುಮಾರ್ ಉಪಸ್ಥಿತರಿದ್ದು, ದೇವಾಲಯದಲ್ಲಿ ಚಿಕ್ಕಣ್ಣ ಅವರಿಂದ ಕೇಕ್ ಕತ್ತರಿಸಿ ಹುಟ್ಟು ಹಬ್ಬದ ಶುಭಾಶಯ ಕೋರಿದರು.

ದೇವಾಲಯದಿಂದ ಹೊರಟ ಮಾಜಿ ಶಾಸಕರಿಗೆ ಸರಗೂರು ಸೇರಿದಂತೆ ದಾರಿಯುದ್ದಕ್ಕೂ ಜೆಡಿಎಸ್ ಕಾರ್ಯಕರ್ತರು ಹಾರ ಹಾಕಿ ಅಭಿನಂದಿಸಿದರು. ಬಳಿಕ ಕೋಟೆಯ ಗದ್ದಿಗೆ ವೃತ್ತದಲ್ಲಿ ಜಮಾಯಿಸಿದ್ದ ಸಾವಿರಾರು ಜೆಡಿಎಸ್ ಕಾರ್ಯಕರ್ತರು ಹಾಗೂ ಅಭಿಮಾನಿಗಳು ವಿವಿಧ ಜಾನಪದ ಕಲಾತಂಡಗಳೊಂದಿಗೆ ತೆರೆದ ವಾಹನದಲ್ಲಿ ಮಾಜಿ ಶಾಸಕ ಚಿಕ್ಕಣ್ಣ, ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಮಹದೇವ್ ಅವರನ್ನು ವೇದಿಕೆವರೆಗೆ ಅದ್ದೂರಿ ಮೆರವಣಿಗೆ ಮಾಡಿದರು. ಈ ವೇಳೆ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದ ಬಳಿ ಜೆಸಿಬಿ ಮೂಲಕ ಭಾರೀ ಗಾತ್ರದ ಮೊಸಂಬಿ, ಸೇಬು, ಕಿತ್ತಳೆ ಹಾರ ಹಾಕಿ ಅಭಿನಂದಿಸಿದರು. ಅಲ್ಲದೇ ಈ ವೇಳೆ ಕಾರ್ಯಕರ್ತರು ಪಟಾಕಿ ಸಿಡಿಸಿ, ಪುಷ್ಪವೃಷ್ಟಿಗೈದು ಸಂಭ್ರಮಾಚರಣೆ ನಡೆಸಿದರು.

ನಂತರ ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಮಾತನಾಡಿದ ಮಾಜಿ ಶಾಸಕ ಚಿಕ್ಕಣ್ಣ, ನಾನು ಜಿ.ಟಿ.ದೇವೇಗೌಡರ ಆಶೀರ್ವಾದದಿಂದ 1987ರಲ್ಲಿ ಜಿಪಂ ಸದಸ್ಯನಾಗದಿದ್ದರೇ, ಈ ಸ್ಥಾನದಲ್ಲಿ ಇರುತ್ತಿರಲಿಲ್ಲ. ಜಿ.ಟಿ.ದೇವೇಗೌಡರು ಬಿಜೆಪಿಗೆ ಹೋದಾಗ ನಮಗೆ ಜಿಲ್ಲೆಯಲ್ಲಿ ಅಸ್ತಿತ್ವವೇ ಇಲ್ಲವಾಗಿತ್ತು. ಅವರು ಮರಳಿ ನಮ್ಮ ಪಕ್ಷಕ್ಕೆ ಬಂದಾಗ ನಮಗೆ ಆನೆ ಬಲ ಬಂದಂತಾಯಿತು. ಜಿಟಿಡಿ, ಕಾರ್ಯಕರ್ತರು ನನ್ನ ಮೇಲಿಟ್ಟಿರುವ ಪ್ರೀತಿ, ಅಭಿಮಾನವನ್ನು ನನ್ನ ಮಗ ಜಯಪ್ರಕಾಶ್ ಮೇಲೆಯೂ ಇಡಬೇಕು ಎಂದರು.

ಶಾಸಕ ಜಿ.ಟಿ.ದೇವೇಗೌಡ ಮಾತನಾಡಿ, ಮಾಜಿ ಶಾಸಕ ಚಿಕ್ಕಣ್ಣ ಅವರ ಕೊನೆ ಆಸೆ ತಮ್ಮ ಮಗ ಜಯಪ್ರಕಾಶ್ ಅವರನ್ನು ಶಾಸಕರನ್ನಾಗಿ ಮಾಡುವುದಾಗಿದ್ದು, ಹೆಚ್.ಡಿ.ದೇವೇಗೌಡರ ಕೊನೆ ಆಸೆ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಮತ್ತೊಮ್ಮೆ ಮುಖ್ಯಮಂತ್ರಿ ಮಾಡುವುದಾಗಿದೆ ಎಂದರು.

ರಾಜ್ಯದ ಜನತೆ ಹಾಗೂ ರೈತರ ಹಿತಕ್ಕಾಗಿ ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ಅವರು ಪಂಚರತ್ನಯಾತ್ರೆ ರೂಪಿಸಿದ್ದು, ಮುಂಬರುವ ದಿನಗಳಲ್ಲಿ ಯಾತ್ರೆ ತಾಲೂಕಿಗೆ ಆಗಮಿಸಲಿದೆ. ಜೆಡಿಎಸ್ ಮುಖಂಡರು, ಕಾರ್ಯಕರ್ತರು ಆತ್ಮೀಯವಾಗಿ ಬರಮಾಡಿಕೊಳ್ಳಬೇಕು ಎಂದರು.

> **6** ಕೋಟೆಯಲ್ಲಿ ಜೆಡಿಎಸ್ ಅಸ್ತಿತ್ವವೇ ಇಲ್ಲದ ವೇಳೆ ತಾಲೂಕಿನ ಜನತೆ ಪಕ್ಷದ ಎಂ.ಪಿ.ವೆಂಕಟೇಶ್ ಅವರನ್ನು ಗೆಲ್ಲಿಸಿ ಪಕ್ಷಕ್ಕೆ ಅಸ್ತಿತ್ವ ನೀಡಿದ್ದನ್ನು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಮರೆಯುವುದಿಲ್ಲ. ಈ ಬಾರಿಯ ಚುನಾವಣೆಯಲ್ಲಿ ಕೋಟೆ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಲು ನಾನು ಸೇರಿದಂತೆ ಮೈಸೂರು ಭಾಗದ ಜೆಡಿಎಸ್ ಶಾಸಕರು ಚಿಕ್ಕಣ್ಣ ಅವರ ಪುತ್ರ ಜಯಪ್ರಕಾಶ್ ಅವರನ್ನೇ ಸೂಚಿಸಿದ್ದು, ಇನ್ನು 15 ದಿನದಲ್ಲಿ ಅವರ ಹೆಸರು ಘೋಷಣೆಯಾಗಲಿದೆ. **–ಜಿ.ಟಿ.ದೇವೇಗೌಡ, ಶಾಸಕ.**

ಹುಟ್ಟುಹಬ್ಬಕ್ಕೆ ಆಗಮಿಸಿದ್ದ ಸಾವಿರಾರು ಮಂದಿಗೆ ಹೋಳಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಇದೇ ವೇಳೆ ಕುರುಬ ಸಮಾಜದ ಮುಖಂಡರು, ಚಿಕ್ಕಣ್ಣ ಅವರಿಗೆ ಕರಿ ಕಂಬಳಿ ಹೊದಿಸಿ, ಕುರಿ ಉಡುಗೊರೆ ನೀಡುವ ಮೂಲಕ ಹುಟ್ಟುಹಬ್ಬದ ಶುಭಾಶಯ ಕೋರಿದರು. ಅಲ್ಲದೇ ಕಾರ್ಯಕ್ರಮದಲ್ಲಿ ಜೆಡಿಎಸ್ ಮುಖಂಡರು, ಕಾರ್ಯಕರ್ತರು ಹಾಗೂ ಅಭಿಮಾನಿಗಳು ಬೃಹತ್ ಗಾತ್ರದ ಕೇಕ್ ಕತ್ತರಿಸುವ ಮೂಲಕ ಚಿಕ್ಕಣ್ಣ ಅವರಿಗೆ ಹುಟ್ಟುಹಬ್ಬದ ಶುಭ ಕೋರಿದರು.

ಈ ವೇಳೆ ಜೆಡಿಎಸ್ ಜಿಲ್ಲಾಧ್ಯಕ್ಷ ನರಸಿಂಹಸ್ವಾಮಿ, ಜಿಪಂ ಮಾಜಿ ಅಧ್ಯಕ್ಷೆ ನಹಿಮಾ ಸುಲ್ತಾನ್, ಸದಸ್ಯ ಎಂ.ಪಿ.ನಾಗರಾಜು, ಕೋಟೆ ಸರಗೂರು ತಾಲೂಕು ಜೆಡಿಎಸ್ ಅಧ್ಯಕ್ಷರಾದ ರಾಜೇಂದ್ರ, ಗೋಪಾಲಸ್ವಾಮಿ, ಪುರಸಭಾಧ್ಯಕ್ಷೆ ಅನಿತಾ, ಮಾಜಿ ಉಪಾಧ್ಯಕ್ಷೆ ಶಿವಮ್ಮ, ಮಹಿಳಾ ಅಧ್ಯಕ್ಷೆ ಗಾಯತ್ರಿ, ತಾಲೂಕು ನಾಯಕ ಸಂಘದ ಅಧ್ಯಕ್ಷ ದೊಡ್ಡನಾಯಕ, ಮುಖಂಡರಾದ ನರಸಿಂಹಗೌಡ, ಹೆಚ್.ಸಿ.ಶಿವಣ್ಣ, ಶಫಿ, ಶಾಂತ, ಮುತ್ತಣ್ಣ, ರಾಜೇಗೌಡ, ವೆಂಕಟೇಶ್, ಯಶವಂತ್, ನಾಗನಾಯಕ, ಕೃಷ್ಣ, ಮಹೇಂದ್ರ, ಯೋಗ ನರಸಿಂಹೇಗೌಡ, ಕಾರ್ಯಕರ್ತರು ಮುಖಂಡರು ಇದ್ದರು.

ಲೋಕಾಯುಕ್ತ ಬಲೆಗೆ ದ್ವಿತೀಯ ದರ್ಜೆ ಸಹಾಯಕ

ತಿ.ನರಸೀಪುರ, ಮಾ.2– ಲಂಚ ಪಡೆಯುತ್ತಿದ್ದ ವೇಳೆ ಪಟ್ಟಣದ ತಹಸೀಲ್ದಾರ್ ಕಚೇರಿ ದ್ವಿತೀಯ ದರ್ಜೆ ಸಹಾಯಕ ಲೋಕಾಯುಕ್ತ ಬಲೆಗೆ ಬಿದ್ದಿದ್ದಾನೆ.

ಕಂದಾಯ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ವೇಣುಗೋಪಾಲ್ ಲೋಕಾಯುಕ್ತ ಬಲೆಗೆ ಬಿದ್ದವನು. ಈತ ನಿವೇಶನದ ಅನ್ಯಕ್ರಾಂತ ಮಾಡಿಕೊಡಲು ಪಟ್ಟಣದ ನಿವಾಸಿ ಲಿಂಗರಾಜು ಅವರಿಗೆ 10 ಸಾವಿರ ರೂ. ಲಂಚ ನೀಡುವಂತೆ ಬೇಡಿಕೆ ಇಟ್ಟಿದ್ದ. ಈ ಸಂಬಂಧ ಲಿಂಗರಾಜು ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಅದರಂತೆ ಇಂದು ಕಚೇರಿಯಲ್ಲಿ ಲಂಚ ಪಡೆಯುತ್ತಿದ್ದ ವೇಳೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ ವೇಣುಗೋಪಾಲ್‌ನನ್ನು ವಶಕ್ಕೆ ಪಡೆದಿದ್ದಾರೆ. ಲೋಕಾಯುಕ್ತ ಡಿವೈಎಸ್ಪಿ ಕೃಷ್ಣಯ್ಯ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಮೈಸೂರು ಇನ್ಸ್‌ಪೆಕ್ಟರ್ ಜಯರತ್ನ, ಮಡಿಕೇರಿ ಇನ್ಸ್‌ಪೆಕ್ಟರ್ ಲೋಕೇಶ್, ಸಿಬ್ಬಂದಿ ಗೋಪಿ, ರಮೇಶ್, ಲೋಕೇಶ್, ಮಂಜುನಾಥ್, ಪ್ರಕಾಶ್, ಸಲಾವುದ್ದೀನ್, ಲೋಹಿತ್, ಪ್ರವೀಣ್ ಕುಮಾರ್, ಶಶಿಕುಮಾರ್, ಚಾಲಕರಾದ ನಾಗೇಂದ್ರ, ಲೋಕೇಶ್ ಇದ್ದರು.

ಮೈಸೂರು ಮಿತ್ರ

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸ ಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತು ದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು